SRI A. LAKSHMI SAGAR (Minister for Law, Parly, Affairs and Housing).— Sir, On behalf of Sri B. Rachaih (Minister for Education).—I beg to move.

"That the time fixed for the presentation of the Report of the Joint Select Committee on the Karnataka Education Bill 1983 be extended upto the eighteenth day of October 1983."

MR. DEPUTY SPEAKER.— The question is:

"That the time fixed for the presentation of the Report of the Joint Select Committee on the Karnataka Education Bill 1983 be extended upto the eighteenth day of October 1983."

The Motion was Adopted

FINANCIAL BUSINESS

Discussion and voting on the following Demands for Grants for the year 1983-84.

Demand Nos. 31, 32

(Urban Development and Municipal Admnistration)

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಪೌರಾಡಳಿತ ಸಚಿವರು) — ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಹಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೩೯.೬೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೮,೨೯,೨೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳು ಮತ್ತು ಪಂಚಾಯಿತಿಗಳಿಗೆ ಅನುದಾನಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨.೩೮ ೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

Demand No. 26 (Tourisum & Information)

ಶ್ರೀ ಎಂ. ರಘುಪತಿ (ವಾರ್ತಾ, ಪ್ರಚಾರ ಮತ್ತು ಪ್ರವಾಸೋದ್ಯಮ ಸಚಿವರು).— ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೭,೨೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೩,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು.— ಎಲ್ಲ ಬೇಡಿಕೆಗಳು ಸಭೆಯ ಮುಂದಿವೆ.

†ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ)—ಮಾನ್ಯ ಉಪಾಧ್ಯಕ್ಷರೆ, ಈ ದಿವಸ ಸಭೆಯ ಮುಂದೆ ನಗರಾಭಿವೃದ್ಧಿ ಸಚಿವರು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅವುಗಳ ಬಗ್ಗೆ ಕೆಲವು ಸಲಹೆ ಸೂಚನೆಗಳನ್ನು ಕೊಡುತ್ತೇನೆ. ಈ ಫರ್‌ಫಾರ್ಮೆನ್ಸ್ ಬಜೆಟ್ ಏನಿದೆ ಇದನ್ನು ನೋಡಿದಾಗ ನನಗೆ ಬಹಳ ನಿರಾಸೆಯಾಗಿದೆ ಎಂಬ ಮಾತನ್ನು ಹೇಳಬೇಕಾಗಿದೆ. ಇವೊತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಪಟ್ಟಣ ಪ್ರದೇಶಗಳಲ್ಲಿರತಕ್ಕ ೧.೨೫ ಕೋಟಿ ಜನರ ಕ್ಷೇಮವನ್ನು ನೋಡತಕ್ಕ ಖಾತೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ತಾವಾಗಿದ್ದೀರಿ. ತಮ್ಮ ಮೇಲೆ ಸಾಕಷ್ಟು ಜವಾಬ್ದಾರಿ ಕೂಡ ಇದೆ.

(ಶ್ರೀ ರಾಮದೇವ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಏತಕ್ಕೆ ಈ ಮಾತನ್ನು ಒತ್ತಿ ಹೇಳುತ್ತಿದ್ದೇನೆಂದರೆ, ತಾವು ಕಾರ್ಪೊರೇಟರ್ ಆಗಿ ಕೆಲಸ ಮಾಡಿದ್ದೀರಿ. ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಬೆಂಗಳೂರು ನಗರ ಸಭೆಗೆ ಮತ್ತು ಇತರ ಸಂಸ್ಥೆಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ-ಸಹಕಾರಗಳನ್ನು ನೀಡಬೇಕೆಂದು ತಾವು ಸಲಹೆ ಕೊಟ್ಟಿದ್ದೀರಿ. ಇವತ್ತು ತಮಗೇ ಆ ಮಂತ್ರಿ ಸ್ಥಾನ ಸಿಕ್ಕಿದೆ. ನಾನು ಈಗಾಗಲೇ ಹೇಳಿದ ಹಾಗೆ ಪಟ್ಟಣ ಪ್ರದೇಶಗಳಲ್ಲಿ ಒಂದು ಕೋಟಿಗಿಂತ ಹೆಚ್ಚು ಜನರೇನಿದ್ದಾರೆ ಅವರ ದೈನಂದಿನ ಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸತಕ್ಕ ಕೆಲಸವನ್ನು ಹೊಸ ಸರ್ಕಾರ ಬಂದ ಮೇಲೆ ತಾತ್ವಿಕವಾಗಿ ಯಾವ ರೀತಿ ಆ ದಿಸೆಯಲ್ಲಿ ಪ್ರಯತ್ನ ಮಾಡಿದೆ ಎಂಬುದನ್ನು ಫರ್‌ಫಾರ್ಮೆನ್ಸ್ ಬಜೆಟ್ಟಿನಲ್ಲಿ ನೋಡಿದ್ದೇನೆ. ೧೯೮೦ರಿಂದ ೧೯೮೩ರವರೆಗೆ ಯಾವ ರೀತಿ ಕೆಲಸ ನಡೆದಿದೆ ಮತ್ತು ಈ ೮ ತಿಂಗಳ ಅವಧಿಯಲ್ಲಿ ಯಾವ ರೀತಿ ಕೆಲಸ ಮಾಡಬೇಕೆಂದು ವಿಚಾರ ಮಾಡಿದ್ದಾರೆ ಎಂಬುದನ್ನು ನೋಡಿದರೆ ನನಗೆ ಬಹಳ ನಿರಾಶೆಯಾಗಿದೆ. ೮ ತಿಂಗಳ ಅವಧಿ ಸಾಮಾನ್ಯವಾದದ್ದೇನಲ್ಲ. ತಮಗೆ ಸಾಕಷ್ಟು ಅವಕಾಶ ಸಿಕ್ಕಿದೆ. ಯಾವ ರೀತಿ ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಕೂಡ ಸಾಕಷ್ಟು ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ದೊರೆತಿದೆ. ಸುಮಾರು ೩೫ ವರ್ಷಗಳ ಕಾಲ ಈ ರಾಜ್ಯದಲ್ಲಿ ನಾವು ಆಡಳಿತ ನಡೆಸಿದೆವು. ೧೯೮೩ರಲ್ಲಿ ಜನರು ನಿಮಗೆ ಅಧಿಕಾರ ಕೊಟ್ಟು ಆಡಳಿತ ನಡೆಸುವಂತೆ ಅರಿಸಿ ಕಳುಹಿಸಿದ್ದಾರೆ. ಈಗ ನಗರ ಸಭೆಯ ಚುನಾವಣೆಯನ್ನು ಕೂಡ ಮಾಡಿದ್ದೀರಿ. ಇವತ್ತಿನ ದಿವಸ ನಗರ ಪ್ರದೇಶಗಳಲ್ಲಿರತಕ್ಕ ಜನರ ಬಗ್ಗೆ ನೇರವಾಗಿ ವಿಚಾರ ಮಾಡುತ್ತಿದ್ದೀರಾ ಎಂಬ ಪ್ರಶ್ನೆ ತಮ್ಮ ಎದುರಿಗೆ ಇದೆ. ಅದರ ಬಗ್ಗೆ ನೀವು ಹೆಚ್ಚಿನ ಆಸಕ್ತಿ ವಹಿಸಿಲ್ಲವೆಂದು ನಾನು ಹೇಳಬೇಕಾಗಿದೆ. ಇವತ್ತಿನ ದಿವಸ ತಮ್ಮ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ದಕ್ಷರಾಗಿದ್ದಾರೆ. ಬೆಂಗಳೂರು ಜಲಮಂಡಳಿಯಲ್ಲಾಗಲೀ, ಕಾರ್ಪೊರೇಷನ್ನಿನಲ್ಲಾಗಲೀ, ಸಕ್ರೀಟೆರಿಯೇಟ್‌ನಲ್ಲಾಗಲಿ ಅಥವಾ ಟೌನ್ ಪ್ಲಾನಿಂಗ್ ಅಥಾರಿಟಿಯಲ್ಲಾಗಲೀ ಸಾಕಷ್ಟು ಒಳ್ಳೆಯ ಅಧಿಕಾರಿಗಳಿದ್ದಾರೆ. ಇಷ್ಟೆಲ್ಲಾ ದಕ್ಷ ಅಧಿಕಾರಿಗಳನ್ನು ಇಟ್ಟುಕೊಂಡು, ಹೆಚ್ಚಿನ ರೀತಿಯಲ್ಲಿ ಸಲಹೆಗಳನ್ನು ಕೊಡತಕ್ಕ ಪರಿಣತರನ್ನು ಇಟ್ಟುಕೊಂಡು ಒಳ್ಳೆಯ ಕೆಲಸವನ್ನು ಏತಕ್ಕೆ ಮಾಡಲು ಪ್ರಯತ್ನ ಮಾಡುತ್ತಿಲ್ಲ ಎಂದು ಕೇಳಬೇಕಾಗಿದೆ. ಚುನಾವಣೆಯಲ್ಲಿ ತಾವು ಅಧಿಕಾರಕ್ಕೆ ಬರುತ್ತೀರಿ ಎಂಬ ವಿವೇಚನೆಯಿಲ್ಲದೆ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ. ಆದರೆ ಅದನ್ನು ಈಡೇರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ೧೯೮೦ ರಿಂದ ೧೯೮೩ರ ವರೆಗೆ ನಾನು ಈ ಖಾತೆಯ ಮಂತ್ರಿಯಾಗಿದ್ದಾಗ ಎಲ್ಲರ ಜೊತೆ ನಾನು ಸಮಾಲೋಚನೆ ಮಾಡಿ ಸಲಹೆ ಸೂಚನೆಗಳನ್ನು ಕೇಳುತ್ತಿದ್ದೆ. ಬೃಹತ್ ಸಮಸ್ಯೆ ಇರುವ ಖಾತೆಯಲ್ಲಿ ಪುರಸಭೆ ಮತ್ತು ನಗರ ಸಭೆಯ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಬೆಂಗಳೂರು ನಗರದ ಶಾಸಕರನ್ನು ಕೂಡ ಕರೆದು ನಗರದ ಸಮಸ್ಯೆಗಳ ಬಗ್ಗೆ ಸಲಹೆ ಸೂಚನೆಗಳನ್ನು ಪಡೆದಿದ್ದೇನೆ. ಬೇರೆ ಬೇರೆ ಪಟ್ಟಣಗಳಲ್ಲಿ ಸಮಸ್ಯೆಗಳನ್ನು ಯಾವ ರೀತಿ ಎದುರಿಸುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಬಂದಿದ್ದೇನೆ. ರೋಮ್‌ನಲ್ಲಿ ಜನಸಂಖ್ಯೆ ಸಮಸ್ಯೆ ಕುರಿತು ದೊಡ್ಡ ಸಮ್ಮೇಳನ ಆಯಿತು. ಅದಕ್ಕೆ ನಾನೂ ಕೂಡ ಹೋಗಿದ್ದೆ. ಅವರ ಕಲ್ಪನೆ ಏನೆಂದರೆ ಕ್ರಿ.ಶ. ೨೦೦೦ರ ಹೊತ್ತಿಗೆ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟು ಜನ ಪಟ್ಟಣದಲ್ಲಿ ನೆಲೆಸುತ್ತಾರೆ ಎಂಬುದಿದೆ. ಇಂಥ ದೊಡ್ಡ ಸಮಸ್ಯೆಯ ಖಾತೆ ತಮಗೆ ಸಿಕ್ಕಿದೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ಅನೇಕ ಸಲ ಹೇಳಿದ್ದೇನೆ, ಬೆಂಗಳೂರು ನಗರದ ಜನಸಂಖ್ಯೆ ೧೯೭೧ರಲ್ಲಿ ೧೬ ಲಕ್ಷ ಇದ್ದರೆ ೧೦ ವರ್ಷದ ಅವಧಿಯಲ್ಲಿ ೨೯ ಲಕ್ಷ ಆಗಿದೆ. ಇಷ್ಟು ಜನಸಂಖ್ಯೆ ಹೆಚ್ಚಳ ಯಾವ ರಾಜಧಾನಿಯಲ್ಲೂ ಇಲ್ಲ. ಎಲ್ಲಾ ಕಡೆಯಿಂದ ಬೆಂಗಳೂರು ನಗರಕ್ಕೆ ಜನ ಬರುತ್ತಿದ್ದಾರೆ. ಏಕೆಂದರೆ ಈ ನಗರ ಆಕರ್ಷಣೀಯ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಾಗಿದೆ. ಗುಲ್ಬರ್ಗ, ಶಿವಮೊಗ್ಗ ಮುಂತಾದ ಜಿಲ್ಲಾ ಕೇಂದ್ರಗಳಿಗೆ ಭೇಟಿ ಕೊಟ್ಟು ನೋಡಿದರೆ ಕೊಳಚೆ ಪ್ರದೇಶಗಳ ವಿಷಯವಾಗಲೀ, ಅಕ್ರಮವಾಗಿ ಮನೆಗಳನ್ನು ಕಟ್ಟಿರುವ ವಿಷಯವಾಗಲೀ, ಹರಿಜನ ಗಿರಿಜನರಿಗೆ ನಿವೇಶನವನ್ನು ಒದಗಿಸುವ ವಿಷಯವಾಗಲಿ ಸಾಕಷ್ಟು ಗೊತ್ತಾಗುತ್ತದೆ. ಇದರ ಬಗ್ಗೆ ತಾವು ಏನು ವಿಚಾರ ಮಾಡಿದ್ದೀರಿ? ಏನು ಯೋಜನೆ ಹಾಕಿದ್ದೀರಿ? ಎಂಬುದನ್ನು ಹೇಳಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಎಲ್ಲಾ ಕಡೆ ಭಾಷಣ ಮಾಡುವಾಗ ಈಗಿನ ಸರ್ಕಾರ ಬಂದ ಮೇಲೆ ಅನೇಕ ಒಳ್ಳೆಯ ಕೆಲಸಗಳು ಆಗುತ್ತಿವೆ ಎಂದು ಹೇಳುತ್ತಿದ್ದಾರೆ. ಏನೇನು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಎಂಬುದನ್ನು ಹೇಳಬೇಕು. ಇಷ್ಟೊಂದು ಜನಸಂಖ್ಯೆ ಇರುವಾಗ ಇದರ ಬಗ್ಗೆ ವಿಶೇಷ ಯೋಜನೆಯನ್ನು ಏನು ಹಾಕಿದ್ದೀರಿ? ನಗರದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹೊಸ ಹೊಸ ಯೋಜನೆ ಏನು ಮಾಡಿದ್ದೀರಿ? ಇದರ ಬಗ್ಗೆ ತಾವು ಆಸಕ್ತಿ ತೋರಿಸಿಲ್ಲ. ತಾವು ಜನರಿಗೆ ಕೊಟ್ಟಿರುವ ಆಶ್ವಾಸನೆಗಳನ್ನು ಪರಿಣಾಮಕಾರಿಯಾಗಿ ಯಾವ ರೀತಿ ಈಡೇರಿಸಿ ಕೆಲಸ ಕಾರ್ಯ ಮಾಡುತ್ತೀರಿ ಎಂಬ ಬಗ್ಗೆ ನಮಗೆ ಶಂಕೆ ಬರುತ್ತಿದೆ. ಇವತ್ತು ಚುನಾವಣೆ ಮಾಡಿದ್ದೀರಿ, ತಾವು ಗೆದ್ದು ಬಂದಿದ್ದೀರಿ. ಚುನಾವಣೆಯಾದ ನಂತರ ಹೆಗಡೆಯವರು ಹೇಳಿದರು ಪಟ್ಟಣದ ಎಲ್ಲಾ ಜನರು ನಮಗೆ ಸಹಕಾರ ಕೊಟ್ಟಿದ್ದಾರೆ ಎಂದು. ಚುನಾವಣೆ ಸಮಯದಲ್ಲಿ ಜನತಾ ಪಕ್ಷ ಮತ್ತು ಭಾರತೀಯ ಜನತಾ ಪಾರ್ಟಿಯವರು ಹೊಂದಾಣಿಕೆಯಾಗಲಿಲ್ಲ. ಆದರೆ ಅವರೇ ಇವತ್ತು ತಮ್ಮ ಸರ್ಕಾರಕ್ಕೆ ಬೆಂಬಲ ನೀಡಿ ಸಹಾಯ ಮಾಡುತ್ತಿದ್ದಾರೆ. ೨೪೨ ಮುನಿಸಿಪಾಲಿಟಿಗಳಲ್ಲಿ ಈಗ ಚುನಾವಣೆ ನಡೆದಿದೆ. ಮೊದಲು ನಾವು ಚುನಾವಣೆ ಸಿದ್ಧತೆಗಳನ್ನು ಮಾಡಿದ್ದೆವು. ತಾವು ಬಂದ ಮೇಲೆ ಚುನಾವಣೆಯನ್ನು ಮಾಡಿದ್ದೀರಿ. ಅದಕ್ಕಾಗಿ ನಾವು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಚುನಾವಣೆಯನ್ನು ಏತಕ್ಕೆ ಹಿಂದೆ ಮಾಡಬಾರದು ಎಂದು ಹೇಳುತ್ತಿದ್ದೇವೆಂದರೆ ೧೯೭೧ರ ಜನಗಣತಿ ಆಧಾರದ ಮೇಲೆ ಚುನಾವಣೆ ಮಾಡಿದರೆ ಹರಿಜನರು, ಗಿರಿಜನರು ಹಿಂದುಳಿದವರು ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವುದಿಲ್ಲ. ೧೯೮೧ರ ಸೆನ್ಸಸ್ ಪ್ರಕಾರ ಮಾಡಿದರೆ ಅನುಕೂಲವಾಗುತ್ತದೆ, ಡೀಲಿಮಿಟೇಷನ್ ಆಫ್ ಕಾನ್‌ಸ್ಟಿಟ್ಯುಯನ್ಸಿ ಮಾಡತಕ್ಕದ್ದರಲ್ಲಿ ತಾವು ಅನ್ಯಾಯ ಮಾಡುತ್ತಿದ್ದೀರಿ ಎಂಬ ಮಾತನ್ನು ಹೇಳಿದ್ದೇವೆ. ಇವತ್ತು ಹೈಕೋರ್ಟಿಗೆ ಕೂಡ ಕೆಲವರು ಹೋಗಿದ್ದಾರೆ. ಉದಾಹರಣೆಗೆ ಗುಲ್ಬರ್ಗದಲ್ಲಿ ೨೬ ಹರಿಜನ ಗಿರಿಜನರು ಇರತಕ್ಕ ಪ್ರದೇಶದಲ್ಲಿ ೫ ಜನ ನಿಲ್ಲತಕ್ಕ ಪರಿಸ್ಥಿತಿ ಇದೆ. ಆ ಪಟ್ಟಣದಲ್ಲಿ ಹರಿಜನ ಗಿರಿಜನರು, ಅಲ್ಪಸಂಖ್ಯಾತರು ತಮ್ಮ ಬಡಾವಣೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ನಗರಸಭೆಗಳಲ್ಲಿ, ಪುರಸಭೆಗಳಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಈಗ ಹೊಸ ಪುರಸಭೆಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಬಂದಿದ್ದಾರೆ. ಅವರು ಯಾವ ರೀತಿ ಕೆಲಸ ಮಾಡಬೇಕು ಎಂಬುದು ಗೊತ್ತಿಲ್ಲ. ಆಕ್ಟ್ರಾಯ್ ತೆಗೆದು ಹಾಕಿರುವ ಬಗ್ಗೆ ಸಾಕಷ್ಟು ಸಲ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಹೊಸ ಸರ್ಕಾರ ಬಂದ ಮೇಲೆ ಆಕ್ಟ್ರಾಯ್ ಇಟ್ಟುಕೊಳ್ಳಬೇಕೇ ಅಥವಾ ತೆಗೆದು ಹಾಕಬೇಕೇ ಎಂಬ ಬಗ್ಗೆ ಯೋಜನೆ ನಡೆದಿದೆ. ೧೦ ಪರ್ಸೆಂಟ್ ಗ್ರೋತ್ ರೇಟ್ ಪ್ರಕಾರ ಕೊಡಬೇಕೆಂದು ನಿರ್ಧಾರ ತೆಗೆದುಕೊಂಡು ೩೨ ಕೋಟಿ ರೂಪಾಯಿಗಳನ್ನು ನಾವು ಕೊಡುತ್ತಿದ್ದೆವು. ಡೆವಲಪ್ಮೆಂಟ್ ಗ್ರಾಂಟ್ ೨ ಕೋಟಿ ರೂಪಾಯಿ ಕೊಡುತ್ತಿದ್ದೆವು. ೪ ಕೋಟಿ ರೂಪಾಯಿ ಪ್ರೊಫೆಷನಲ್ ಟ್ಯಾಕ್ಸ್ ಏನು ಬರುತ್ತಿತ್ತು ಅದನ್ನು ತೆಗೆದು ಹಾಕುತ್ತೇವೆಂದು ಹೇಳಿದ್ದೀರಿ. ಇದರಿಂದ ಬರತಕ್ಕ ಆದಾಯ ಕಡಿಮೆಯಾಗುತ್ತಿದೆ. ೧೯೭೮ರಲ್ಲಿ ಆಕ್ಟ್ರಾಯ್ ತೆಗೆದರು. ನಮ್ಮ ಸರ್ಕಾರ ಬಂದ ಮೇಲೆ ಅರ್ಥಶಾಸ್ತ್ರಜ್ಞರಾದ ಶ್ರೀ ಗುಲ್ಹಾಟಿ ಅವರ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಸಲಹೆ ಸೂಚನೆ ನೀಡಲು ಸಮಿತಿಯನ್ನು ಮಾಡಿದ್ದೆವು, ಆದರೆ ಇವತ್ತು ಬೇರೆ ತಜ್ಞರ ಸಮಿತಿಯನ್ನು ತಾವು ಮಾಡುವುದಕ್ಕೆ ಕಾರಣ ಏನು? ನಾವು ಗುಲ್ಹಾಟಿಯವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದು ರಾಜಕೀಯ ಜನರಿಗೋಸ್ಕರವಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಹಳ ಒಳ್ಳೆಯ ಅನುಭವಿಗಳ ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದವರು. ಅವರು ಬಹು ಅಂತಸ್ತುಗಳ ಕಟ್ಟಡಗಳ ಬಗ್ಗೆ ತಜ್ಞರ ಸಮಿತಿಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ೧೯೮೧ರಲ್ಲಿ ಬಹು ಅಂತಸ್ತುಗಳ ಕಟ್ಟಡದ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದರೆ ಅದು ನಮ್ಮ ಸರ್ಕಾರ ತೆಗೆದುಕೊಂಡದ್ದು ಎಂಬುದನ್ನು ಯಾರೂ ಮರೆಯುವಂತಿಲ್ಲ. ೨೩೬ ಕಟ್ಟಡಗಳ ಪೈಕಿ ೧೮೬ ಕಟ್ಟಡಗಳ ಬಗ್ಗೆ ನೋಟೀಸ್ ಕೊಟ್ಟು ಅವರು ಹೈಕೋರ್ಟಿಗೆ ಹೋದರೂ ಕೂಡ ನಾವು ಸ್ಟೇ ವೆಕೇಟ್ ಮಾಡಿಸಿ ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಆ ಸಮಿತಿಯವರು ವರದಿ ಕೊಟ್ಟಿದ್ದು ಅದು ಒಳಾಡಳಿತ ಇಲಾಖೆಯಲ್ಲಿದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮೊದಲಿನಿಂದ ಈ ಅನಾಹುತವಾಗುತ್ತಿದ್ದು ಈಗ ನಿಂತಿದೆ ಎಂಬ ಅರ್ಥ ಬರುವಂತೆ ಮಾತನಾಡಿದ್ದಾರೆ, ಇದರ ಬಗ್ಗೆ ಕೊನೆಯಲ್ಲಿ ಮಾತನಾಡುತ್ತೇನೆ. ಸಮಯ ಬಹಳ

ಸ್ವಲ್ಪ ಇರುವುದರಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಹಿಂದೆ ಈ ಇಲಾಖೆಯ ಬಗ್ಗೆ ಮೂರು ದಿವಸಗಳ ಕಾಲ ಚರ್ಚೆ ಮಾಡಿದ್ದೇವೆ. ೩೬ ಜನರು ಮಾತನಾಡಿದ್ದಾರೆ. ಆದರೆ ಇವತ್ತು ಕೇವಲ ೮೦ ನಿಮಿಷದಲ್ಲಿ ಎಲ್ಲಾ ವಿರೋಧಪಕ್ಷದವರು ಮತ್ತು ಇತರ ಸದಸ್ಯರೂ ಮಾತನಾಡಬೇಕು ಎಂದು ಹೇಳಿದರೆ ಹೇಗೆ ಸಾಧ್ಯವಾಗುತ್ತದೆ ? ತಮ್ಮ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳುವುದಕ್ಕೆ ಸದಸ್ಯರಿಗೆ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕು. ನಾವು ರಚಿಸಿದ್ದ ಗುಲ್ಬಾಟಿ ಕಮಿಷನ್ ರಿಪೋರ್ಟ್ ಬಂದಿರುವಾಗ ಮತ್ತೊಬ್ಬ ತಜ್ಞರ ಸಮಿತಿಯನ್ನು ಏತಕ್ಕಾಗಿ ನೇಮಕ ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ನಾನು ನೇರವಾಗಿ ಕೇಳಬಯಸುತ್ತಿದ್ದೇನೆ. ಇವತ್ತು ನಿಮ್ಮ ಕೈಯಲ್ಲಿ ಅಧಿಕಾರ ಬಂದಿದೆ. ತಾವು ಜನರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ನಾನು ಹೇಳುತ್ತೇನೆ. ಇವತ್ತು ಈ ಪೌರಾಡಳಿತ ಸ್ಥಾನಿಕ ಸಂಸ್ಥೆಗಳು ಏನಿವೆ ಇವನ್ನು ಆರ್ಥಿಕ ದೃಷ್ಟಿಯಿಂದ ಬಲಪಡಿಸುವ ಬಗ್ಗೆ ಪ್ರಯತ್ನ ಮಾಡುತ್ತಿಲ್ಲ. ಇವತ್ತು ಏನು ತಜ್ಞರ ಸಮಿತಿಯನ್ನು ನೇಮಕ ಮಾಡಿದ್ದೀರಿ ಅದರ ವರದಿ ಬಂದಮೇಲೆ ಆ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಈ ದಿನ ಈ ಬಗ್ಗೆ ತಾವು ನೇರವಾಗಿ ಗಮನ ಕೊಡುತ್ತಿಲ್ಲವೆಂದು ನಾನು ಹೇಳುತ್ತೇನೆ. ತಾವು ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಿದ್ದೀರಿ. ಹಿಂದೆ ಪುರಸಭೆಗಳಲ್ಲಿ ಆಗಸ್ಟ್ ೧೫ನೇ ತಾರೀಖಿನ ದಿವಸ ಬಾವುಟ ಹಾರಿಸಲು ೧೫ ರೂಪಾಯಿ ಖರ್ಚು ಮಾಡಿದರೆ ಅದರ ಮಂಜೂರಾತಿಗೆ ಫೈಲ್ ಸೆಕ್ರೆಟೇರಿಯೇಟ್‌ಗೆ ಬರಬೇಕಾಗಿತ್ತು. ಆದರೆ ನಾವು ಅದನ್ನು ವಿಕೇಂದ್ರೀಕರಣ ಮಾಡಿದೆವು. ಕೆಲವು ಪವರ್‌ಗಳನ್ನು ಡಿವಿಜನಲ್ ಕಮೀಷನರ್ ಡೆಪ್ಯೂಟಿ ಕಮೀಷನರ್‌ಗೆ ಡೆಲಿಗೇಟ್ ಮಾಡಿ ಅನುಕೂಲ ಮಾಡಿಕೊಟ್ಟೆವು. ೫೦೦ ರೂಪಾಯಿಗಳವರೆಗೆ ಮುನಿಸಿಪಾಲಿಟಿ ಕಮೀಷನರ್ ಆಗಲೀ, ಚೀಫ್ ಆಫೀಸರ್ ಆಗಲೀ ಖರ್ಚುಮಾಡಲು ಹಕ್ಕನ್ನು ಕೊಟ್ಟೆವು. ಇವತ್ತು ಮತ್ತೊಂದು ವಿಷಯದ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಸಪರೇಟ್ ಡೈರಕ್ಟರೇಟ್ ಆಗಬೇಕೆಂದು ಹೇಳಿದ್ದೇವೆ. ಪೆನ್‌ಷನ್ ವಿಚಾರವಾಗಿ ಹೇಳುವುದಾದರೆ ೧೯೭೨-೮೦ ರವರೆಗೆ ಕೇವಲ ೧೩೬ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡತಕ್ಕ ಜನರಿಗೆ ಕೊಟ್ಟರೆ ನಾವು ೩ ಸಾವಿರಕ್ಕಿಂತ ಹೆಚ್ಚು ಪೆನ್‌ಷನ್ ಕೊಟ್ಟಿದ್ದೇವೆ. ನಾವು ಪೆನ್‌ಷನ್ ಪಾಲಿಸಿಯನ್ನು ಲಿಬರಲೈಸ್ ಮಾಡಿದ್ದೇವೆ. ಅದು ಎಲ್ಲಾ ಅಕೌಂಟೆಂಟ್ ಜನರಲ್‌ಗೆ ಬರಬೇಕಾಗಿತ್ತು. ನಾವು ಬಂದು ಅಸಿಸ್ಟೆಂಟ್ ಕಂಟ್ರೋಲರ್ ಸ್ಥಳದಲ್ಲಿಯೇ ಕೊಡಬೇಕೆಂದು ಮಾಡಿ ಕೇವಲ ೮ ವರ್ಷದ ಅವಧಿಯಲ್ಲಿ ೮ ಲಕ್ಷ ರೂಪಾಯಿ ಖರ್ಚು ಮಾಡಿದರೆ ನಮ್ಮ ಕಾಲದಲ್ಲಿ ಮುನಿಸಿಪಾಲಿಟಿ ಎಂಪ್ಲಾಯೀಸ್‌ಗೆ ಸುಮಾರು ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಕೇವಲ ಬೆಂಗಳೂರು ನಗರದಲ್ಲಿ ಇರತಕ್ಕ ರಸ್ತೆಗಳ ಬಗ್ಗೆಯಾಗಲೀ, ಬೆಂಗಳೂರು ನಗರದ ಸೌಂದರ್ಯವನ್ನಾಗಲೀ ನೋಡದೇ ದೊಡ್ಡ ದೊಡ್ಡ ಪಟ್ಟಣಗಳನ್ನು ಸಣ್ಣ ಪುಟ್ಟ ಪಟ್ಟಣಗಳಲ್ಲಿ ನೋಡದೆ ಇರತಕ್ಕ ರಾತ್ರಿ ಹಗಲೂ ಕಸ ಹೊಡೆಯತಕ್ಕ ಪೌರಕಾರ್ಮಿಕರು ಯಾರಿದ್ದಾರೆ ಅವರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಖಾತೆಗೆ ಒಂದು ಡೈರಕ್ಟರೇಟ್ ಬೇಕಾಗುತ್ತದೆ. ಇವತ್ತು ಕೇವಲ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿರತಕ್ಕ ತೋಟಗಾರಿಕೆ ಇಲಾಖೆಗೆ ಪ್ರತ್ಯೇಕ ಡೈರಕ್ಟರೇಟ್ ಇರುವಾಗ ಮುನಿಸಿಪಾಲಿಟಿಗೂ ಒಂದು ಪ್ರತ್ಯೇಕ ಇಲಾಖೆ ಇದ್ದರೆ ಪ್ರತಿಯೊಬ್ಬರೂ ತಮ್ಮ ಕುಂದು ಕೊರತೆಗಳಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಬಹುದೆಂದು ಹೇಳುತ್ತೇನೆ. ನಮ್ಮ ಕಾಲದಲ್ಲಿ ಏನೇನು ಒಳ್ಳೆಯ ಕೆಲಸ ಕಾರ್ಯಗಳನ್ನು ಹಾಕಿಕೊಂಡಿದ್ದೆವೆಯೋ ಅವನ್ನೆಲ್ಲಾ ತಾವು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ಬಡ್ಜೆಟ್ ಬಗ್ಗೆ ಮಾತನಾಡಬೇಕು ಎಂದರೆ ೧೯೮೦ರಲ್ಲಿ ನಾವು ೫೯.೫ ಕೋಟಿ ರೂಪಾಯಿ ಪ್ರೊವೈಡ್ ಮಾಡಿದ್ದೇವೆ. ೧೯೮೦-೮೧ರಲ್ಲಿ ೭೨ ಕೋಟಿ ರೂಪಾಯಿ, ೧೯೮೧-೮೨ರಲ್ಲಿ ಕೂಡಾ ೭೨ ಕೋಟಿ ರೂಪಾಯಿ, ೧೯೮೨-೮೩ರಲ್ಲಿ ೮೮.೧೦ ಕೋಟಿ ರೂಪಾಯಿ ಪ್ರೊವೈಡ್ ಮಾಡಲಾಗಿದೆ. ಇವತ್ತು ಏನಾಗಿದೆ ಎಂದರೆ, ನಾವು ಇವತ್ತು ಬೇರೆ ಬೇರೆ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್‌ಗಳಿಂದ ಸಹಾಯವನ್ನು ಪಡೆಯಬೇಕಾಗಿದೆ. ನಮ್ಮ ಕಾಲದಲ್ಲಿ ೧೯೮೨-೮೩ರಲ್ಲಿ ಎಲ್.ಐ.ಸಿ. ಯಿಂದ ೧೬ ಕೋಟಿ, ಹುಡ್ಕೋದಿಂದ ೧೦ ಕೋಟಿ. ಐ.ಡಿ.ಬಿ.ಐ. ನಿಂದ ೧ ಕೋಟಿ ಹಾಗೂ ಇತರ ಮೂಲಗಳಿಂದ ೬.೬೦ ಕೋಟಿ ಹೀಗೆ ಒಟ್ಟು ೩೨.೫೩ ಕೋಟಿ ರೂಪಾಯಿ ಪಡೆಯಲಾಯಿತು. ಇದನ್ನು ಬಿಟ್ಟು ಎಲ್.ಐ.ಸಿ. ಹಾಗೂ ಹುಡ್ಕೋದವರು ೧೩೭ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇವತ್ತು ಪ್ಲಾನ್ ಬಗ್ಗೆ ತಾವು ಹೇಳಿದ್ದೀರಿ. ೧೯೮೩ ೮೪ರಲ್ಲಿ ಪ್ಲಾನ್‌ನಲ್ಲಿ ೨೧.೪೬ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ನಾನ್-ಪ್ಲಾನ್‌ನಲ್ಲಿ ೩೮.೭೫ ಕೋಟಿ ರೂಪಾಯಿ, ಹೀಗೆ ಒಟ್ಟು ೬೦.೨೧ ಕೋಟಿ ರೂಪಾಯಿ ಆಗುತ್ತದೆ. ಕಳೆದ ಸಲ ನಾವು ಒದಗಿಸಿದ್ದು ೮೮.೧೦ ಕೋಟಿ ರೂಪಾಯಿ. ಇತರ ಮೂಲಗಳಿಂದ ನಾವು ೧೩೭ ಕೋಟಿ ರೂಪಾಯಿ ಒದಗಿಸಿದ್ದೇವೆ. ತಾವು ಇತರ ಮೂಲಗಳಿಂದ ಏನು ಹಣ ಬರುವುದು ಇದೆ ಆ ಬಗ್ಗೆ ಸಮಾಲೋಚನೆ ಮಾಡಿ, ಅವರುಗಳ

ಜೊತೆ ಮಾತನಾಡಿ ಪಡೆದುಕೊಳ್ಳಬೇಕೆಂದು ಹೇಳುತ್ತೇನೆ. ತಮಗೆ ಗೊತ್ತಿರುವ ಹಾಗೆ ಗದಗ್–ಬೆಟಗೇರಿ ಬಗ್ಗೆ ೭ ಕೋಟಿ ೪೦ ಲಕ್ಷ ರೂಪಾಯಿ ಬೇಕಾಗಿತ್ತು. ಮುನಿಸಿಪಾಲಿಟಿಯವರು ಕೊಡುವುದಕ್ಕಾಗುವುದಿಲ್ಲವಾದ್ದರಿಂದ ಸರ್ಕಾರದ ವತಿಯಿಂದ ೨ ಕೋಟಿ ರೂಪಾಯಿ ಕೊಡಬೇಕೆಂದು ಎಲ್.ಐ.ಸಿ.ಯವರು ಹೇಳಿದರು. ಈ ಬಗ್ಗೆ ನಾವು ಜನಾರ್ಧನ ಪೂಜಾರಿ ಅವರ ಜೊತೆ ಮಾತನಾಡಿದೆವು. ಅಲ್ಲಿನ ಕುಡಿಯುವ ನೀರಿನ ಯೋಜನೆ ಇದು. ನೀರು ಸರಬರಾಜಿನ ಬಗ್ಗೆ ಆಗಲೀ, ಬೇರೆ ಸ್ಕೀಮ್ ಆಗಲೀ ಸಣ್ಣಪುಟ್ಟ ಪಟ್ಟಣಗಳಿಗೆ ಹೆಚ್ಚು ಸಹಾಯ ಮಾಡುವ ರೀತಿಯಲ್ಲಿ ಬೇರೆ ಬೇರೆ ಸಂಸ್ಥೆಗಳಿಂದ ತಾವು ಹಣವನ್ನು ತರತಕ್ಕ ಪ್ರಯತ್ನ ಮಾಡಬೇಕು. ಇವತ್ತು ಸರ್ಕಾರದ ಹಣದಿಂದಲೇ ಎಲ್ಲ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ ಈ ಬಗ್ಗೆ ತಾವು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಇದೆ. ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಇವತ್ತು ಒಬ್ಬ ಡೆಪ್ಯುಟಿ ಕಮೀಷನರ್ ಅವರನ್ನು ಬೇರೊಂದು ಜಿಲ್ಲೆಯ ಡೆಪ್ಯುಟಿ ಕಮೀಷನರ್ ಮಾಡಲು ಅಧಿಕಾರ ಇದೆ. ಇವತ್ತು ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಏನು ತಜ್ಞರು ಇದ್ದಾರೆ ಅವರು ಹೊರದೇಶಗಳಿಗೆ ಹೋಗಿ ಅಲ್ಲಿಂದ ತಿಳಿದುಕೊಂಡು ಬಂದಂತಹವರಾಗಿದ್ದಾರೆ. ಅಲ್ಲಿ ಇದ್ದ ನಂಜುಂಡಸ್ವಾಮಿಯವರು ಏನಿದ್ದಾರೆ ಅವರು ತಜ್ಞರು ಇರುವುದರಿಂದ ಅವರು ಚೀಫ್ ಎಂಜಿನಿಯರ್ ಆದಮೇಲೂ ಅವರು ಅಲ್ಲೇ ಇರಲಿ ಎಂಬ ದೃಷ್ಟಿಯಿಂದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಅಲ್ಲೇ ನೇಮಕ ಮಾಡಿದೆವು. ಅಲ್ಲಿನ ಟೆಕ್ನಿಕಲ್ ವಿಷಯ ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ಇನ್ನು ಕರ್ನಾಟಕ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ನಮ್ಮ ಕಾಲದಲ್ಲಿ ಒಟ್ಟು ೭೭ ಕೋಟಿ ರೂಪಾಯಿ ಸ್ಕೀಮ್ ಸ್ಯಾಂಕ್ಷನ್ ಮಾಡಿ ೧೨ ಕೋಟಿಗಿಂತಲೂ ಹೆಚ್ಚು ಹಣವನ್ನು ಒದಗಿಸಿದ್ದೇವೆ. ೧೯೮೨–೮೩ರಲ್ಲಿ ಖರ್ಚು ಮಾಡಿದ್ದು ೭.೯೬ ಕೋಟಿ ರೂಪಾಯಿ ಆಗಿದ್ದರೆ ಈ ಸಲ ಸರ್ಕಾರ ೬.೭ ಕೋಟಿ ರೂಪಾಯಿ ಪ್ರೊವೈಡ್ ಮಾಡಿದೆ. ಇದಕ್ಕೆ ಎಲ್.ಐ.ಸಿ.ಯಿಂದಲೂ ಹಣವನ್ನು ಪಡೆದುಕೊಳ್ಳಬೇಕಾಗುತ್ತದೆ. ಬೆಂಗಳೂರಿಗೆ ನೀರು ಒದಗಿಸುವ ಬಗ್ಗೆ ಕಾವೇರಿ ಎರಡನೆಯ ಹಂತಕ್ಕೆ ಏಕೆ ಅಷ್ಟು ಹಣ ಖರ್ಚು ಮಾಡುತ್ತಿದ್ದೀರಿ ಎಂದು ಆಗ ನೀವು ಕೇಳಿದಿರಿ. ಇದಕ್ಕೂ ಕೂಡಾ ತಾವು ಹಣವನ್ನು ಬಹಳ ಕಡಿಮೆ ಮಾಡಿದ್ದೀರಿ.

೨–೩೦ ಪಿ.ಎಂ.

ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಿಗೆ ನೀರು ಸರಬರಾಜು ಯೋಜನೆಗಾಗಿ ಸುಮಾರು ೩.೭ ಲಕ್ಷ ರೂಪಾಯಿಗಳನ್ನು ಮಾಡಿದ್ದೇವೆ. ನಮ್ಮ ಅವಧಿಯಲ್ಲಿ ಕುಡಿಯುವ ನೀರಿನ ಸರಬರಾಜಿಗಾಗಿ ಸುಮಾರು ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೆವು. ಹಾಸನದಲ್ಲಿ ಕೂಡ ೨.೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೆವು. ಹಣಕಾಸಿನ ಮಂತ್ರಿಯವರನ್ನು ಹಿಡಿದುಕೊಂಡು ಬಡ್ಜೆಟ್ಟಿನಲ್ಲಿ ಕೂಡ ಸಾಕಷ್ಟು ಹಣ ತರುವಂಥ ಪ್ರಯತ್ನ ಮಾಡಿದ್ದೆವು. ಅಂತರಾಷ್ಟ್ರೀಯ ನೀರು ಸರಬರಾಜು ಮತ್ತು ಒಳಚರಂಡಿಗೆ ಸಂಬಂಧಪಟ್ಟಂತೆ ಒಂದು ಸಮ್ಮೇಳನ ಮಾಡಿದ್ದೆವು. ಸಣ್ಣಪುಟ್ಟ ನಗರ ಪ್ರದೇಶಗಳಲ್ಲಿ ಸ್ಯಾನಿಟೇಷನ್ ವ್ಯವಸ್ಥೆ ಮತ್ತು ನೀರು ಸರಬರಾಜು ವ್ಯವಸ್ಥೆ ಮಾಡಬೇಕಾಗುತ್ತದೆ. ೧೯೮೧ ರಿಂದ ೯೧ರವರೆಗೆ ಅಂದರೆ ಇನ್ನೂ ೧೦ ವರ್ಷಗಳ ಅವಧಿಯಲ್ಲಿ ೯೦೦ ಕೋಟಿ ರೂಪಾಯಿಯ ಬೃಹತ್ತರ ಯೋಜನೆ ಮಾಡಿ, ೨೮೫ ಕೋಟಿ ರೂಪಾಯಿಗಳ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮಾಡುವುದಕ್ಕೆ ಒಂದು ಯೋಜನೆ ಹಾಕಿದ್ದೆವು. ಹಿಂದಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಕೂಡ ಅದರಲ್ಲಿ ಸದಸ್ಯರಾಗಿದ್ದರು. ಸುಮಾರು ೮೭ ಯೋಜನೆಗಳನ್ನು ತೆಗೆದುಕೊಂಡಿದ್ದೆವು. ಅವುಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. Regional Water Decay Plan ಮೇರೆಗೆ ಹುಕ್ಕೇರಿ, ಸಂಕೇಶ್ವರ, ಹೊನ್ನಾವರ ಹಾಗೂ ಶಾಂತಿಸಾಗರದಲ್ಲಿ ಯೋಜನೆಗಳನ್ನು ಮಾಡುವ ಬಗ್ಗೆ ವಿಚಾರ ಮಾಡಿದ್ದೆವು. ಆದರ ಬಗ್ಗೆ ಒಂದು ಮಾತನ್ನು ಕೂಡ ಹೇಳಿಲ್ಲ. ಹಾಗೆ ಮೈಸೂರು ಮತ್ತು ಮಂಗಳೂರು ನಗರಗಳಲ್ಲಿಯೂ ಕುಡಿಯುವ ನೀರಿನ ಯೋಜನೆಗಾಗಿ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಅಥಾರಿಟಿಯಿಂದ ೨೦–೨೦ ಕೋಟಿ ರೂಪಾಯಿಗಳ ಯೋಜನೆ ತಯಾರು ಮಾಡಿದ್ದೆವು. ಅವುಗಳಿಗೆ ಹಣ ಒದಗಿಸಬೇಕು. ಇವತ್ತು ಮಂಗಳೂರು ಜನಸಂಖ್ಯೆ ೨ ಲಕ್ಷಕ್ಕಿಂತಲೂ ಹೆಚ್ಚಾಗಿರುವುದರಿಂದ, ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಹೊಸದಾಗಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನ ಅಧ್ಯಕ್ಷರಾಗಿರುವ ಬೈರೇಗೌಡರು ಈ ವಿಚಾರದಲ್ಲಿ ಹೆಚ್ಚಿಗೆ ಗಮನ ಕೊಡಬೇಕು. ಮುಂದೆ ಬರತಕ್ಕ ೨೦ ವರ್ಷಗಳ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಶಹಬಾದ್, ಗುಲ್ಬರ್ಗ ಹಾಗೂ ಆಳಂದ್ ನಗರಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಮಾಡಬೇಕಾಗಿದೆ. ಇವು ಬಹಳ ಹಿಂದುಳಿದ ಪ್ರದೇಶಗಳು, ನಾವು ಅಧಿಕಾರದಲ್ಲಿದ್ದಾಗ ಬೇಸಿಗೆ ಕಾಲದಲ್ಲಿ ನೀರು ಇಲ್ಲದೆ ಹೋದರೆ ತೊಂದರೆಯಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ೧.೬೦ ಲಕ್ಷ ಖರ್ಚು

ಮಾಡಿ, ಕ್ರಾಶ್ ಪ್ರೋಗ್ರಾಂ ತೆಗೆದುಕೊಂಡು ೨೪೭ ಬಾವಿಗಳನ್ನು ತೋಡಿಸಿದ್ದೆವು. ಇನ್ನು ಒಳಚರಂಡಿ ವ್ಯವಸ್ಥೆಗೆ ೧೫೯ ಲಕ್ಷ ಖರ್ಚು ಮಾಡಿದ್ದೆವು, ನೀವು ಕೇವಲ ೬ ಲಕ್ಷ ಮಾತ್ರ ಒದಗಿಸಿದ್ದೀರಿ, ಇದರಲ್ಲಿ ಯಾವ ಕೆಲಸವನ್ನು ಮಾಡಲಿಕ್ಕೆ ಆಗುತ್ತದೆ? ಬೇರೆ ಬೇರೆ ಸಂಸ್ಥೆಗಳಿಂದ ಹಣ ತರುವುದಕ್ಕೆ ವ್ಯವಸ್ಥೆ ಮಾಡಬೇಕು. ಬಳ್ಳಾರಿ ಮುನಿಸಿಪಾಲಿಟಿಯಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇಲ್ಲದೇ ಇರುವುದರಿಂದ ಅಲ್ಲಿ ನೀರು ಸರಬರಾಜು ಯೋಜನೆಯನ್ನು ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ನೀರು ಸರಬರಾಜು ಮಂಡಲಿಯವರೇ ನೀರು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ, ಇದೇರೀತಿ ಇನ್ನು ಕೆಲವು ನಗರಗಳು ಆರ್ಥಿಕವಾಗಿ ಬಹಳ ತೊಂದರೆಯಲ್ಲಿವೆ. ಕಾನೂನಿಗೆ ತಿದ್ದುಪಡಿ ಮಾಡಿ ಹಣ ಹೆಚ್ಚಿಗೆ ಒದಗಿಸಿಕೊಟ್ಟು ಕೆಲಸ ಮಾಡಿಸಬೇಕಾಗುತ್ತದೆ.

ದೇವರಾಜ್ ಅರಸರ ಕಾಲದಲ್ಲಿ ಕೊಳಚೆ ನಿರ್ಮೂಲನ ಮಂಡಲಿಯು ೨೦ ಅಂಶಗಳ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಹತ್ವದ ಕೆಲಸಗಳನ್ನು ಪ್ರಾರಂಭ ಮಾಡಿತ್ತು. ಇತ್ತೀಚೆಗೆ ಇದಕ್ಕೆ ಆದ್ಯತೆ ಕೊಟ್ಟಂತೆ ಕಾಣುತ್ತಿಲ್ಲ. ಇದಕ್ಕೆ ಅಧ್ಯಕ್ಷರು ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಇಲ್ಲಿಗೆ ಹೆಚ್ಚಿನ ಹಣ ಕೊಟ್ಟು, ಕೆಲಸಗಳನ್ನು ಮಾಡಿಸಬೇಕೆಂದು ಹೇಳುತ್ತೇನೆ. ಮತ್ತು ಹುಡ್ಕೋ ಸ್ಕೀಮಿನಿಂದ ಹಣ ತಂದು ಸ್ಲಂನಲ್ಲಿರತಕ್ಕ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ದೀಪದ ವ್ಯವಸ್ಥೆಗೂ ಹೆಚ್ಚಿನ ಗಮನ ಕೊಡಬೇಕು, ಹರಿಜನ ಗಿರಿಜನರಿಗೆ, ವಿಶೇಷ ಯೋಜನೆ ಹಾಕಿಕೊಂಡು ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ನಾವು ಅಧಿಕಾರದಲ್ಲಿದ್ದಾಗ ೩೫ ಸ್ಕೀಂಗಳನ್ನು ಮಾಡಿ, ಬಡ್ಜೆಟ್ಟಿನಲ್ಲಿ ಹೋದವರ್ಷ ೧.೬೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು ನೀವು ೧.೧೫ ಕೋಟಿ ಮಾತ್ರ ಒದಗಿಸಿದ್ದೀರಿ. ಇದು ಬಡವರಿಗೆ ಸಹಾಯ ಮಾಡುವಂಥ ರೀತಿಯೆ? ಯಾರ ಯಾರದೋ ಜನ್ಮದಿನ ಮಾಡುವುದಕ್ಕೆ ಹೋಗುತ್ತಿದ್ದೀರಿ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ಸುಮಾರು ೧೨ ಲಕ್ಷ ಸೈಟುಗಳನ್ನು ಹಂಚಿಕೆ ಮಾಡಿದ್ದೆವು. ಭಾರತದಲ್ಲಿ ಯಾವ ರಾಜ್ಯವು ಇಷ್ಟು ಮಾಡಿರಲಿಲ್ಲ. ಇನ್ನು ಭಾಗ್ಯಮಂದಿರ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಬೇಕು, ಮನೆಗಳನ್ನು ಹೊಡೆಸಿದ ಮೇಲೆ ಪರ್ಯಾಯವಾಗಿ ನಿವೇಶನಗಳನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ಇವತ್ತು ಎಲ್ಲಾ ಕಡೆಗಳಲ್ಲಿಯೂ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ, ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಮುಂಬಯಿ ಜನಸಂಖ್ಯೆ ೧ ಕೋಟಿ ೪ ಲಕ್ಷ ಇದ್ದರೆ, ಸುಮಾರು ೪೭ ಲಕ್ಷ ಜನ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ, ಅಲ್ಲಿ ೩೮ ಲಕ್ಷ ಮತದಾರರೂ ಇದ್ದಾರೆ. ಬೆಂಗಳೂರು ನಗರದಲ್ಲಿ ಹೆಚ್ಚು ಹೆಚ್ಚು ಸ್ಲಮ್ ಬರುತ್ತದೆ. ತಮಿಳುನಾಡಿನಿಂದ. ಬೇರೆ ಬೇರೆ ಕಡೆಯಿಂದ ಬರುತ್ತಾರೆಂದು ಹೇಳಿದ್ದೀರಿ. ಹಿಂದೆ ನಾವೇ ಈ ಬಗ್ಗೆ ಒಂದು ಪ್ರೋಗ್ರಾಮ್ ಹಾಕಿದ್ದಕ್ಕೆ ತಾವು ಸ್ವಾಗತ ಮಾಡಿದ್ದೀರಿ. ಇವೊತ್ತು ತಾವು ಏತಕ್ಕೆ ಆ ಕಾರ್ಯಕ್ರಮ ಮಾಡಲಿಲ್ಲ ? ಚುನಾವಣೆ ಇದ್ದ ಕಾರಣ ಅದೇ ರೀತಿ ಮಾಡಿದ್ದೀರಿ ಎಂದು ನಾವು ತಮ್ಮ ಮೇಲೆ ಹೇಳಬೇಕಾಗಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇನ್ನು ಅನ್‌ಅಥರೈಸ್ಡ್ ಹೌಸಸ್ ಎರಡು ಲಕ್ಷಕ್ಕೂ ಹೆಚ್ಚು ಬಂದಿದೆ. ಪರಿಸ್ಥಿತಿ ಈ ರೀತಿಯಲ್ಲಿ ಇರುವುದರಿಂದ, ಕೊಳಚೆ ಪ್ರದೇಶದಲ್ಲಿರತಕ್ಕ ಜನರ ಸಲುವಾಗಿ ಹೆಚ್ಚಿನ ಕೆಲಸ ಮಾಡಬೇಕಾಗುತ್ತದೆ. ಎಲ್ಲಾ ಜನರು ಮುಖರಾಗಿದ್ದಾರೆಂದು ಅಲ್ಲ. ಸ್ಲಮ್ಸ್‌ನಲ್ಲಿರತಕ್ಕವರ ಬಗ್ಗೆ ಗಮನ ಕೊಡಬೇಕಾಗಿತ್ತು ತಾವು ಕೊಟ್ಟಿಲ್ಲ. ಅದರ ಬಗ್ಗೆ ತಾವು ಹೆಚ್ಚಿನ ಗಮನ ಕೊಡಬೇಕು. ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಈ ಬಗ್ಗೆ ಹೆಚ್ಚು ಹಣ ಪಡೆಯುವಂಥ ಕೆಲಸವನ್ನು ಮಾಡಬೇಕು. ಇನ್ನು ಇಂಟಿಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್, ಇದರಲ್ಲಿ ೨೦ ಸಾವಿರಕ್ಕಿಂತಲೂ ಹೆಚ್ಚು, ಒಂದು ಲಕ್ಷದೊಳಗೆ ಇರತಕ್ಕ ಜನಸಂಖ್ಯೆಗೆ ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್ ಅವರದು ಸ್ಕೀಮ್ ಇದೆ. ೧೬ ಪಟ್ಟಣಗಳಿಗೆ ಅನುಕೂಲ ಸಿಕ್ಕಿದೆ ಶಹಪುರಕ್ಕೂ ಸಿಕ್ಕಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ನನ್ನ ಕ್ಷೇತ್ರಕ್ಕೆ ತೆಗದುಕೊಳ್ಳಲಿಲ್ಲ. ಅಲ್ಲಿ ೯೦ ಸಾವಿರ ಸೈಟು ಮಾಡತಕ್ಕದ್ದು, ರಿಂಗ್‌ರೋಡ್, ಮಾರ್ಕೆಟ್ ಕಟ್ಟಿಸತಕ್ಕ ಸಮಗ್ರ ಯೋಜನೆ ಇದೆ. ಅದರ ಬಗ್ಗೆ ಹಣ ಒದಗಿಸಬೇಕು ತಾವು ೧೦ ಲಕ್ಷ ರೂಪಾಯಿ ಯೋಜನೆ ತಯಾರು ಮಾಡಿದರೆ ೫ ಲಕ್ಷ ರೂಪಾಯಿ, ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ೫ ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಆದ್ದರಿಂದ ಇನ್ನೂ ಹೆಚ್ಚಿನ ಪಟ್ಟಣಗಳಿಗೆ ಅನುಕೂಲ ಸಿಕ್ಕುವ ರೀತಿಯಲ್ಲಿ ಸಮಗ್ರ ಯೋಜನೆ ಮಾಡಿ. ಬೆಂಗಳೂರು ನಗರ ಹೆಚ್ಚು ಬೆಳೆಯಬಾರದು ಎಂದು ಇದರ ಹತ್ತಿರ ಇರತಕ್ಕ ಸಣ್ಣಪುಟ್ಟ ಪಟ್ಟಣಗಳಿಗೆ ಯೋಜನೆ ಹಾಕಬೇಕೆಂದು ಪ್ರಸ್ತಾಪ ಮಾಡುತ್ತಿದ್ದೀರಿ. ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್ ಎಕ್ಸ್‌ಪರ್ಟ್ ಇದ್ದಾರೆ, ನಾವು ಅವರಿಗೆ ಹೆಚ್ಚಿನ ಉತ್ತೇಜನ ಕೊಟ್ಟಿದ್ದೇವೆ. ಯಾರು ಯಾರು ಡಿಪಾರ್ಟ್‌ಮೆಂಟಿನಲ್ಲಿ ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು

ಇದ್ದಾರೆ ಅವರೆಲ್ಲರ ಕಡೆಯಿಂದ ವರ್ಕ್ ಎಕ್ಸ್‌ಟ್ರ್ಯಾಕ್ಟ್ ಮಾಡತಕ್ಕದ್ದು ಮಾಡಬೇಕಾಗುತ್ತದೆ. ಆ ಡ್ರೈವ್ ಪ್ರಾರಂಭವಾಗಬೇಕು. ಈ ಅರ್ಬನ್ ಡೆವಲಪ್‌ಮೆಂಟ್ ಏನಿದೆ, ಈ ವಿಚಾರದಲ್ಲಿ ಮೇಲಿಂದ ಮೇಲೆ ಹೋಗಿ, ಹೆಚ್ಚಿನ ರೀತಿಯಲ್ಲಿ ಇನ್ಸ್‌ಪೆಕ್ಷನ್ ಮಾಡಬೇಕಾಗುತ್ತದೆ. ಅಧಿಕಾರಿಗಳನ್ನೂ ಸಹ ಸ್ಥಳಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ. ಆ ರೀತಿಯಲ್ಲಿ ಕೆಲಸ ಮಾಡಿದರೆ ಉತ್ತಮವಾದ ಕೆಲಸ ಆಗುತ್ತದೆ. ಇನ್ನು ಕಾರ್ಪೊರೇಷನ್‌ಗಳ ಬಗ್ಗೆ ಹೇಳಬೇಕೆಂದರೆ, ಗುಲ್ಬರ್ಗ ಕಾರ್ಪೊರೇಷನ್ ಮಾಡಿದ್ದೀರಿ, ಮಂಗಳೂರು ಕಾರ್ಪೊರೇಷನ್ ಮಾಡಿದ್ದೀರಿ. ಶಿವಮೊಗ್ಗ ಕಾರ್ಪೊರೇಷನ್ ಮಾಡತಕ್ಕದ್ದು ಪರಿಶೀಲನೆಯಲ್ಲಿದೆ. ಚಿತ್ರದುರ್ಗ, ದಾವಣಗೆರೆ ಕೂಡಿಸಿ ಮಾಡಬೇಕೆಂದು ಇದೆ, ಕೆ.ಜಿ.ಎಫ್.ನಲ್ಲಿ ಮಾಡತಕ್ಕದ್ದು ಇದೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದೀರಿ. ಪುರಸಭೆಗಳಲ್ಲಿ ಚೀಫ್ ಆಫೀಸರ್ ಕೆಲಸ ಮಾಡುತ್ತಾನೆ ಮುನಿಸಿಪಾಲಿಟಿಯಲ್ಲಿ ಕಮಿಷನರ್ ಕೆಲಸ ಮಾಡುತ್ತಾನೆ. ಕಾರ್ಪೊರೇಷನ್‌ನಲ್ಲಿ ಇಲ್ಲಿ ಒಬ್ಬ ಸೀನಿಯರ್ ಐಎಎಸ್ ಆಫೀಸರ್ ಇರುತ್ತಾನೆ. ಬೆಂಗಳೂರು ನಗರದಲ್ಲಿ ಯಾರು ಇದ್ದಾರೆ ಆ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಜನಸಂಖ್ಯೆ ಆಧಾರದ ಮೇಲೆ ಪುರಸಭೆಗಳು ಆಗುತ್ತವೆ. ಜನಸಂಖ್ಯೆ ಆಧಾರದ ಮೇಲೆ ನಗರಸಭೆಗಳು ಆಗುತ್ತವೆ. ಜನಸಂಖ್ಯೆ ೨ ಲಕ್ಷಕ್ಕಿಂತಲೂ ಹೆಚ್ಚಾಗುತ್ತಿದರೆ, ಆದಾಯ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚಾಗುತ್ತಿದ್ದರೆ, ಕಾರ್ಪೊರೇಷನ್ ಎಂದು ಘೋಷಣೆ ಮಾಡಬಹುದು. ಕಾರ್ಪೊರೇಷನ್ ಡಿಕ್ಲೇರ್ ಮಾಡಿದರೆ ಹಣ ಕೊಡಲಿಕ್ಕೆ ಆಗುವುದಿಲ್ಲ. ಸ್ಟಾಚ್ಯುಟರಿ ಪೀರಿಯಡ್ ಇದೆ. ಯಾವ ಯಾವ ರೀತಿಯಿಂದ ಆಗಬೇಕು ಎನ್ನುವುದು ಇದೆ. ಆ ರೀತಿಯಲ್ಲಿ ಕಾರ್ಪೊರೇಷನ್ ಆಗುತ್ತದೆ. ಅಂತಹ ಎಲ್ಲಾ ಕಾರ್ಪೊರೇಷನ್‌ಗೂ ಆರ್ಥಿಕ ನೆರವು ಕೊಡಲೆಬೇಕು. ಅಲ್ಲಿಗೆ ಅಧಿಕಾರಿಗಳನ್ನು ಕೊಡಲೇ ಬೇಕಾಗುತ್ತದೆ. ಜನಸಂಖ್ಯೆ ಆಧಾರದ ಮೇಲೆ ದಾವಣಗೆರೆ, ಕೆಜಿಎಫ್, ಶಿವಮೊಗ್ಗದಲ್ಲೂ ಕೂಡ ಕಾರ್ಪೊರೇಷನ್ ಮಾಡಲೇಬೇಕಾಗುತ್ತದೆ. ಸಿಟಿ ಮುನಿಸಿಪಾಲಿಟಿಯಲ್ಲಿ ಕಮಿಷನರ್ ಇಟ್ಟರೆ ಜನಗಳ ಸುಖ ದುಃಖ ನೋಡಲಿಕ್ಕೆ ಆಗುವುದಿಲ್ಲ. ಹೊಸ ಕಾರ್ಪೊರೇಷನ್ ಮಾಡತಕ್ಕ ಯೋಜನೆ ಏನು ಮಾಡಿದ್ದೆವು ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೆಕು. ಇದಕ್ಕೆ ವ್ಯವಸ್ಥಿತ ರೀತಿಯಲ್ಲಿ ಕೆಲಸ ಆಗಬೇಕೆಂದು ಹೇಳಬೇಕಾಗಿದೆ. ಡಿಲಿಮಿಟೇಷನ್ ಆಫ್ ಕಾನ್‌ಸ್ಟಿಟ್ಯುಯೆನ್ಸಿ ವೀಕರ್ ಸೆಕ್ಷನ್‌ಗೆ ಮತ್ತು ಷೆಡ್ಯೂಲ್ ಕ್ಯಾಸ್ಟ್‌ಗೆ ಹೆಚ್ಚಿನ ಆದ್ಯತೆ ಸಿಕ್ಕಿಲ್ಲ ಎಂದು ಹೇಳಿದ್ದೇವೆ. ಹಾಲಿ ಇರುವ ಮುನಿಸಿಪಲ್ ಕಾರ್ಪೊರೆಷನ್ ಆ್ಯಕ್ಟನ್ನು ತಿದ್ದುಪಡಿ ಮಾಡಿ ಅಲ್ಲಿ ಸೋಷಿಯಲ್ ಜಸ್ಟಿಸ್ ಕಮಿಟಿ ಆಗಬೇಕೆಂದು ಹೇಳಿದ್ದೇವೆ. ಪುರಸಭೆ ನಗರಸಭೆ, ಕಾರ್ಪೊರೆಷನ್ ಇವರ ಟೊಟಲ್ ಬಡ್ಜೆಟ್ ಏನು ಇರುತ್ತದೆ ಅದರಲ್ಲಿ ಹರಿಜನ ಗಿರಿಜನರಿಗೆ ವಿಶೆಷವಾಗಿ ಕಾರ್ಯಕ್ರಮ ಹಾಕಿ ಕೊಂಡಿದೆಯೋ, ಇಲ್ಲವೇ ಎನ್ನತಕ್ಕದ್ದನ್ನು ನೋಡುವುದಕ್ಕೆ ಸೋಷಿಯಲ್ ಜಸ್ಟಿಸ್ ಕಮಿಟಿ ಅಂಥ ಯಾವ ರೀತಿ ಸ್ಟ್ಯಾಂಡಿಂಗ್ ಕಮಿಟಿ ಇರುತ್ತದೆ, ವರ್ಕ್ಸ್ ಕಮಿಟಿ ಇರುತ್ತದೆ, ಆದನ್ನು ತಿದ್ದುಪಡಿ ಮಾಡಿ ಆದೆಶ ಕೊಟ್ಟಿದ್ದೇವೆ. ಇದು ಕ್ರಾಂತಿಕಾರಕವಾದ ತಿದ್ದುಪಡಿ, ಇದರ ಬಗ್ಗೆ ಈಗಿನ ಸರ್ಕಾರ ಹರಿಜನ ಗಿರಿಜನರಿಗೆ, ಹಿಂದುಳಿದವರಿಗೆ, ಕಾರ್ಮಿಕರಿಗೆ, ಹೆಚ್ಚಿನ ಕಾರ್ಯಕ್ರಮ ಕೈಗೊಳ್ಳಬೇಕೆಂದು, ಎಲ್ಲಾ ಪುರಸಭೆಗಳಿಗೂ ಸರ್ಕಾರದಿಂದ ಆದೇಶ ಕಳುಹಿಸಿ, ಆ ದಿಸೆಯಲ್ಲಿ ಕೆಲಸ ಕಾರ್ಯಗಳು ಆಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ಜಗತ್ತಿನಲ್ಲಿ ಇದು ಒನೇ ಪಟ್ಟಣ. ಲೋಯರ್ ಲೆವೆಲ್, ಹೈಯರ್ ಲೆವೆಲ್‌ನಿಂದ ೧೫ ಸಾವಿರ ಫೀಟ್ ಎಳೆದು ತೆಗೆಯಬೇಕು. ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಕಾವೇರಿ ಎರಡನೇ ಹಂತವನ್ನು ಮುಗಿಸಲಿಕ್ಕೆ ೩೮ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಸುಮಾರು ೭೬ ಕಿಲೋಮಿಟರ್ ಪೈಪ್ ಲೈನ್ ಕಂಪ್ಲೀಟ್ ಮಾಡಿದ್ದೇವೆ. ಫ್ಯಾಕ್ಟ್ ಕಂಪನಿಯವರು ಪೈಪ್ ಕೆಲಸ ಮಾಡುತ್ತಿದ್ದರು. ಅವರಿಗೆ ಹೆಚ್ಚು ಮಾಡಬೇಕೆಂದು ಹೇಳಿ ಮಾಡಿದ್ದೇವೆ. ಮದ್ರಾಸ್‌ನಲ್ಲಿ ಎಂ.ಜಿ.ಆರ್. ಎಷ್ಟು ಹೇಳಿದರೂ ಕೂಡ ನೀರಿನ ತೊಂದರೆ ಆದ ಕಾರಣ ಮದ್ರಾಸ್‌ಗೆ ವಿಜಯವಾಡದಿಂದ ನೀರನ್ನು ತರುತ್ತಿದ್ದಾರೆ. At present, we are able to give 10 to 12 gallons of water per capita per day. As per the National average, we have to provide 45 gallons of water per capita per day. ಇದಕ್ಕೆ ೨೪೦ ಕೋಟಿ ರೂಪಾಯಿ ಯೋಜನೆ ಆಗಬೇಕಾಗುತ್ತದೆ. ಈಗ ಯು.ಪಿ. ಯಲ್ಲೂ ಜಲನಿಗಮ ಮಾಡಿದ್ದಾರೆ. ಸ್ಟೇಟ್ ಫಂಡ್‌ನಿಂದ ೨೪೦ ಕೋಟಿ ರೂಪಾಯಿ ಖರ್ಚು ಮಾಡಲಿಕ್ಕೆ ಆಗುವುದಿಲ್ಲ. ಎಲ್‌ಐಸಿಯಿಂದ ತರಬೇಕು. ಸೆಂಟ್ರಲ್ ಅಸಿಸ್ಟೆನ್ಸ್ ತರಬೇಕು, ಡಿಫೆನ್ಸ್ ಎಸ್ಟಾಬ್ಲಿಷ್‌ಮೆಂಟ್ ನಿಂದ ಮತ್ತಿತರ HAL and so many other Central Public Sector Undertakings ಗಳಿಂದ ತಂದು ಮಾಡಬೆಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಬೇರೆ ಬೇರೆ ವಿಚಾರದಲ್ಲಿ ಹೋದಾಗ ರಾಜಕೀಯ ಬಿಟ್ಟು ಇದನ್ನು ಮಾಡಿದರೆ ನಾವು, ವಿರೋಧ ಪಕ್ಷದ ನಾಯಕರು ಸಹಾಯ ಮಾಡುತ್ತೇವೆ.

ಇವೊತ್ತು ಬೆಂಗಳೂರು ಕರ್ನಾಟಕದ ರಾಜಧಾನಿ. ಬೆಂಗಳೂರಿಗೆ ಕಾವೇರಿ ಮೂರನೆ ಹಂತ ಆಗಬೇಕು. ಆದ್ದರಿಂದ, ಸೆಂಟ್ರಲ್ ಅಸಿಸ್ಟೆನ್ಸ್ ಮತ್ತು ಎಲ್‌ಐಸಿಯಿಂದ ಹೆಚ್ಚಿನ ರೀತಿಯಲ್ಲಿ ಹಣ ತಂದರೆ ಕಾವೇರಿ ಮೂರನೆ ಹಂತದ ಯೋಜನೆಯನ್ನು ಮುಗಿಸಲಿಕ್ಕೆ ಆಗುತ್ತದೆ. ಅವರಿಗೆ ಎಲ್ಲಾ ಗೊತ್ತಿದೆ. ಅವರು ಬಂದು ಮೆಚ್ಚುಗೆಯನ್ನು ವ್ಯಕ್ತ ಮಾಡಿ ಸಕಾಲದಲ್ಲಿ ಈ ಎರಡನೇ ಹಂತದ ಯೋಜನೆಯನ್ನು ಮುಗಿಸಿದ್ದೀರೆಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಎರಡನೇ ಹಂತದ ಕಾವೇರಿ ಯೋಜನೆಯನ್ನು ಮುಗಿಸುವುದಕ್ಕೆ ಹೆಚ್ಚಿನ ಸಹಕಾರ ಕೊಟ್ಟಿದ್ದಾರೆ. ಆದರೆ ಮೂರನೇ ಹಂತದ ಯೋಜನೆಗೆ ಕೇವಲ ಪ್ಲಾನ್‌ನಲ್ಲಿ ಟೋಕನ್ ಗ್ರಾಂಟ್ ಎಂದು ಪ್ರೊವೈಡ್ ಮಾಡಿದ್ದೀರಿ. ರಾಜ್ಯ ಸರ್ಕಾರದವರು ಎಲ್.ಐ.ಸಿ.ಯಿಂದ, ವಿಶ್ವ ಬ್ಯಾಂಕ್‌ನಿಂದ ಹಾಗೂ ಇನ್ನೂ ಬೇರೆ ಬೇರೆ ಕಡೆಯಿಂದ ಹಣವನ್ನು ತಂದು ಯೋಜನೆಯನ್ನು ಪ್ರಾರಂಭ ಮಾಡಬೇಕಾಗಿದೆ. ೧೯೯೦ರಲ್ಲಿ ಬೆಂಗಳೂರು ನಗರದ ಜನಸಂಖ್ಯೆ ವಿಪರೀತವಾಗಿ ಬೆಳೆದು ಪ್ರತಿ ಕುಟುಂಬಕ್ಕೆ ಕೇವಲ ೨ ಗ್ಯಾಲನ್ ನೀರನ್ನು ಒದಗಿಸಬೇಕಾದ ಪರಿಸ್ಥಿತಿ ಬರಬಹುದು. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಒಬ್ಬ ಚೀಫ್ ಇಂಜಿನಿಯರ್ ಯಾರಿದ್ದಾರೆ ಅವರು ಬಹಳ ಕಷ್ಟಪಟ್ಟು ಹಗಲೂ ರಾತ್ರಿ ಕೆಲಸ ಮಾಡಿದ್ದಾರೆ. ಅವರ ಹೆಸರು ಗುಲಾಂ ಅಹ್ಮದ್ ಎಂದು. ಅವರನ್ನು ತಾವು ನೋಡಿರಬಹುದು. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನ ಉದ್ಘಾಟನೆಯನ್ನು ಮಾಡಿದಾಗ ಗುಲಾಂ ಅಹ್ಮದ್‌ರವರ ಕಣ್ಣಲ್ಲಿ ನೀರು ಬಂತು. ನನ್ನ ಜೀವನದಲ್ಲಿ ಒಂದು ಮಹತ್ಕಾರ್ಯವನ್ನು ನಾನು ಸಾಧನೆ ಮಾಡಿದಂತಾಯಿತು ಎಂದು ಸಮಾಧಾನದ ನಿಟ್ಟುಸಿರನ್ನು ಬಿಟ್ಟರು. ಇದಕ್ಕೆ ಮಾನ್ಯ ದೇವರಾಜ ಅರಸರೂ ಕೂಡ ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದರು. ಮಾನ್ಯ ಲಕ್ಷ್ಮೀಸಾಗರ್‌ರವರು ತೊರೆಕಾಡನಹಳ್ಳಿಗೆ ಬಂದಾಗ ಇದೆಲ್ಲಾ ಗುಲಾಂ ಅಹ್ಮದ್‌ರವರ ಕೆಲಸ ಎಂದು ಪ್ರಸ್ತಾಪ ಕೂಡ ಮಾಡಿದ್ದಾರೆ. ಆದರೆ ಅವರನ್ನು ತಾವು ಇವತ್ತು ಆಲಮಟ್ಟಿಗೆ ವರ್ಗಮಾಡಿದ್ದೀರಿ. ಯಾರೇ ಒಬ್ಬ ಸರ್ಕಾರಿ ನೌಕರರನ್ನು ವರ್ಗ ಮಾಡತಕ್ಕ ಅಧಿಕಾರ ತಮಗೆ ಇದೆ. ಆದರೆ ಇವನನ್ನು ಏತಕ್ಕೆ ಮಾಡಿದಿರಿ ಎಂದು ನಾವು ಕೇಳುವುದಿಲ್ಲ. ಯಾರು ಹಗಲೂ ರಾತ್ರಿ ಕಷ್ಟಪಟ್ಟು ಕೆಲಸ ಮಾಡಿದ್ದಾರೆ ಅಂಥವರನ್ನು ಬೇರೆ ಕಡೆಗೆ ವರ್ಗ ಮಾಡಿರುವುದನ್ನು ನೋಡಿದರೆ ನಮಗೆ ಅನುಮಾನ ಬರುತ್ತದೆ. ಕಾವೇರಿ ೨ನೇ ಹಂತದ ಯೋಜನೆಯನ್ನು ಅಚ್ಚುಕಟ್ಟಾಗಿ ಮಾಡಿ ೩ನೇ ಹಂತದ ಯೋಜನೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದ ಬೆಂಗಳೂರು ವಾಟರ್ ಸಪ್ಲೈ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಹೆಚ್ಚು ಪರಿಣತರಾದ, ತಾಂತ್ರಿಕ ಅನುಭವವನ್ನು ಹೊಂದಿರತಕ್ಕ ಈ ವ್ಯಕ್ತಿಯ ವರ್ಗಾವಣೆಯ ಬಗ್ಗೆ ತಾವು ಕೈ ಹಾಕಿದ್ದು ಸರಿಯಲ್ಲ. ಈಗ ಅವರ ಜಾಗಕ್ಕೆ ಬಂದಿರುವವರು ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆಪಾದನೆಯನ್ನು ನಾವು ಮಾಡಬಾರದು. ಅಧಿಕಾರಿಗಳು ಬರುತ್ತಾರೆ ಹೋಗುತ್ತಾರೆ. ಆದರೆ ನಾನು ಮಂತ್ರಿಗಿರಿಯಿಂದ ಹೋದ ಮೇಲೆ ಇವತ್ತಿನವರೆಗೂ ಯಾವ ಅಧಿಕಾರಿಗಳೂ ನನ್ನನ್ನು ಭೇಟಿಯಾಗಿಲ್ಲ. ಒಂದು ವೇಳೆ ಮಾಡಿದ್ದರೆ ಸ್ವಲ್ಪ ಫೋನ್ ಮಾಡಿರಬಹುದು ಅಷ್ಟೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಾವೇರಿ ೩ನೇ ಹಂತದ ಯೋಜನೆಯನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕಾದರೆ ಹಗಲೂ ರಾತ್ರಿ ಕೆಲಸ ಮಾಡಬೇಕಾಗಿದೆ. ಆದರೆ ದಕ್ಷ ಆಡಳಿತಗಾರರನ್ನು ತಾವು ವರ್ಗ ಮಾಡುವುದಾದರೆ ನಾವು ಏತಕ್ಕೆ ಶ್ರಮ ತೆಗೆದುಕೊಂಡು ಕೆಲಸ ಮಾಡಬೇಕು ಎನ್ನುವ ಭಾವನೆ ಅವರ ಮನಸ್ಸಿನಲ್ಲಿ ಬರುತ್ತದೆ. ಮಾನ್ಯ ಚಂದ್ರಶೇಖರ್‌ರವರು ಲೇಬರ್ ಲೀಡರ್. ಅವರು ಯಾವಾಗಲೂ ನಮ್ಮ ಹತ್ತಿರ ಬರುತ್ತಿದ್ದರು. ಇದು ಏತಕ್ಕೆ ಹೀಗೆ ಆಗುತ್ತಿದೆ ಎಂಬುದು ಒಬ್ಬಿಬ್ಬರ ಮನಸ್ಸಿನಲ್ಲಿರತಕ್ಕ ವಿಚಾರವಲ್ಲ. ಎಲ್ಲರ ಮನಸ್ಸಿನಲ್ಲೂ ಇರತಕ್ಕ ವಿಚಾರವನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇದಕ್ಕೆ ಗ್ರೌಂಡ್ ಲೆವೆಲ್‌ನಲ್ಲಿ ರಿಸರ್ವಾಯರ್ ಆಗಬೇಕಾಗಿದೆ. ಮಾನ್ಯ ಸಚಿವರಾದ ರಘುಪತಿಯವರೂ ಸಾಕಷ್ಟು ಬಾರಿ ಪ್ರಯತ್ನ ಮಾಡಿದರು. ಈಗ ತಮ್ಮದೇ ಸರ್ಕಾರ ಬಂದಿದೆ. ಏನು ಬೇಕಾದರೂ ಮಾಡಬಹುದು. ಬಹುಶಃ ತಮಗೆ ಈ ಖಾತೆ ಬಂದಿದ್ದರೆ ಮಾಡುತ್ತಿದ್ದಿರೋ ಏನೋ ಗೊತ್ತಿಲ್ಲ......

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ರಘುಪತಿಯವರಿಗೆ ನೀರಿನಲ್ಲಿ ಮುಳುಗುವುದಕ್ಕೆ ಇಷ್ಟವಿಲ್ಲ.

ಶ್ರೀ ಎಂ. ರಘುಪತಿ.—ನನಗೆ ಈಜಾಡುವುದಕ್ಕೆ ಬಹಳ ಇಷ್ಟ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ನಮ್ಮ ಬೆಂಗಳೂರು ನಗರದ ಜನಸಂಖ್ಯೆ ವಿಪರೀತವಾಗಿ ಬೆಳೆಯುತ್ತಾ ಹೋಗುತ್ತಿದೆ. ಇದು ಕೆಂಪೇಗೌಡನಿಂದ ಸ್ಥಾಪಿತವಾದಂಥ ಐತಿಹಾಸಿಕ ನಗರ.

ಬೆಂಗಳೂರು ನಗರ ಸಭೆಯ ಲಿಮಿಟ್ ಹಿಂದೆ ಏನಿತ್ತು ಅದನ್ನೂ ಮೀರಿ ಇವತ್ತು ಬೆಳೆಯುತ್ತಾ ಹೋಗುತ್ತಿದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಬೆಂಗಳೂರಿನ ಸುತ್ತ ಗ್ರೀನ್‌ಬೆಲ್ಟ್ ಎಂದು ಮಾಡುತ್ತೇವೆಂದು ತಾವು ಪತ್ರಿಕೆಗಳಲ್ಲಿ ಹೇಳಿದಿರಿ. ಇವರು ಹೊಸದಾಗಿ ಏನೋ ಮಾಡುತ್ತಾರೆಂದು ಜನರು ತಿಳಿದುಕೊಳ್ಳುತ್ತಾರೆ. ಮೊದಲು ಮಾಡಿದ್ದನ್ನು ಜನರು ಮರೆತು ಹೋಗುತ್ತಾರೆ. ಇವರು ಹೊಸದಾಗಿ ಏನೋ ಮಾಡುತ್ತಾರೆಂದು ಈ ಕಡೆ ನೋಡುತ್ತಾರೆ...

ಶ್ರೀ ಪಿ. ರಾಮದೇವ್.—ತಾವು ಮಂತ್ರಿಗಳಾಗಿದ್ದಾಗ ಒಂದು ಗ್ರೀನ್‌ಬೆಲ್ಟ್ ಮಾಡಿದ್ದೀರಿ. ತಾವು ಏನು ಗ್ರೀನ್‌ಬೆಲ್ಟ್ ಎಂದು ಮಾಡಿದಿರಿ ಅಲ್ಲೆಲ್ಲಾ ಈಗ ಮನೆಗಳು ಬಂದಿವೆ.

ಶ್ರೀ ಧರ್ಮಸಿಂಗ್.—೨ ಲಕ್ಷಕ್ಕಿಂತ ಹೆಚ್ಚು ಮನೆಗಳು ಅನಧಿಕೃತವಾಗಿ ಬಂದಿವೆ. ಇವತ್ತು ಬೆಂಗಳೂರು ನಗರದಲ್ಲಿರತಕ್ಕ ಮನೆಯವರಿಗೆ ಕುಡಿಯುವುದಕ್ಕೂ ನೀರು ಸಿಕ್ಕುವುದು ಕಷ್ಟವಾಗುತ್ತಿದೆ. ತಾವು ಬನಶಂಕರಿ, ಹೆಚ್.ಎ.ಎಲ್., ಹೆಚ್.ಎಂ.ಟಿ. ಮುಂತಾದ ಕಡೆಗೆ ಹೋದರೆ ಗೊತ್ತಾಗುತ್ತದೆ. ಇವತ್ತು ತಾವು ಗ್ರೀನ್‌ಬೆಲ್ಟ್ ಮಾಡಬೇಕಾದರೆ ಯಾವ ರೀತಿ ಮಾಡಬೇಕೆಂದು ಯೋಚನೆಯನ್ನೇನಾದರೂ ಮಾಡಿದ್ದೀರಾ ? ಮಾನ್ಯ ದೇವರಾಜ ಅರಸರ ಕಾಲದಲ್ಲಿ ೧೧೦ ಹಳ್ಳಿಗಳನ್ನು ಹೊಸದಾಗಿ ಏನು ಸೇರಿಸಿಕೊಂಡರು, ಅಲ್ಲಿ ಗ್ರೀನ್‌ಬೆಲ್ಟ್ ಮಾಡಬೇಕೆಂದಿದ್ದ ಸಂದರ್ಭದಲ್ಲಿ ಅದು ಹೈಕೋರ್ಟಿಗೆ ಹೋಯಿತು. ಅದಕ್ಕೆ ಸಮಗ್ರವಾದ ಒಂದು ಯೋಜನೆಯನ್ನು ಮಾಡಿದ್ದರು. ನಿಮ್ಮ ಬಿ.ಡಿ.ಎ. ಮತ್ತು ನಗರಸಭೆಯ ಲಿಮಿಟ್‌ನ್ನು ಬಿಟ್ಟು ಇನ್ನೂ ಐದು ಮೈಲಿಯಷ್ಟು ದೂರ ಹೋಗಿ ಬೇರೆ ಬೇರೆ ಪ್ರದೇಶಗಳಿಂದ ಬರತಕ್ಕ ಜನರು ಮನೆಗಳನ್ನು ಕಟ್ಟಿಸಿಕೊಳ್ಳುತ್ತಾರೆ. ಅಲ್ಲಿಯ ಪಂಚಾಯತಿಯ ಛೇರ್ಮನ್‌ರವರು ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಲೈಸೆನ್ಸ್ ಕೊಡುತ್ತಾರೆ. ಆದ್ದರಿಂದ ಇದನ್ನು ತಪ್ಪಿಸಬೇಕಾದರೆ ಪಂಚಾಯಿತಿ ಆಕ್ಟಿನಳನೇ ನಿಯಮವನ್ನು ಮೊದಲು ತಿದ್ದುಪಡಿ ಮಾಡಬೇಕು. ಇದು ಸೆಕ್ರೆಟರಿಯೇಟ್ ಮತ್ತು ಲಾ ಡಿಪಾರ್ಟ್‌ಮೆಂಟ್‌ಗೂ ಹೋಗಿದೆ. ಆದರೆ ಇದು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ. ವಿಲೇಜ್ ಪಂಚಾಯಿತಿ ಆಕ್ಟ್‌ನಲ್ಲಿ ಛೇರ್ಮನ್‌ಗೆ ಕೊಡತಕ್ಕ ಪವರ್ ಏನಿದೆ ಅದನ್ನು ನಿಲ್ಲಿಸಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೆ, ೧೯೮೦ಕ್ಕೆ ಮುಂಚಿತವಾಗಿ ೩೬ ಕೋಟಿ ರೂ ಗಳ ಆಸ್ತಿಯನ್ನು ಲೀಸ್‌ಗೆ ಕೊಟ್ಟಿದ್ದಾರೆ. ಇದರ ಬಗ್ಗೆ ವಿಜಿಲೆನ್ಸ್ ಎನ್‌ಕ್ವೈರಿ ಮಾಡಿಸಿದ್ದೀರಾ ? ೧೯೭೦ರಲ್ಲಿ ಅಲಸೂರು ಲೇಕನ್ನು ೬೬೦ ರೂ.ಗೆ ಒಬ್ಬ ಮಾರ್ವಾಡಿಗೆ ೬೦ ವರ್ಷದವರೆಗೆ ಲೀಸ್‌ಗೆ ಕೊಟ್ಟಿದ್ದಾರೆ. ಅಲ್ಲಿ ಸುಂದರವಾದ ಕೆರೆಯ ದಂಡೆಯಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ. ಈ ಬೆಂಗಳೂರು ನಗರದಲ್ಲಿ ಮನಸ್ಸಿಗೆ ಬಂದಂತೆ ಮನೆಗಳನ್ನು ಕಟ್ಟಲು ಕೊಟ್ಟಿದ್ದ ಪರವಾನಿಗೆಗಳನ್ನೆಲ್ಲಾ ಕ್ಯಾನ್ಸಲ್ ಮಾಡಲು ಆರ್ಡರ್ ಮಾಡಿದ್ದೇವೆ. ಆಗ ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿದ್ದಾಗ ನನ್ನನ್ನು ಕೇಳಿದರು. ಆಗಿನ ಸೇಲ್‌ಡೀಡ್ ಕೂಡ ನಮಗೆ ಇನ್ನೂ ಸಿಕ್ಕಿಲ್ಲ. ಆ ಸೇಲ್‌ಡೀಡ್‌ನ್ನು ಮುನ್ಸಿಫ್ ಕೋರ್ಟಿನಿಂದ ತರಬೇಕಾಯಿತು. ಇವತ್ತೂ ಕೂಡ ಇಂಥ ಅವ್ಯವಹಾರಗಳು ಈ ಕಾರ್ಪೊರೇಷನ್‌ನಲ್ಲಿ ಆಗುತ್ತಿವೆ. ನಮ್ಮ ಕಾಲದಲ್ಲಿ ಒಂದು ಅಂಗುಲ ಜಾಗವನ್ನೂ ನಾವು ಯಾರಿಗೂಕೊಡಲಿಲ್ಲ. ಲೀಸ್‌ಗೆ ಜಮೀನನ್ನು ಕೊಡತಕ್ಕ ಕೆಲಸವನ್ನು ಪ್ರಪ್ರಥಮವಾಗಿ ನಿಲ್ಲಿಸಿದವರು ಎಂದರೆ ನಾವು ಎನ್ನುವ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

೩–೦೦ ಪಿ.ಎಂ.

ಈವತ್ತು ಅನ್‌ಆಥರೈಸ್ಡ್ ಆಗಿ ಕಟ್ಟಡಗಳು ಬರುತ್ತಿದೆ. ಅದಕ್ಕೆ ತಿದ್ದುಪಡಿಯನ್ನು ತರಬೇಕು. ತಿದ್ದುಪಡಿಯನ್ನು ತರದೆಹೋದರೆ ಮನೆಗಳನ್ನು ಕಟ್ಟತಕ್ಕಂಥವರಿಗೆ ಪರ್ಮಿಷನ್ ಕೊಟ್ಟ ಹಾಗಾಗುತ್ತದೆ. ಅನಧಿಕೃತವಾಗಿ ಮನೆಗಳನ್ನು ಕಟ್ಟುತ್ತಲೇ ಬರುತ್ತಿರುತ್ತಾರೆ. ಚುನಾವಣೆಗಳು ಬರುತ್ತದೆ ಆಗ ರಾಮ್‌ದೇವ್ ಆಗಲಿ, ನಾವಾಗಲಿ ಬಂದರೆ ಅದನ್ನು ರೆಗ್ಯುಲರೈಸ್ ಮಾಡಬೇಕಾಗುತ್ತದೆ. ಈ ರೀತಿಯಾಗಿ ಬೆಂಗಳೂರು ನಗರ ಬೆಳೆಯುತ್ತಾ ಒಂದು ಸಮಸ್ಯೆಯಾಗಿ ಬಿಡುತ್ತದೆ. ಆದ್ದರಿಂದ ನಾವು ಅಧಿಕಾರದಲ್ಲಿದ್ದಾಗ ಬೆಂಗಳೂರು ನಗರದಲ್ಲಿರತಕ್ಕಂಥ ಎಲ್ಲ ಶಾಸಕರನ್ನು ಕರೆದುಕೊಂಡು ಕಲ್ಕತ್ತಾ, ಬಾಂಬೆ, ಮದ್ರಾಸ್ ಎಲ್ಲಾ ಕಡೆಯೂ ಸುತ್ತಾಡಿ ಅಧ್ಯಯನ ಮಾಡಿಕೊಂಡು ಬಂದಿರುತ್ತೇವೆ. ಈವತ್ತು ಈ ಒಂದು ದೊಡ್ಡ ದೇಶದಲ್ಲಿ ಬೆಂಗಳೂರು ನಗರವನ್ನು ಒಂದು ಮಾದರಿ ನಗರವನ್ನಾಗಿ ಮಾಡಬೇಕಾಗಿದೆ. ಮಾದರಿ ಮೆಟ್ರೋಪಾಲಿಟನ್ ನಗರದ ರೀತಿ ತರಬೇಕಾದರೆ ಕೋಆರ್ಡಿನೇಷನ್ ಇರಬೇಕು. ಈವತ್ತು ಹೌಸಿಂಗ್ ಬೋರ್ಡ್, ಬಿ.ಡಿ.ಎ.

ಸ್ಲಮ್ ಕ್ಲಿಯರೆನ್ಸ್ ಇವುಗಳಲ್ಲಿ ಕೋಆರ್ಡಿನೇಷನ್‌ನಿಂದ ನಡೆಯಬೇಕೆಂದು ಹೇಳಿ, ಇವುಗಳನ್ನೆಲ್ಲಾ ಸೇರಿಸಿ ಒಂದು ಮೆಟ್ರೊಪಾಲಿಟನ್ ಮಾಡಬೇಕೆಂದು ಹೇಳಿ ನಾವು ಒಂದು ಬಿಲ್ಲನ್ನು ಕೂಡ ತಯಾರು ಮಾಡಿ ಕಾನೂನು ಮಂತ್ರಿಯವರಿಗೆ ಕಳುಹಿಸಿಕೊಟ್ಟಿದ್ದೆವು. ಅದು ಸ್ಕ್ರೂಟಿನಿ ಕೂಡ ಆಗಿದೆ. ಕಾನೂನು ಮಂತ್ರಿಯವರು ಇದು ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೂತು ವಿಚಾರ ವಿಮರ್ಷೆ ಮಾಡಿಯೂ ಕೂಡ ಆಗಿದೆ. ಈವತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಬಾಂಬೆ ಕಲ್ಕತ್ತಾ ರೀತಿಯಲ್ಲಿ ಆಗಬೇಕಾಗಿದೆ. ಈ ಬೆಂಗಳೂರು ನಗರದಲ್ಲಿ ಆಗುತ್ತಿರತಕ್ಕಂಥ ಅನಾಹುತವನ್ನು ತಡೆಹಿಡಿಯಬೇಕೆಂದರೆ, ಆ ರಾಜ್ಯಗಳು ಅನುಸರಿಸಿದ ನೀತಿಯನ್ನೇ ಅನುಸರಿಸಬೇಕಾಗುತ್ತದೆ. ಈವತ್ತು ಬೆಂಗಳೂರು ನಗರದ ಟ್ರಾಫಿಕನ್ನು ತೆಗೆದುಕೊಂಡರೆ ಆರ್ಕಾಟ್ ಶ್ರೀನಿವಾಸಚಾರ್ ಸ್ಟ್ರೀಟನ್ನು ವೈಡನ್ ಮಾಡಬೇಕಾಗುತ್ತದೆ. ಹಾಗೆಯೇ ಸುಬೇದಾರ್ ಚತ್ರಂ ಸ್ಟ್ರೀಟನ್ನು ವೈಡನ್ ಮಾಡಬೇಕಾಗುತ್ತದೆ. ಇದರ ಬಗ್ಗೆ ಸರ್ವೆಯೂ ಕೂಡ ಮಾಡಿದ್ದಾರೆ. ಪೋಲೀಸ್ ಕಮಿಷನರ್ ಜೊತೆ ಸಮಾಲೋಚನೆಯನ್ನು ಮಾಡಿದ್ದೇವೆ. ಬೆಂಗಳೂರು ನಗರದಲ್ಲಿ ಜನಸಂಖ್ಯೆಯ ಒತ್ತಡ ಯಾವ ರೀತಿ ಆಗಿದೆ ಎಂದರೆ ಕೆಂಪೇಗೌಡ ರಸ್ತೆಯಲ್ಲಿ ೬ ಗಂಟೆಯ ಸಮಯದಲ್ಲಿ ಚಿತ್ರಮಂದಿರಗಳು ಚಿತ್ರವನ್ನು ಬಿಟ್ಟರೆ ಕಾರನ್ನು ತೆಗೆದುಕೊಂಡು ಮನೆಗೆ ಹೋಗಬೇಕೆಂದರೆ ಒಂದು ಗಂಟೆಗೂ ಮೇಲಾಗುತ್ತದೆ. ಅಷ್ಟರಮಟ್ಟಿನ ಜನಸಂಖ್ಯೆ ಬೆಳೆದಿದೆ. ಇದನ್ನು ಯಾವರೀತಿ ತಡೆಗಟ್ಟಬೇಕೆಂಬುದರ ಬಗ್ಗೆ ಮತ್ತು ಈ ರೀತಿಯಾಗಿ ಜನಸಂಖ್ಯೆ ಹೆಚ್ಚುತ್ತಾ ಹೋದರೆ ಏನು ಮಾಡಲು ಸಾಧ್ಯವೆಂದು ಯೋಚಿಸಿ ಟ್ರಾಫಿಕ್ ಸರ್ವೆ ಮಾಡಿದಮೇಲೆ ಮೊಟ್ಟಮೊದಲನೆಯದಾಗಿ ಮಾನ್ಯ ಮಂತ್ರಿಗಳು ಜಾಫರ್ ಷರೀಫ್‌ರವರಿಗೆ ರಿಪೋರ್ಟ್ ಕೊಟ್ಟಿದ್ದೇವೆ. ಪ್ಲಾನಿಂಗ್ ಮಿನಿಸ್ಟರ್‌ಗೂ ಕೂಡ ರಿಪೋರ್ಟ್ ಕೊಟ್ಟಿದ್ದೇವೆ. ಈವತ್ತು ಮೆಟ್ರೊಪಾಲಿಟನ್ ಟ್ರಾನ್ಸ್‌ಪೋರ್ಟ್ ಪ್ರಾಜೆಕ್ಟ್‌ಗೆ ಮಂಜೂರಾತಿಯನ್ನು ಕೊಡಬೇಕೆಂದು ಕೇಂದ್ರ ಸರ್ಕಾರದ ಪ್ಲಾನಿಂಗ್ ಮಿನಿಸ್ಟರ್‌ರವರಿಗೆ ಹೇಳಿರುತ್ತೇವೆ. ಇಲ್ಲದಿದ್ದರೆ ಬಸ್‌ಗಳು ತಿರುಗಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿರುತ್ತೇವೆ. ಫ್ಲೈಓವರ್ ಬ್ರಿಡ್ಜ್ ಮತ್ತು ಎಲ್ಲ ರೀತಿಯ ಸಮಗ್ರವಾದಂಥ ವ್ಯವಸ್ಥೆಯಾಗಬೇಕೆಂದು ಡೈರೆಕ್ಟರ್ ಆಫ್ ಪ್ಲಾನಿಂಗ್ ಸರ್ವೆ ಮಾಡಿ ಕೊಟ್ಟಿದ್ದಾರೆ. ಈವತ್ತಿನ ದಿವಸ ಎಲ್ಲೆಲ್ಲಿ ಕಾರ್ ಪಾರ್ಕಿಂಗ್ ಮಾಡಬೇಕು ಅದನ್ನೆಲ್ಲ ವಿಶೇಷವಾದ ರೀತಿಯಲ್ಲಿ ಮಾಡಿಕೊಟ್ಟಿದ್ದಾರೆ. ಕೇವಲ ಕಾರ್ಪೊರೇಷನ್ ಕೆಲಸ ಮಾಡತಕ್ಕಂಥದ್ದು ಏನು ಇದೆ ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಇವತ್ತು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಅಲ್ಲಿ ಇಲ್ಲಿ ಹೆಗ್ಗಣಗಳು ಇವೆ. ಆದ್ದರಿಂದ ನಾವು ಬಂದಮೇಲೆ ಪ್ರಪ್ರಥಮವಾಗಿ ಒಂದು ಕಾರ್ಪೊರೇಷನ್ ನೌಕರರನ್ನು ಮತ್ತೊಂದು ಕಾರ್ಪೊರೇಷನ್‌ಗೆ ವರ್ಗಾವಣೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಒಂದೇ ಕಡೆ ಇಪ್ಪತ್ತು ವರ್ಷ ಕುಳಿತುಕೊಳ್ಳಬಾರದು ಎಂದು ಮಾಡಿದ್ದೇವೆ. ಸೀನಿಯಾರಿಟಿ ಲಿಸ್ಟ್ ಬರುವುದಕ್ಕೆ ತೊಂದರೆ ಆದರೂ, ಬೇರೆ ಬೇರೆ ಕಾರ್ಪೊರೇಷನ್‌ಗಳಿಂದ ಅಧಿಕಾರಿಗಳು ಬರಬೇಕೆಂದು ಎನ್ನುವ ಉದ್ದೇಶದಿಂದ ಅಮೆಂಡ್‌ಮೆಂಟ್ ಕೂಡ ಮಾಡಿದ್ದೇವೆ. ಈವತ್ತು ಬೆಂಗಳೂರು ನಗರ ಏನು ಇದೆ ಇದರ ಬಗ್ಗೆ ಹೆಚ್ಚಿನ ಲಕ್ಷವನ್ನು ಕೊಡಬೇಕು. ವಿಶೇಷ ಲಕ್ಷವನ್ನು ಕೊಡದೇ ಇದ್ದ ಪಕ್ಷದಲ್ಲಿ ಬೆಂಗಳೂರು ಪೇಟೆ, ಮತ್ತು ಬೆಂಗಳೂರು ನಗರದ ಒಂದು ಆಕರ್ಷಣೆ ಹೊರಟು ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನಾವು ಅನುಸರಿಸಿದ ರೀತಿಯನ್ನೇ ಅನುಸರಿಸಿಕೊಂಡು ಹೋಗಬೇಕು ಎನ್ನುವ ರೀತಿಯಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈವತ್ತು ಹೈರೈಸ್ಡ್ ಬಿಲ್ಡಿಂಗ್‌ಗಳು ಸಾಕಷ್ಟು ಪ್ರಮಾಣದಲ್ಲಿ ಬಂದಿರುತ್ತವೆ, ಮೊನ್ನೆಯೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಪ್ರಸ್ತಾಪ ಮಾಡಿದಂತಹ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ೧೦–೧೨ ವರ್ಷಗಳಿಂದಲೂ ಏತಕ್ಕೆ ಕೊಟ್ಟುಕೊಂಡು ಬಂದಿರಿ ಎನ್ನುವ ದಾಟಿಯಲ್ಲೇ ಹೇಳುತ್ತಿರುತ್ತಾರೆ. ನಾವು ಬಂದಮೇಲೆ ನಿಲ್ಲಿಸಿಬಿಟ್ಟಿರುತ್ತೇವೆಂದು ಹೇಳಿದರು. ಹಾಗಲ್ಲ, ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿ ಬಂದಿರತಕ್ಕಂಥ ಬಹುಅಂತಸ್ತು ಕಟ್ಟಡಗಳು ೨೩೬. ನಾವು ಬಂದಮೇಲೆ ೧೮೬ ಪ್ರಾರಂಭವಾಯಿತು. ಯಾವಾಗ ಭಕ್ತಾವರಂ ಕನ್‌ಸ್ಟ್ರಕ್ಷನ್ ಕಂಪನಿಯವರು ಸದಾಶಿವನಗರದಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಲಿಕ್ಕೆ ಪ್ರಾರಂಭ ಮಾಡಿದರು ಆಗ ನಾನು ಮಾನ್ಯ ರಾಮ್‌ದೇವ್‌ರವರು ಹೋದಾಗ ಅದಕ್ಕೆ ಜಾಫರ್ ಸೈಫುಲ್ಲರವರು ಮನವಿಯನ್ನು ಕೊಟ್ಟರು. ಏನು ಸ್ವಾಮಿ ಸದಾಶಿವನಗರದಲ್ಲಿ ಹೈರೈಸ್ಡ್ ಬಿಲ್ಡಿಂಗ್‌ಗಳಿಗೆ ಪರವಾನಿಗೆಯನ್ನು ಕೊಟ್ಟಿರುತ್ತೀರಿ ಎಂದು ಕೇಳಿದರು. ಇದರಿಂದ ಏನು ತೊಂದರೆಯಾಗುತ್ತದೆ ಎಂದು ಹೇಳಿದರು. According-to-by-law ಇಲ್ಲಿ ಸೈಟ್ ಡಿವಿಯೇಷನ್ ಆಗಿದೆ, ಕಾರ್ ಪಾರ್ಕಿಂಗ್ ಇಲ್ಲ, ೮೦ ಅಡಿ ಸೈಟ್‌ಗಾದರೂ ಕೂಡ ಕಾರ್ ಪಾರ್ಕಿಂಗ್ ಕೊಡಬೇಕು. ೫೦ ಅಡಿ ಜಾಗಕ್ಕೂ ಕಾರ್ ಪಾರ್ಕಿಂಗ್ ಕೊಡಬೇಕೆಂದು ಇರುತ್ತದೆ. ಬಹುಅಂತಸ್ತು ಕಟ್ಟಡ ಬಂದರೆ ಅಲ್ಲಿ ಏನಾದರೂ ಪಾರ್ಟಿ ನಡೆದರೆ ಕಾರ್ ಪಾರ್ಕಿಂಗ್‌ಗೆ ಎಲ್ಲಿ ಹೋಗಬೇಕು? ಈವೊತ್ತಿನ

ದಿವಸ ಬಾಂಬೆಯಲ್ಲಿ ಹೈರೈಸ್ಡ್ ಬಿಲ್ಡಿಂಗ್‌ಗಳು ಆಗುತ್ತಿರುವುದನ್ನು ನಾವು ನೋಡಿದ್ದೇವೆ. ಕಾರ್ ಪಾರ್ಕಿಂಗ್‌ಗೆ ಅವಕಾಶವಿರುತ್ತದೆ. ಈವೊತ್ತಿನ ದಿವಸ ನಾವು ಅದನ್ನೆಲ್ಲಾ ನೋಡುವುದೇ ಇಲ್ಲ. ಬೆಂಗಳೂರಿನಲ್ಲಿ ಸಿಕ್ಕಾಪಟ್ಟೆ ಬಹುಅಂತಸ್ತುಗಳ ಕಟ್ಟಡಗಳಿಗೆ ಪರವಾನಿಗೆಯನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಗ್ರೌಂಡ್ ಲೆವೆಲ್‌ನಲ್ಲಿರತಕ್ಕಂಥದ್ದಕ್ಕೆ ನೀರು ಸಿಕ್ಕದೆ ಇರುವಾಗ ಬಹುಅಂತಸ್ತುಗಳ ಕಟ್ಟಡಗಳಿಗೆ ನೀರನ್ನು ಒದಗಿಸುವುದಾದರೂ ಹೇಗೆ? ಅದಕ್ಕೆ ಏನಾದರೂ ರಿಸ್ಟ್ರಿಕ್ಟ್ ಮಾಡಬೇಕು ಎನ್ನುವ ರೀತಿಯಲ್ಲಿ ನವೆಂಬರ್ ೧೯೮೦ಕ್ಕೆ ಒಂದು ಎಕ್ಸಿಕ್ಯೂಟೀವ್ ಆರ್ಡರ್ ಪಾಸ್ ಮಾಡಿ ೮೦ ಅಡಿಗಳಿಗೆ ಪರವಾನಿಗೆಯನ್ನು ಕೊಡಬೇಕೆಂದು ಎಕ್ಸಿಸ್ಟಿಂಗ್ ಬೈಲಾದಲ್ಲಿ ಪರ್ಮಿಷನ್ ಇದ್ದರೂ ಕೂಡ ಈವತ್ತು ಗ್ರೌಂಡ್ ಫ್ಲೋರ್‌ಗೆ ಕೊಡಬೇಕೆಂದು ಹೇಳಿ. ಅದಾದಮೇಲೆ ಯಾರಿಗೂ ಕೊಡಬಾರದೆಂದು ೧೯೮೧ರಲ್ಲಿ ನಾವು ಕಾನೂನು ಪಾಸ್ ಮಾಡಿದೆವು. According to Bye-Law ಇಲ್ಲಿ ಸೈಟ್ ಡಿವಿಯೇಷನ್ ಆಗಿಲ್ಲ. ಕಾರ್ ಪಾರ್ಕಿಂಗ್ ಇಲ್ಲ ಎಂದು ಆವಾಗ ನೋಟೀಸ್ ಕೂಡ ಕೊಟ್ಟು ಅವರು ಹೈಕೋರ್ಟಿಗೆ ಹೋಗಿ ಜಡ್ಜ್‌ಮೆಂಟ್ ತಂದಿರುತ್ತಾರೆ. ಒಂದು ಸಾರಿ ಲೈಸೆನ್ಸ್ ಸ್ಯಾಂಕ್ಷನ್ ಆದರೆ, ಅದನ್ನು ರಿವೋಕ್ ಮಾಡುವುದಕ್ಕೆ ಕಾರ್ಪೊರೇಷನ್‌ಗೆ ಅಧಿಕಾರವಿಲ್ಲ. ಇದನ್ನೆಲ್ಲ ನೋಡಿ ತಿದ್ದುಪಡಿ ಮಾಡತಕ್ಕಂಥ ರೀತಿಯಲ್ಲಿ ಸೆಕ್ರೆಟರಿ ಅಡ್ಮಿನಿಸ್ಟ್ರೇಷನ್. ಚೀಫ್ ಸೆಕ್ರೆಟರಿ ಮತ್ತು ಟೌನ್ ಪ್ಲಾನಿಂಗ್ ಕಮಿಷನರ್ ಯಾವರೀತಿ ಮಾಡಬೇಕು ಎನ್ನುವುದನ್ನು ಬೈಲಾದಲ್ಲಿ ಕಳುಹಿಸಿಕೊಟ್ಟಿರುತ್ತಾರೆ. ಇದು ಒಂದು ಸಂತೋಷದ ಸಂಗತಿ. ಇದನ್ನು ಯಾರು ಮಾಡಿದ್ದು? ನಾವು ಮಾಡಿದ್ದು. ಆದರೆ ೩೧೨ರ ಪ್ರಕಾರ ಶ್ರೀ ರಾಮ್‌ದೇವ್‌ರವರು ಆಪಾದನೆ ಮಾಡಿದರು ಭಕ್ತವರಂರವರಿಗೆ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಇಲ್ಲ, ಆದರೂ ಬಿಲ್ಡಿಂಗ್ ಕಟ್ಟಿದ್ದಾರೆಂದು, ಮೂರನೆ ಮಹಡಿಗೆ ಡಿಮಾಲಿಷ್ ಮಾಡಬೇಕೆಂದು ಆರ್ಡರ್ ಹೋಗಿದೆ, ಅದನ್ನು ಪುನರ್ ವಿಮರ್ಷಿಸಬೇಕೆಂದು ಮನವಿಯನ್ನು ಕೂಡ ಕೊಟ್ಟಿದ್ದಾರೆ. ಇದು ಯಾವ ರೀತಿ ಆಗಿದೆ ಎಂದರೆ ಮಾನ್ಯ ಲಕ್ಷ್ಮೀಸಾಗರ್‌ರವರು ಎರಡು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಹೇಳಿದರು. ಅವರು ಹೇಳಿದ್ದು ಯಾವ ಆಧಾರದ ಮೇಲೆ ಎಂದು ಗೊತ್ತಾಗಲಿಲ್ಲ. ತಾವು ಕೆಲಸ ಮಾಡತಕ್ಕಂಥ ರೀತಿಯಲ್ಲಿ ಆಧಾರವಿಲ್ಲದೆ ೨ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಹೇಳಿ ಸುಮ್ಮನೆ ಕುಳಿತುಬಿಟ್ಟರೆ ನಾವು ಹೇಳಬೇಕಾಗುತ್ತದೆ. ಮಾನ್ಯ ರಾಮ್‌ದೇವ್ ಮತ್ತು ಲಕ್ಷ್ಮೀಸಾಗರ್ ಹೇಳಬಹುದು. ಮಾನ್ಯ ಚಂದ್ರಶೇಖರ್ ಅವರ ಮೇಲೆ ಆಪಾದನೆ ಮಾಡತಕ್ಕಂಥ ರೀತಿಯಲ್ಲಿ ಈವತ್ತು ಬೆಂಗಳೂರು ಕಾರ್ಪೊರೇಷನ್ ಕ್ಯಾಪಿಟಲ್ ಸಿಟಿಯಲ್ಲಿ ವ್ಯವಸ್ಥಿತವಾಗಿ ಪರಿಣಾಮಕಾರಿಯಾಗಿ ಜನರ ನಿರೀಕ್ಷಣೆಯ ಮೇರೆಗೆ ಮಾಡತಕ್ಕಂಥ ಕೆಲಸ ಆಫೀಸರ್‌ಗಳ ಮೇಲೆ ಬಿದ್ದಿದೆ, ಈವತ್ತು ಡಿವಿಜನಲ್ ರ್‍ಯಾಂಕ್ ಡೆಪ್ಯುಟಿ ಕಮಿಷನರ್ ರವರನ್ನು ಹಾಕಿದ್ದೀರಿ. ಭಕ್ತಾವರಂ ಕೇಸ್‌ನಲ್ಲಿ ನಾವು ಸ್ಯಾಂಕ್ಷನ್ ಕೊಡಲಿಲ್ಲ. ಅದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಪೆಂಡಿಂಗ್ ಇದ್ದರೂ ಭಕ್ತಾವರಂರವರನ್ನು ರೆಗ್ಯುಲರೈಸ್ ಮಾಡಬೇಕು ಎನ್ನತಕ್ಕಂಥ ರೀತಿಯಲ್ಲಿ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಯಾರು ಕಾರಣರು ಎಂಬುದನ್ನು ತಿಳಿಸಬೇಕು. ಈ ವಿಚಾರದಲ್ಲಿ ೨–೩ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ನನ್ನ ಒಂದು ಆಪಾದನೆ ಇದೆ. ಆದ್ದರಿಂದ ಹೆಚ್.ಯು.ಡಿ. ಸೆಕ್ರೆಟರಿ ಅವರ ಮೂಲಕ ಇದಕ್ಕೆ ಸಂಬಂಧಪಟ್ಟ ಎಲ್ಲಾ ಪತ್ರಗಳನ್ನು ಸೀಸ್ ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ನಾವು ಈ ಹಿಂದೆ ಕೂಡ ೨ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಆಪಾದನೆ ಮಾಡಿದ್ದೆವು. ತಮ್ಮ ಕಾಲದಲ್ಲಿ ಲೈಸೆನ್ಸ್ ಕೊಟ್ಟಿದ್ದರಿಂದಲೇ ಅವರು ಕಟ್ಟಡ ಕಟ್ಟಿಸಿರುವುದು.

ಶ್ರೀ ಧರ್ಮಸಿಂಗ್. ನಾವು ಲೈಸೆನ್ಸ್ ಕೊಡಲಿಲ್ಲವೆಂದೇ ಅವರು ಸುಪ್ರೀಂಕೋರ್ಟಿಗೂ ಸಹ ಹೋಗಿದ್ದಾರೆ. ಆದ್ದರಿಂದ ಯಾರಯಾರ ಕಾಲದಲ್ಲಿ ಏನೇನು ಅವ್ಯವಹಾರ ನಡೆದಿದೆ ಎಂಬ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ. ಮೊನ್ನೆ ಬಿದ್ದುಹೋದಂಥ ಕಟ್ಟಡದಲ್ಲಿ ನೂರಾರು ಜನರು ಸಿಕ್ಕಿಕೊಂಡು ಸತ್ತಿದ್ದಾರೆ. ಈ ಕಟ್ಟಡದ ಮಾಲೀಕರು ೧೯೭೩ರಲ್ಲಿಯೇ ಲೈಸೆನ್ಸ್ ತೆಗೆದುಕೊಂಡು ಅದನ್ನು ರಿನ್ಯೂ ಮಾಡುತ್ತಾ ಬಂದಿದ್ದರು. ಅವರು ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ ಮೇಲೆ ಅಧಿಕಾರಿಗಳು ಸರಿಯಾಗಿ ಇನ್ಸ್‌ಪೆಕ್ಷನ್ ಮಾಡಿಲ್ಲ. ಪ್ಲಾನ್ ಪ್ರಕಾರ ಕಟ್ಟಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಬೇಕಾಗಿತ್ತು. ಕಟ್ಟಡದ ರಕ್ಷಣೆಯ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ. ಇವೊತ್ತು ಅಕ್ಯುಪೇಷನ್ ಸರ್ಟಿಫಿಕೇಟ್‌ನ್ನು ಯಾರು ಕೊಡಬೇಕೆಂಬುದೇ ಸರಿಯಾಗಿ ತೀರ್ಮಾನವಾಗಿಲ್ಲ. ಇದರ ಜೊತೆಗೆ ಕಾರ್ ಪಾರ್ಕಿಂಗ್‌ಗೆ ಜಾಗ ಬಿಡದ ಕಟ್ಟಡಗಳನ್ನು ಸಹ ರೆಗ್ಯುಲರೈಸ್ ಮಾಡಲಾಗುತ್ತಿದೆ. ಇದು ಸರಿಯಲ್ಲ. ಇವರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು. ಬೇಸ್‌ಮೆಂಟ್ ಲೆವೆಲ್ ಕಟ್ಟಡ ಕಟ್ಟಲೂ ಸಹ ಇವೊತ್ತು ಅನುಮತಿ ಕೊಡುತ್ತಿಲ್ಲ. ಇದಕ್ಕೆ

ಕಾರಣವೇನು? ಮೊನ್ನೆ ನಡೆದ ಕಾರ್ಪೊರೇಷನ್ ಚುನಾವಣೆಯಲ್ಲಿ ಜನರು ನಿಮಗೆ ಓಟು ಕೊಟ್ಟಿದ್ದಾರೆ ಅದರ ಮೇಲೆ ತಾವು ಗೆದ್ದು ಬಂದಿದ್ದೀರಿ. ಆದರೆ ಕಾರ್ಪೊರೇಷನ್‌ನಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಜನರಿಗೆ ತಿಳಿಯಬೇಕಾಗುತ್ತವೆ. ೧೨೦೦ ಜನರನ್ನು ಇಲ್ಲೀಗಲ್ ಆಗಿ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇದರಿಂದ ಅಲ್ಲಿ ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿದೆ. ಪಿ.ಎಸ್.ಸಿ. ಯಿಂದ ಲಿಸ್ಟ್ ಬಂದಿದ್ದರೂ ಸಹ ೨೦ ಜನ ಡಾಕ್ಟರ್ಸ್‌ನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಂಡಿದ್ದಾರೆ. ಆದರೆ ನಮ್ಮ ಕಾಲದಲ್ಲಿ ಈ ರೀತಿಯಿಂದ ನೇಮಕವಾಗಿರಲಿಲ್ಲ. ಹತ್ತು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೂ ಸಹ ಎಲ್ಲ ವರ್ಗದವರಿಗೂ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಆದರೆ ಇಲ್ಲಿ ಇದನ್ನು ಅನುಸರಿಸಿಲ್ಲ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿಯಿಂದ ನೇಮಕಗಳನ್ನು ಮಾಡುವುದು ಸರಿಯೇ? ಇಲ್ಲಿ ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲ ಎಂದು ಅರ್ಥವೇ ಹೇಗೆ ?

ಶ್ರೀ ಎಂ. ಚಂದ್ರಶೇಖರ್.— ಒಂದು ಸಾವಿರ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕೆಂದು ಈ ಹಿಂದಿನ ಸರ್ಕಾರವಿದ್ದಾಗಲೇ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಈ ಬಗ್ಗೆ ನಾನು ಮೇಲ್ಮನೆಯಲ್ಲಿಯೂ ಉತ್ತರ ಕೊಡುವಾಗ ಹೇಳಿದ್ದೇನೆ. ಇದನ್ನು ಬಿಟ್ಟರೆ ಬೇರೆ ೮೫ ಜನರ ನೇಮಕ ಮಾತ್ರ ಆಗಿದೆ.

ಶ್ರೀ ಧರ್ಮಸಿಂಗ್.—ಈಗ ಬೆಂಗಳೂರಿನಲ್ಲಿ ೫ ಸಾವಿರ ಪೌರ ಕಾರ್ಮಿಕರು ಏನು ಕೆಲಸ ಮಾಡುತ್ತಿದ್ದಾರೆ, ಅವರು ಬೆಂಗಳೂರಿನ ಜನಸಂಖ್ಯೆಗೆ ಸಾಲುವುದಿಲ್ಲವಾದ್ದ ಕಾರಣ ಮತ್ತೆ ೧ ಸಾವಿರ ಜನರನ್ನು ರೆಕ್ರೂಟ್‌ಮೆಂಟ್ ಕಮಿಟಿ ಮೂಲಕ ತೆಗೆದುಕೊಳ್ಳಬೇಕೆಂದು ನಾವು ಡೈರೆಕ್ಷನ್ ಕೊಟ್ಟಿದ್ದೆವು. ಆದರೆ ರೆಕ್ರೂಟ್‌ಮೆಂಟ್ ಕಮಿಟಿ ಮೂಲಕ ಇಲ್ಲಿ ನೇಮಕವಾಗಿಲ್ಲ.

ಶ್ರೀ ಎಂ. ಚಂದ್ರಶೇಖರ್.— ವರ್ಷೇ ವರ್ಷೇ ಕೆಲಸ ಕಾರ್ಯಗಳು ಜಾಸ್ತಿಯಾದಾಗ ಕಮೀಷನರ್ ಅವರ ಅಧಿಕಾರ ವ್ಯಾಪ್ತಿಯಲ್ಲಿ ಹಂಗಾಮಿಯಾಗಿ ಕೆಲವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅದರಂತೆ ಈ ಸಲ ೮೫ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಇದಕ್ಕೂ ಮೊದಲು ನೂರಾರು ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.— ೨-೩ ತಿಂಗಳ ಕೆಳಗೆ ಯಾರೋ ಒಬ್ಬ ಹುಡುಗ ಎಲ್ಲಿಯಾದರೂ ಕೆಲಸ ಕೊಡಿಸಿ ಎಂದು ನನ್ನ ಬಳಿ ಬಂದಾಗ ನಾನು ಕಾರ್ಪೊರೇಷನ್ ಕಮೀಷನರ್ ಅವರಿಗೆ ಫೋನ್ ಮಾಡಿ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ಎಂದು ಕೇಳಿದಾಗ ಅವರು ಈಗ ಯಾರನ್ನೂ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲವೆಂದು ಉತ್ತರ ಕೊಟ್ಟರು. ಆಗ ನಾನು ಆಯಿತು ಬಿಡಿ ಎಂದು ಹೇಳಿದೆ. ಆದರೆ ತಾವು ಈಗ ಹೇಳಿದ್ದನ್ನು ಕೇಳಿದ ಮೇಲೆ ನನಗೆ ಆಶ್ಚರ್ಯವಾಗುತ್ತದೆ ನಾನೇನೂ ಅವರನ್ನು ಒತ್ತಾಯ ಮಾಡಲಿಲ್ಲ. ಆದರೆ ಅವರಿಂದ ಬಂದಂಥ ಉತ್ತರವಿದು, ೨-೩ ತಿಂಗಳಿನಿಂದೀಚೆಗೆ ಅಲ್ಲಿ ಬೇಕಾದಷ್ಟು ನೇಮಕಾತಿಗಳಾಗಿವೆ ಎಂದು ಹೇಳುವುದನ್ನು ಕೇಳಿದರೆ ಅಲ್ಲಿ ತಮಗೆ ಬೇಕಾದವರಿಗೆಲ್ಲಾ ಕೆಲಸ ಕೊಟ್ಟಿದ್ದಾರೆಂದು ಅರ್ಥವಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.— ಯಾರು ಯಾರು ಶಿಫಾರಸ್ ಮಾಡಿದ್ದರೋ ಅಂತಹವರನ್ನು ಅಲ್ಲಿ ಕೆಲಸಕ್ಕೆ ತೆಗೆದುಕೊಂಡಿರಬಹುದು.

ಶ್ರೀ ಕೆ. ಹೆಚ್. ರಂಗನಾಥ್.— ನಾನು ಶಿಫಾರಸ್ ಮಾಡಲಿಲ್ಲ. ಫೋನ್ ಮಾಡಿದ್ದೆ. ಅವರು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. ಏನಿದ್ದರೂ ರೆಕ್ರೂಟ್‌ಮೆಂಟ್ ಕಮಿಟಿ ಮೂಲಕವೇ ತೆಗೆದುಕೊಳ್ಳಲಾಗುತ್ತದೆಂದು ಅವರು ಹೇಳಿದರು.

ಶ್ರೀ ಧರ್ಮಸಿಂಗ್.— ೧ ಸಾವಿರ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಒಂದು ರೆಕ್ರೂಟ್‌ಮೆಂಟ್ ಕಮಿಟಿಯನ್ನು ಈ ಹಿಂದಿನ ಸರ್ಕಾರ ರಚಿಸಿತು. ಈ ಕಮಿಟಿ ಮೂಲಕವೇ ನೇಮಕಗಳಾಗಿದ್ದರೆ ಎಲ್ಲ ವರ್ಗದವರಿಗೂ ಅಲ್ಲಿ ಪ್ರಾತಿನಿಧ್ಯ ಸಿಗುತ್ತಿತ್ತು. ಇಲ್ಲಿ ನನ್ನ ಆಪಾದನೆ ಏನೆಂದರೆ, ಕಳೆದ ೩-೪ ತಿಂಗಳುಗಳಿಂದ ಯಾವ ನಿಯಮವನ್ನೂ ಅನುಸರಿಸದೆ ನೇಮಕಾತಿಗಳಾಗಿವೆ. ಆದ್ದರಿಂದ ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ಜನರಿಗೆ ಅಲ್ಲಿ ಕೆಲಸಗಳು ಸಿಕ್ಕಿವೆ, ಯಾರು ಯಾರಿಂದ ಎಷ್ಟೆಷ್ಟು ಡೈರೆಕ್ಷನ್‌ಗಳು ಹೋಗಿವೆ ಎಂಬ ವಿವರಗಳೆಲ್ಲಾ ಹೊರಬರಲಿ. ಈ ರೀತಿ ಇಲ್ಲೀಗಲ್ ಆಗಿ ನೇಮಕ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು ಸರ್ಕಾರದಿಂದ ತಾರೀಖು ೫-೭-೧೯೮೩ರಂದು ಒಂದು ಆದೇಶ ಹೋದ ಮೇಲೂ ಸಹ ಅಲ್ಲಿನ ಅಧಿಕಾರಿಗಳು ಸರ್ಕಾರದ ಆದೇಶವನ್ನು ಕಡೆಗಣಿಸಿ ೮ನೇ ಆಗಸ್ಟ್, ೫ನೇ

ಆಗಸ್ಟ್‌ನಲ್ಲಿ ಕೆಲವರನ್ನು ನೇಮಕ ಮಾಡಿಕೊಂಡಿದ್ದಾರೆಂದು ನಮಗೆ ತಿಳಿದುಬಂದಿದೆ. ಆದ್ದರಿಂದ ಈ ವಿಚಾರದಲ್ಲಿ ಮತ್ತು ಬಹುಮಹಡಿ ಕಟ್ಟಡಗಳನ್ನು ಕಟ್ಟಲು ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ಲೈಸೆನ್ಸ್‌ಗಳನ್ನು ಕೊಡಲಾಗಿದೆ ಎಂಬ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ. ಆಗ ಎಲ್ಲವೂ ಹೊರ ಬರುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.— ರೆಕ್ರೂಟ್‌ಮೆಂಟ್ ಕಮಿಟಿಯವರು ಇಂಟರ್‌ವ್ಯೂ ಮಾಡದೆ ಕೆಲಸಕ್ಕೆ ತೆಗೆದುಕೊಂಡಿದ್ದಾರೆಂದು ನಿಮ್ಮ ಆಪಾದನೆಯೋ?

ಶ್ರೀ ಧರ್ಮಸಿಂಗ್.— ೧ ಸಾವಿರ ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕಾಗಿ ನಮ್ಮ ಕಾಲದಲ್ಲಿ ಒಂದು ರಿಕ್ರೂಟ್‌ಮೆಂಟ್ ಕಮಿಟಿಯನ್ನು ರಚಿಸಲಾಯಿತು. ಆದರೆ ನಮ್ಮ ಕಾಲದಲ್ಲಿ ಈ ಕೆಲಸ ಆಗಲಿಲ್ಲ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಹೆಸರುಗಳನ್ನು ತರಿಸಿಕೊಂಡು ರಿಕ್ರೂಟ್‌ಮೆಂಟ್ ಕಮಿಟಿ ಮೂಲಕ ಈ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕೆಂದು ನಾವು ನಿರ್ಣಯ ಮಾಡಿದ್ದೆವು. ಆದರೆ ಇದರ ಪ್ರಕಾರ ನೇಮಕವಾಗಿಲ್ಲ. ನಾನು ಇಲ್ಲಿಯವರೆಗೆ ಈ ಇಲಾಖೆಗೆ ಸಂಬಂಧಪಟ್ಟಂತೆ ಏನೇನು ವಿಚಾರಗಳನ್ನು ಉಲ್ಲೇಖ ಮಾಡಿದ್ದೇನೆ, ಅವುಗಳೆಲ್ಲದರ ಕಡೆಗೂ ಮಾನ್ಯ ಮಂತ್ರಿಗಳು ಗಮನ ಕೊಡಬೇಕಾಗುತ್ತದೆ. ಇವತ್ತು ಈ ಸರ್ಕಾರ ಬಂದ ಮೇಲೆ ಜನರಿಗೆ ಏನೇನು ಆಶ್ವಾಸನೆ ಕೊಟ್ಟಿದ್ದೀರಿ, ಇವತ್ತು ತಮ್ಮ ಬಡ್ಜೆಟ್ ಪುಸ್ತಕವನ್ನು ನೋಡಿದರೆ ಅದರಿಂದ ಜನರಿಗೆ ಏನು ಸಹಾಯವಾಗುವುದಿಲ್ಲ. ಅದರ ಕಡೆಗೆ ಗಮನಕೊಟ್ಟಿಲ್ಲ, ಆಸಕ್ತಿ ವಹಿಸಿಲ್ಲ. ಕೊನೆಯದಾಗಿ ದಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಮಾಡಲಿಕ್ಕೆ ೧ ಲಕ್ಷದ ೧೦ ಸಾವಿರ ರೂಪಾಯಿ ಕೊಟ್ಟಿದ್ದೇವೆ. ಡಾಕ್ಟರ್ ಅಂಬೇಡ್ಕರ್‌ರವರ ಪ್ರತಿಮೆ ಮಾಡಿಸಿದ ಮೇಲೆ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಬೇಕು. ಡಾಕ್ಟರ್ ಅಂಬೇಡ್ಕರ್‌ರವರ ಪ್ರತಿಮೆ ಎದುರುಗಡೆ ಆ ಕಡೆ ಪಕ್ಕದಲ್ಲಿ ಇಡಬೇಕೆಂದು ತೀರ್ಮಾನಿಸಲಾಗಿತ್ತು. ಬಾಂಬೆಯಲ್ಲಿ ವಾಗ್‌ರವರು ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ತಯಾರು ಮಾಡಿದ್ದಾರೆ ನವೆಂಬರ್ ತಿಂಗಳಲ್ಲಿ ಸ್ಟ್ಯಾಚುವನ್ನು ಕೂಡಿಸಬೇಕು. ಆ ಕೆಲಸ ಮಾಡುವ ಬಗ್ಗೆ ಅರ್ಧಂಬರ್ಧ ಮನಸ್ಸಿನಿಂದ ಕೆಲಸ ಮಾಡುತ್ತಿದ್ದೀರಿ. ಸ್ಟ್ಯಾಚ್ಯುವನ್ನು ವಿಧಾನಸೌಧದ ಆ ಭಾಗದಲ್ಲಿ ಕೂಡಿಸಬೇಕೇ ಈ ಭಾಗದಲ್ಲಿ ಕೂಡಿಸಬೇಕೇ ಎನ್ನುವುದನ್ನು ತೀರ್ಮಾನ ಮಾಡಲಿಕ್ಕೆ ಯಾವುದೇ ಇಂಜಿನಿಯರ್‌ರವರನ್ನು ಕರೆಸಿಲ್ಲ. ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆಗಿನ ಮುಖ್ಯ ಮಂತ್ರಿಗಳಾದ ಗುಂಡೂರಾಯರ ಮಂತ್ರಿಮಂಡಲ ವಿಧಾನಸೌಧವನ್ನು ಕಟ್ಟಿಸಿದಂತವರ ಗುರುತು ಇರಬೇಕೆಂದು ಅವರ ಸ್ಟ್ಯಾಚು ಕೂಡಿಸಲಿಕ್ಕೆ ನೆನಪಿಗೋಸ್ಕರ ಈ ನಿರ್ಣಯ ತೆಗೆದುಕೊಂಡಿದ್ದಾರೆ. ತಾವು ಅದರ ಬಗ್ಗೆ ವಿಚಾರ ಮಾಡಬೇಕು. ಇದೇ ವಿಧಾನಸೌಧದ ಹತ್ತಿರ ಯಾರೂ ಹಿಂದುಳಿದ ವರ್ಗಗಳ. ದೀನದಲಿತರ ಬಗ್ಗೆ ಕ್ರಾಂತಿಕಾರವಾದ ಕೆಲಸವನ್ನು ಮಾಡಿದಂತವರು ಬಡವರ ಆಸೆ ಆಕಾಂಕ್ಷೆಗಳನ್ನು ಎತ್ತಿಹಿಡಿದಂತಹ ವ್ಯಕ್ತಿ ದಿವಂಗತ ದೇವರಾಜಅರಸ್‌ರವರ ಸ್ಟ್ಯಾಚು ಬರಬೇಕು, ಅದರ ಬಗ್ಗೆ ಕೂಡ ವಿಚಾರ ಮಾಡಬೇಕು.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಧರ್ಮಸಿಂಗ್‌ರವರು ದಿವಂಗತ ದೇವರಾಜಅರಸ್‌ರವರ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಆಡಳಿತದಲ್ಲಿ ಚೂರಿ ಹಾಕಿ ಹೋಗಿದ್ದಾರೆ. ಅವರು ದಿವಂಗತರಾದ ಮೇಲೆ ಎಲ್ಲರೂ ಇಂತಹ ಸಲಹೆಗಳನ್ನು ಕೊಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಗ್ರೋವರ್ ಅಯೋಗ ಮಾಡಿ ಅವರನ್ನು ಜೈಲಿಗೆ ಕಳುಹಿಸಬೇಕೆಂದು ಇದ್ದವರು ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ, ಈ ಮಾತುಗಳನ್ನು ನಮಗೆ ಏತಕ್ಕೆ ಹೇಳುತ್ತೀರಿ ? ಇವತ್ತು ದೇವರಾಜಅರಸ್‌ರವರ ಸ್ಟ್ಯಾಚು ಮಾಡಬೇಕು. ಮೊನ್ನೆ ಅರಸ್‌ರವರ ಜನ್ಮ ದಿನಾಚರಣೆಯನ್ನು ಆಚರಿಸಿದಾಗ ಮಾನ್ಯ ರಘುಪತಿಯವರು ಅನೌನ್ಸ್ ಮಾಡಬಹುದು ಎಂದು ನೋಡಿದಾಗ ಅದರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಎಂ. ರಘುಪತಿ.—ದಿವಂಗತ ಅರಸ್‌ರವರ ಜನ್ಮ ದಿನಾಚರಣೆಯ ದಿವಸ ಅವರ ಸಾಕ್ಷ್ಯ ಚಿತ್ರ ಬಿಡುಗಡೆ ಮಾಡಿದ್ದೇವೆ. ಸಾವಿರಾರು ಜನ ಹಳ್ಳಿಗಳಲ್ಲಿ ನೋಡುತ್ತಾರೆ, ಅದನ್ನು ಲಘುವಾಗಿ ತೆಗೆದುಕೊಳ್ಳುವುದು ಬೇಡ.

ಶ್ರೀ ಧರ್ಮಸಿಂಗ್.—ದಿವಂಗತ ದೇವರಾಜಅರಸ್‌ರವರ ಸ್ಟ್ಯಾಚು ಮಾಡಬೇಕೆಂದು ಕೇಳಿಕೊಂಡು ಇನ್ನು ಕೆಲವೊಂದು ವಿಷಯಗಳನ್ನು ಮಾತನಾಡಬೇಕಾಗಿದೆ. ಬೆಂಗಳೂರು ಅಭಿವೃದ್ಧಿ

ಪ್ರಾಧಿಕಾರದಲ್ಲಿ ಏನು ಕೆಲಸ ನಡೆಯುತ್ತಿದೆ ? ನೀವು ಅಧಿಕಾರಕ್ಕೆ ಬಂದ ೮ ತಿಂಗಳ ಅವಧಿಯಲ್ಲಿ ಏನು ಕೆಲಸ ಮಾಡಿದ್ದೀರಿ ? ಚಿಕ್ಕಮಾರನಹಳ್ಳಿಯಲ್ಲಿ ಮನೆಗಳನ್ನು ಒಡೆದು ಹಾಕಿದ್ದೀರಿ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಡವರಿಗೆ ದಿನದಲಿತರಿಗೆ ಏನೇನು ಕಾರ್ಯಕ್ರಮ ಹಾಕಿಕೊಂಡಿದೆ ಏನೇನು ಕೆಲಸ ಮಾಡಲಾಗಿದೆ ಎಂಬುದರ ಬಗ್ಗೆ ಹೇಳಬೇಕು. ಹೊಸ ಬಿ.ಡಿ.ಎ. ಅಧ್ಯಕ್ಷರು ಏನು ಮಾಡುತ್ತಿದ್ದಾರೆ ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮನೆಗಳ ಮೇಲೆ ಬುಲ್ಡೋಜರ್ ಬಿಡುತ್ತಿದ್ದಾರೆ. ಯಾವುದಾದರೂ ಒಂದು ಕೆಲಸ ಮಾಡುವಾಗ ಸರಿಯಾದ ರೀತಿಯಲ್ಲಿ ನೋಡಿ ಹೆಜ್ಜೆ ಇಡಬೇಕು, ನೀವು ಯಾವುದನ್ನೂ ಮಾಡುವುದಕ್ಕೆ ಆಗಿಲ್ಲ. ಇವತ್ತು ಮನೆಗಳನ್ನು ಒಡೆದು ಹಾಕುತ್ತಿದ್ದೀರಿ. ಯಾವುದಾದರೂ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ವಿಚಾರ ಮಾಡಿ ತೆಗೆದುಕೊಳ್ಳಬೇಕು. ಕೊನೆಗೆ ನಾನು ಈ ಬೇಡಿಕೆಯ ಮೇಲೆ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಅವಕಾಶ ಮಾಡಿ ಕೊಟ್ಟಂತಹ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಆನಂದರಾವ್.—ಮಾನ್ಯ ಧರ್ಮಸಿಂಗ್‌ರವರು ಸುಮಾರು ೭೮ ನಿಮಿಷಗಳ ಕಾಲ ಬಹಳ ಸುಧೀರ್ಘವಾದ ವಿಚಾರಪೂರಿತವಾದ ಭಾಷಣವನ್ನು ಮಾಡಿದ್ದಾರೆ. ಆದರೆ ೭೮ ನಿಮಿಷಗಳಲ್ಲಿ ೩೨೮ ಸಲ ಇವತ್ತು ಎನ್ನುವ ಪದ ಬಳಸಿದ್ದಾರೆ.

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಬೇಡಿಕೆಗಳ ಮೇಲೆ ನಾನು ಮಾತನಾಡುತ್ತಾ ಕೆಲವೊಂದು ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಮದನಗೋಪಾಲನಾಯಕ್.—ಮಾನ್ಯ ರಾಂದೇವ್‌ರವರು ಸಹ ಇವತ್ತು ಎಂದು ಶುರು ಮಾಡಿದರು.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ಧರ್ಮಸಿಂಗ್‌ರವರು ಉರ್ದು ಕಲಿತಿದ್ದಾರೆ, ಅವರು ಅಷ್ಟಾದರೂ ಕನ್ನಡ ಮಾತನಾಡುತ್ತಾರೆ. ಕನ್ನಡದವರೇ ಆದ ಮಾನ್ಯ ರಾಂದೇವ್‌ರವರು ಇವತ್ತು ಎಂದು ಶುರು ಮಾಡಿದರೆ ಹೇಗೆ ?

ಶ್ರೀ ಪಿ. ರಾಂದೇವ್.—ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಧರ್ಮಸಿಂಗ್‌ರವರು ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಾರೆಂದು ನಾನು ಅಂದುಕೊಂಡಿದೆ. ಅವರು ನಗರಾಭಿವೃದ್ಧಿ ಖಾತೆಯ ಸಚಿವರಾಗಿದ್ದರು. ನಮಗೆ ಸ್ನೇಹಿತರಲ್ಲಿ ಅವರೂ ಒಬ್ಬರು ಆಗಿದ್ದರು ಸಾಧಾರಣವಾಗಿ ಅನೇಕ ಸಮಸ್ಯೆಗಳು ಬಂದಾಗ ನಮ್ಮೆಲ್ಲರ ಸಮಕ್ಷಮ ನಮ್ಮ ಜೊತೆಯಲ್ಲಿ ಸಮಾಲೋಚಿಸಿ ತೀರ್ಮಾನ ತೆಗೆದುಕೊಳ್ಳತಕ್ಕ ಒಂದು ಅಭ್ಯಾಸವನ್ನು ಆ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅವರು ಸಚಿವರಾಗಿದ್ದಾಗ ನಗರದ ಸೌಲಭ್ಯಗಳ ಬಗ್ಗೆ ಅನೇಕ ಬಾರಿ ಸಭೆ ಸೇರಿ ಚರ್ಚೆ ಮಾಡುತ್ತಿದ್ದರು. ಆದರೆ ಅವರನ್ನು ಒಂದು ಮಾತು ಕೇಳಬೇಕಾಗಿದೆ, ಸುಮಾರು ೧೦ ವರ್ಷಗಳ ಕಾಲ ಪದೇ ಪದೇ ನಗರಸಭೆ ಮತ್ತು ಕಾರ್ಪೊರೇಷನ್‌ಗಳ ಚುನಾವಣೆಯನ್ನು ನಡೆಸಬೇಕು ಎನ್ನುವ ಮಾತನ್ನು ಅನೇಕ ಬಾರಿ ಕೇಳಿದ್ದೇವೆ ಹಿಂದೆ ಸಚಿವರಾಗಿದ್ದಂತಹ ಶ್ರೀಮಾನ್ ಶ್ರೀಕಂಠಯ್ಯನವರು ಮತ್ತು ಮಾನ್ಯ ಧರ್ಮಸಿಂಗ್‌ರವರು ಯಾವಾಗಲೂ ಕೂಡ ಉತ್ತರ ಕೊಡುತ್ತಿದ್ದರು ನವೆಂಬರ್‌ನಲ್ಲಿ ಮಾಡುತ್ತೇವೆ, ಅಕ್ಟೋಬರ್‌ನಲ್ಲಿ ಮಾಡುತ್ತೇವೆಂದು.

ಶ್ರೀ ಕೆ.ಎಚ್. ರಂಗನಾಥ್.—ಬಹಳ ಮಟ್ಟಿಗೆ ನಮ್ಮ ಕಾಲದಲ್ಲಿ ಚುನಾವಣೆ ಮಾಡಬೇಕೆಂದು ಇತ್ತು ಆದರೆ ನಿಮಗೆ ಕೀರ್ತಿ ಬಂತು. ನಿಮ್ಮ ಕಾಲದಲ್ಲಿ ಮಲ್ಲೇಶ್ವರ ರಸ್ತೆ ಹೇಗಾಗಿದೆ ಎಂದು ಹೇಳುತ್ತೀರಾ ?

ಶ್ರೀ ಪಿ. ರಾಂದೇವ್.—ಆ ರಸ್ತೆಯನ್ನು ಜಾಸ್ತಿ ಉಪಯೋಗಿಸುತ್ತೀರಿ ಅದಕ್ಕೆ ಹಾಗೆ ಆಗಿದೆ.

ಶ್ರೀ ಸಿ. ಬೈರೇಗೌಡ.—ಹಿಂದೆ ಎಂ. ಎಸ್. ಎಂ. ಎಂದು ಇತ್ತು ಅಂದರೆ, ಮಾರ್ಚ್, ಸೆಪ್ಟೆಂಬರ್, ಸೆಪ್ಟೆಂಬರ್ ಮಾರ್ಚ್ ಎಂದು.

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ರಘುಪತಿ.—ಮಾನ್ಯ ಧರ್ಮಸಿಂಗ್‌ರವರಿಗೆ ಚುನಾವಣೆ ಮಾಡಬೇಕೆಂದು ಆಸಕ್ತಿ ಇತ್ತು. ಸೆಪ್ಟೆಂಬರ್ ಒಳ್ಳೆಯ ತಿಂಗಳು ಮಾಡುತ್ತೇವೆಂದು ಹೇಳುತ್ತಿದ್ದರು ಯಾವ ಕಾರಣಕ್ಕೂ ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಏತಕ್ಕೆ ಮಾಡಲಿಲ್ಲ ಅಂದರೆ ಕಾರ್ಪೊರೇಷನ್‌ಗಳಲ್ಲಿ ಕಾರ್ಪೊರೇಟರ್‌ಗಳು ಬಂದರೆ ಲೋಕಲ್‌ನಲ್ಲಿರತಕ್ಕ ಎಂ.ಎಲ್.ಎ. ಗಳಿಗೆ ಬೆಲೆ ಕಡಿಮೆಯಾಗುತ್ತದೆ ಎಂದು ತಾವೇ ಹೇಳಿ ಚುನಾವಣೆಗಳನ್ನು ಬಂದ್ ಮಾಡಿದರು

ಶ್ರೀ ಪಿ. ರಾಂದೇವ್.—ನಾವು ಯಾವಾಗಲೂ ಪ್ರಜಾಪ್ರಭುತ್ವ ಪದ್ಧತಿಯನ್ನು ಎತ್ತಿ ಹಿಡಿಯುತಕ್ಕ ಜನ. ಪ್ರಜಾಪ್ರಭುತ್ವ ಪದ್ಧತಿಗೆ ಅಡ್ಡಿ ಮಾಡುವವರು ನಾವಲ್ಲ, ನಾನು ಇದರ ಬಗ್ಗೆ ಚಳುವಳಿ ಮಾಡಿ ಹೋರಾಡಿ ಹೈಕೋರ್ಟ್‌ಗೆ ಹೋಗಿ ರಿಟ್ ಪಿಟಿಷನ್ ಹಾಕಿದ್ದೇನೆ. ಈಗ ಬಹುಶಃ ಅದು ವಜಾ ಆಗಬಹುದು. ೧೯೭೨ ರಿಂದ ೧೯೮೮ರ ತನಕ ಏನೊಂದು ಸಾಹಸ ಮಾಡಿದ್ದಾರೆ ಅದರ ಬಗ್ಗೆ ಮತ್ತು ಅವರ ಸಹಾನುಭೂತಿಯ ಬಗ್ಗೆ ಹೇಳುತ್ತಿದ್ದೇನೆ. ನಗರಸಭೆ ಮತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆ ಮಾಡತಕ್ಕ ಧೈರ್ಯವನ್ನು ಅವರ ಸರ್ಕಾರ ತೆಗೆದುಕೊಳ್ಳಲಿಲ್ಲ.

೩–೩೦ ಪಿ.ಎಂ.

ಮಾನ್ಯ ಅಧ್ಯಕ್ಷರೇ ಹಿಂದಿನ ಸರ್ಕಾರದವರು ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ಮಾಡದೆ ಬಂದಿದ್ದರ ಉದ್ದೇಶವೇನೆಂದರೆ ನಾವು ಈ ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ಮಾಡಿದರೆ ನಮ್ಮ ಪಕ್ಷ ಖಂಡಿತವಾಗಿ ಅಧಿಕಾರಕ್ಕೆ ಬರುವುದಿಲ್ಲವೆಂದು ತಿಳಿದೇ ಬಹುಶಃ ಹಿಂದಿನ ಸರ್ಕಾರ ಚುನಾವಣೆಯನ್ನು ಮುಂದಕ್ಕೆ ಹಾಕಿಕೊಂಡು ಬಂತು ಎಂದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ಮಾಡಿದ ಒಂದು ಒಳ್ಳೆಯ ಕೆಲಸದಿಂದ ನಾವು ಇವತ್ತು ಈ ಕಡೆ ಬಂದು ಅವರು ಆ ಕಡೆಯಲ್ಲಿ ಕುಳಿತುಕೊಂಡಿದ್ದಾರೆ. ಅವರು ಮಾಡಿದ ಒಂದು ತಪ್ಪು ಕೆಲಸದಿಂದ ಜನತೆ ಇವತ್ತು ಸರ್ಕಾರವನ್ನು ಬದಲಾವಣೆ ಮಾಡಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಹೊಸದಾಗಿ ನಮ್ಮ ಜನತಾಪಕ್ಷ ಅಧಿಕಾರಕ್ಕೆ ಬಂದಮೇಲೆ ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ಮಾಡಿದ್ದೇವೆ. ಆದರೆ ಹಿಂದಿನ ಸರ್ಕಾರದವರು ಈ ಚುನಾವಣೆಯನ್ನು ಮಾಡುವುದಕ್ಕೆ ನಾನಾ ಕಾರಣಗಳನ್ನು ಹೇಳಿಕೊಂಡು ಚುನಾವಣೆಯನ್ನು ಮುಂದಕ್ಕೆ ಹಾಕಿಕೊಂಡು ಬಂದರು. ಒಂದು ಸಾರಿ ಹೇಳಿದರು ಸೆನ್ಸಸ್ ಇನ್ನೂ ಆಗಿಲ್ಲ. ಅದಕ್ಕೆ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆಂದು. ಮತ್ತೆ ಒಂದು ಸಾರಿ ಸೆನ್ಸಸ್ ಫಿಗರ್ಸ್ ಬಂದಿಲ್ಲ ಅದಕ್ಕೆ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆ ಎಂದು. ನಾನಾ ರೀತಿಯ ಕಾರಣಗಳನ್ನು ಹೇಳಿಕೊಂಡು ಇವರು ಚುನಾವಣೆಯನ್ನು ಮುಂದೂಡಿಕೊಂಡೇ ಬಂದರು. ಆದರೆ ಅವರು ಮಾಡಿದ ಒಂದು ಒಳ್ಳೆಯ ಕೆಲಸದಿಂದ ಜನರು ಬೇಸತ್ತು ಹೊಸ ಸರ್ಕಾರವನ್ನು ಆಡಳಿತಕ್ಕೆ ತಂದರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ೧೯೮೮ರ ಜನಗಣತಿಯ ಪ್ರಕಾರ ಅಂಕಿಅಂಶಗಳು ಬರಬೇಕು. ಆ ಅಂಕಿಅಂಶಗಳನ್ನು ಪಬ್ಲಿಷ್ ಮಾಡಬೇಕು, ಮತ್ತು ಕೇಂದ್ರಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಬೇಕು, ಹೀಗೆ ನಾನಾ ರೀತಿಯ ಕಾರಣಗಳನ್ನು ಹಿಂದಿನ ಸರ್ಕಾರದವರು ಹೇಳಿಕೊಂಡೇ ಬಂದರು. ಬೆಂಗಳೂರು ನಗರಸಭೆಯ ಚುನಾವಣೆ ಒಂದೇ ಅಲ್ಲ. ನಾನಾ ನಗರಸಭೆ ಮತ್ತು ಪುರಸಭೆಗಳ ಚುನಾವಣೆಯನ್ನು ಕೂಡ ಮಾಡಲಿಲ್ಲ. ಕಾರಣ ಅವರಿಗೆ ಚೆನ್ನಾಗಿ ಗೊತ್ತಿತ್ತು. ನಾವು ಈಗ ಚುನಾವಣೆಯನ್ನು ಮಾಡಿದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ ಎಂದು. ಆದ್ದರಿಂದ ಅವರು ಮಾಡಲಿಲ್ಲ. ನಾವು ಅನೇಕ ಸಾರಿ ಚುನಾವಣೆಯನ್ನು ಮಾಡಬೇಕೆಂದು ಪಟ್ಟು ಹಿಡಿದು ಕಡೆಗೂ ಚುನಾವಣೆಯನ್ನು ಮಾಡಲಿಲ್ಲ. ಚುನಾವಣೆಯನ್ನು ಬೆಂಗಳೂರು ನಗರಸಭೆಗೆ ಮಾತ್ರ ಮಾಡಿ ಎಂದು ನಾವು ಕೇಳಲಿಲ್ಲ. ಎಲ್ಲಾ ನಗರಸಭೆಗಳಿಗೂ ಕೂಡ ಚುನಾವಣೆಯನ್ನು ಮಾಡಿ ಎಂದು ಕೇಳಿದ್ದೆವು. ಆದರೂ ಕೂಡ ಮಾಡಲಿಲ್ಲ. ಸುಮಾರು ೨೪೫ ಪುರಸಭೆಗಳ ಚುನಾವಣೆಯನ್ನು ಮಾಡಬೇಕೆಂದು ನಾವು ಒತ್ತಾಯ ಮಾಡಿದರೂ ಕೂಡ ಚುನಾವಣೆಯನ್ನು ಮಾಡಲಿಲ್ಲ, ನಾನು ಸುಮಾರು ೧೫ ವರ್ಷಗಳ ಕಾಲ ಕಾರ್ಪೊರೇಟರ್ ಆಗಿ ಕೆಲಸ ಮಾಡಿದ್ದೇನೆ. ಆಗ ಇದ್ದಂಥ ಪರಿಸ್ಥಿತಿ ಇವತ್ತು ಬೆಂಗಳೂರು ನಗರದಲ್ಲಿ ಇಲ್ಲ ಎಂದು ನಾನು ಹೇಳುತ್ತೇನೆ, ಇವತ್ತು ನಾವು ಬೆಂಗಳೂರು ನಗರವನ್ನು ನೋಡುವುದಾದರೆ ಇದು ಒಂದು ದರಿದ್ರದ ಕೊಂಪೆಯಾಗಿದೆ ಎಂದು ಹೇಳಬಹುದು. ನಗರದ ಹವಾಮಾನ ಕೆಟ್ಟು ಹೋಗಿದೆ. ನಗರದಲ್ಲಿ ದಿನೇ ದಿನೇ ಅಶಾಂತಿ

ಎಂಬುದು ತಾಂಡವವಾಡುತ್ತಿದೆ. ಈ ಬೆಂಗಳೂರು ನಗರವನ್ನು ಕೊಂಪೆಯನ್ನಾಗಿ ಮಾಡಿದ ಕೀರ್ತಿ ಹಿಂದಿನ ಸರ್ಕಾರಕ್ಕೆ ಸಲ್ಲಬೇಕೆಂದು ನಾನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಸುಮಾರು ೧೦ ವರ್ಷಗಳಿಂದ ಆಡಳಿತಾಧಿಕಾರಿಯು ಆಡಳಿತವನ್ನು ನಡೆಸುತ್ತಿದ್ದಾರೆ. ಆದರೆ ಚುನಾಯಿತ ಪ್ರತಿನಿಧಿಗಳು ಇಲ್ಲದಿದ್ದರೆ ಅವರು ಯಾವ ರೀತಿಯಲ್ಲಿ ಆಡಳಿತವನ್ನು ನಡೆಸುತ್ತಾರೆ ಎಂಬುದು ಈಗ ನಾವು ಬೆಂಗಳೂರು ನಗರವನ್ನು ನೋಡಿದರೆ ಗೊತ್ತಾಗುತ್ತದೆ. ಹಿಂದಿನ ಸರ್ಕಾರದವರು ಈ ನಗರ ಸಭೆಯನ್ನು ವಿಧಾನ ಸೌಧದಲ್ಲಿ ಕುಳಿತುಕೊಂಡು ನಡೆಸುತ್ತಿದ್ದರು. ಆದರೆ ಚುನಾವಣೆಯನ್ನು ಮಾಡಿದರೆ ಅವರು ವಿಧಾನ ಸೌಧದಲ್ಲಿ ಕುಳಿತುಕೊಂಡು ರಾಜ್ಯಭಾರ ಮಾಡುವುದಕ್ಕೆ ಆಗುತ್ತಿರಲಿಲ್ಲ. ಅದಕ್ಕೆ ಅವರು ಚುನಾವಣೆಯನ್ನು ಮಾಡಲಿಲ್ಲ. ಐ.ಎ.ಎಸ್. ಅಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದರಿಂದ ನಗರಸಭೆಯಲ್ಲಿ ಇವತ್ತು ನಾವು ನೂರಾರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಒಂದು ಕಡೆ ನಿರುದ್ಯೋಗ ಸಮಸ್ಯೆ ಎಂಬುದು ತಾಂಡವವಾಡುತ್ತಿದೆ. ಅನಧಿಕೃತ ಕಟ್ಟಡಗಳು ವಿಪರೀತವಾಗಿ ಬೆಳೆಯುತ್ತಿವೆ. ಫೈವ್ ಸ್ಟಾರ್ ಹೋಟೆಲ್ಸ್ ಬರುತ್ತಿವೆ. ಆದರೆ ಚುನಾಯಿತ ಪ್ರತಿನಿಧಿಗಳು ಇದ್ದಿದ್ದರೆ ಈ ರೀತಿ ಆಗುತ್ತಿರಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ೧೯೭೬ನೇ ಇಸವಿಯಲ್ಲಿ ಒಂದು ಕಾನೂನು ಜಾರಿಗೆ ತಂದೆವು. ಆದರೆ ಆ ಕಾನೂನು ಬರೀ ಪುಸ್ತಕದಲ್ಲಿ ಮಾತ್ರ ಇದೆ. ಕಾನೂನು ಜಾರಿಗೆ ಬರಲಿಲ್ಲ. ಅಧಿಕಾರಿಗಳು ಇದರಿಂದ ದುಡ್ಡು ಮಾಡಿಕೊಳ್ಳುವುದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಇವತ್ತು ಬೆಂಗಳೂರು ನಗರದಲ್ಲಿ ಕಟ್ಟಡ ಕುಸಿದಿರುವುದಕ್ಕೆ ಯಾರು ಜವಾಬ್ದಾರರು? ಬೆಂಗಳೂರು ನಗರದಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟುವುದಕ್ಕೆ ಪರವಾನಿಗೆಯನ್ನು ಕೊಡಬಾರದೆಂದು ಇದ್ದರೂ ಕೂಡ ಏತಕ್ಕೆ ಪರವಾನಿಗೆಯನ್ನು ಕೊಡಬೇಕು ? ೧೯೪೭ನೇ ಇಸವಿಯಲ್ಲಿ ಮಾಡಿದ ಬೈಲಾವನ್ನು ಬದಲಾವಣೆ ಮಾಡಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಕಾರ್ಪೊರೇಷನ್ ಬೈಲಾವನ್ನು ತಿದ್ದುಪಡಿ ಮಾಡಬೇಕೆಂದು ಮಾನ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ ಈಗ ಕುಸಿದು ಬಿದ್ದಿರುವ ಕಟ್ಟಡಕ್ಕೆ ೧೯೭೨-೭೩ರಲ್ಲಿ ಲೈಸನ್ಸ್ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಆಗ ಮಾನ್ಯ ಸದಸ್ಯರೂ ಕೂಡ ಕಾರ್ಪೊರೇಟರ್ ಆಗಿದ್ದರು. ಆಗ ಅವರು ಇದರ ಬಗ್ಗೆ ಏತಕ್ಕೆ ಪ್ರಸ್ತಾಪ ಮಾಡಲಿಲ್ಲ ? ಆಗ ಇವರು ಬೈಲಾವನ್ನು ಏತಕ್ಕೆ ತಿದ್ದುಪಡಿ ಮಾಡಲಿಲ್ಲ ? ತಾವು ಏನಾದರೂ ಅಗ ಬೈಲಾ ತಿದ್ದುಪಡಿ ಮಾಡುವುದಕ್ಕೆ ಹೋರಟಿದ್ದಿರಾ ? ತಮಗೆ ಈ ಲೈಸೆನ್ಸ್ ಕೊಟ್ಟ ಬಗ್ಗೆ ಗೊತ್ತಾಗಲಿಲ್ಲವೇ ? ಮತ್ತು ಮೊನ್ನೆ ದಿವಸ ಅಂದರೆ ಹಿಂದಿನ ತಿಂಗಳು ಕೂಡ ಆ ಲೈಸೆನ್ಸ್ ರಿನ್ಯೂವಲ್ ಮಾಡಿಸಿದ್ದಾರೆ ಆಗ ಇದರ ಬಗ್ಗೆ ಪ್ರತಿಭಟನೆ ಮಾಡಲಿಲ್ಲವೇ ?

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ ನಾನು ಸುಮಾರು ೮-೧೦ ವರ್ಷಗಳ ಕಾಲ ವಿರೋಧಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಅವರು ಲೈಸೆನ್ಸ್ ಕೊಡುವಾಗ ನಮ್ಮನ್ನು ಕೇಳಿ ಕೊಡುತ್ತಿರಲಿಲ್ಲ. ಅವರು ಆ ವಿಷಯವನ್ನು ನಮ್ಮ ಗಮನಕ್ಕು ಕೂಡ ತರುತ್ತಿರಲಿಲ್ಲ. ನಾವು ವಿರೋಧ ಪಕ್ಷದಲ್ಲಿದ್ದಾಗ ಚೆನ್ನಾಗಿ ಕೆಲಸ ಮಾಡುತ್ತಿದ್ದೆವು.

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ ವಿರೋಧಪಕ್ಷದಲ್ಲಿದ್ದುಕೊಂಡು ಏತಕ್ಕೆ ಇದನ್ನು ನೋಡಲಿಲ್ಲ. ಹಿಂದೆ ಬೆಂಗಳೂರು ನಗರಸಭೆಯ ಆಡಳಿತಾಧಿಕಾರಿಯಾಗಿ ಶ್ರೀಮಾನ್ ಲಕ್ಷ್ಮಣರಾವ್ ಇದ್ದರು. ಅವರು ಆಗ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೂ ಕೂಡ ತಾವು ಮಾತನಾಡುವಾಗ ನಗರದಲ್ಲಿ ವಾತಾವರಣ ಹದಗೆಟ್ಟಿದೆ ಎನ್ನುವ ಮಾತನ್ನು ಹೇಳಿದ್ದೀರಿ ? ಇದು ಹೇಗೆ ?

ಶ್ರೀ ಪಿ. ರಾಂದೇವ್.—ಸ್ವಾಮಿ ನಾನು ೧೯೭೪ರಲ್ಲಿ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಬೆಂಗಳೂರು ನಗರಸಭೆಯ ಚುನಾವಣೆಯನ್ನು ನಮ್ಮ ಹಿಂದಿನ ಸರ್ಕಾರದವರು ಮಾಡಲಿಲ್ಲ. ಅದಕ್ಕೆ ವಾತಾವರಣ ಹದೆಗೆಟ್ಟಿದೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ ತಾವು ಯಾವ ಕೊಂಬೆಯಿಂದ ಯಾವ ಕೊಂಬೆಗೆ ಹಾರುತ್ತಿದ್ದೀರಿ ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಪಿ. ರಾಂದೇವ್.—ಸ್ವಾಮಿ ನಾನು ೧೯೭೨ ರಿಂದ ೭೪ ರವರೆಗೆ ವಿರೋಧಪಕ್ಷದಲ್ಲಿಯೇ ಇದ್ದೆ.

ಶ್ರೀ ಕೆ.ಹೆಚ್. ರಂಗನಾಥ್.— ಈಗ ಸರ್ಕಾರ ಇದೆ, ಯಾರೋ ಕೇಳುತ್ತಾರೆ. ಸ್ವಾಮಿ, ೫೭ನೇ ಇಸವಿಯಲ್ಲಿ ಯಾವ ಸರ್ಕಾರ ಇತ್ತು? ಇದೇ ಕೃಷ್ಣಾ ವಾಟರ್ ಡಿಸ್‌ಪ್ಯೂಟ್ಸ್‌ನಲ್ಲಿ ನಮಗೆ ಅನ್ಯಾಯ ವಾಗಿತ್ತು. ೭೨ರ ನಂತರ ಈ ಸಭೆಯಲ್ಲಿ ಪುನರ್ ಚರ್ಚೆ ಆದಮೇಲೆ ಕೇಂದ್ರ ಸರ್ಕಾರ ಪುನರ್‌ಪರಿಶೀಲನೆ ಮಾಡಿ ಈವತ್ತು ಕೃಷ್ಣಾ ಅವಾರ್ಡ್ ಬಂದಿದೆ. ನಾನು ಕೇಳುತ್ತಿದ್ದೇನೆ ಏನೆಂದರೆ ಅಲ್ಲಿ ಚುನಾಯಿತ ಒಂದು ಕಾರ್ಪೊರೇಷನ್ ಇತ್ತಲ್ಲ; ಕಾಂಗ್ರೆಸ್ (ಐ)ನವರೇ ಹೆಚ್ಚಿದ್ದಿರಬಹುದು. ಆದರೆ ಮನಸ್ಸಿಗೆ ಬಂದಹಾಗೆ ಪರವಾನಗಿ ಕೊಡುವುದಕ್ಕೆ ಪ್ರಯತ್ನಪಟ್ಟರು. ತಾವು ವಿರೋಧ ಪಕ್ಷದ ನಾಯಕರು ಬೇರೆ ಆಗಿದ್ದೀರಿ ಎಂದು ಹೇಳಿದ್ದೀರಿ. ಏನಾದರೂ ಡಿಸೆಂಟ್ ಇತ್ತೇ ಹೇಗೆ ಎಂದು ಹೇಳಿದರೆ ಸರಿ. ಪ್ರಶ್ನೆ ಇದಾಗಿರುವಾಗ ರಾಮದೇವ್ ಅವರು ಒಂದು ರೆಂಬೆ ಬಿಟ್ಟು ಇನ್ನೊಂದು ರೆಂಬೆಗೆ ಹಾರುತ್ತಿದ್ದಾರೆ.

ಶ್ರೀ ಪಿ. ರಾಮದೇವ್.— ೩೦ ವರ್ಷಗಳ ಹಿಂದೆ ಮಾಡಿದಂತಹ ಕಟ್ಟಡ ಕಾನೂನನ್ನು ಬದಲಾವಣೆ ಮಾಡಬೇಕೆಂದು ಕಾರ್ಪೊರೇಷನ್ ಮಾಡಿತ್ತು. ೧೯೩೦ನೇ ಇಸವಿಯಲ್ಲಿ ಬೆಂಗಳೂರಿನ ಜನಸಂಖ್ಯೆ ಎರಡೂವರೆ ಲಕ್ಷ ಇತ್ತು. ಆಗ ಇರತಕ್ಕಂಥ ಕಟ್ಟಡ ಕಾನೂನಿನ ನಿಯಮಾವಳಿಗಳನ್ನು ೧೯೭೦-೭೪ರಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ತೀರ್ಮಾನ ಮಾಡಿಯೇ ಇವರ ಬಗ್ಗೆ ಬದಲಾವಣೆ ಮಾಡಿದ್ದು. ಅಧಿಕಾರಿ ಮಟ್ಟದಿಂದ ಅದು ಟೌನ್ ಪ್ಲಾನಿಂಗ್ ಕಮಿಟಿಗೆ ಬಂತು. ಅಲ್ಲಿ ಬದಲಾವಣೆಗಳನ್ನು ತೆಗೆದುಕೊಂಡು ಬಂದು ನಂತರ ಅದು ಟ್ಯಾಕ್ಸೇಶನ್ ಫೈನಾನ್ಸ್ ಕಮಿಟಿಗೆ ಬಂತು. ಇಷ್ಟರೊಳಗೆ ೧೯೭೪ರ ಕೊನೆ ಬಂತು. ಕಾರ್ಪೊರೇಷನ್ ಸಭೆಗಳಲ್ಲಿ ಪದೇಪದೇ ವಿರೋಧ ಪಕ್ಷದವರು ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿದೆ, ಆದ್ದರಿಂದ ಈ ನಿಯಮಾವಳಿಗಳನ್ನು ಬದಲಾವಣೆ ಮಾಡಿ, ಈಗಿನ ಸಂದರ್ಭಕ್ಕೆ ತಕ್ಕಂತೆ, ಈಗಿನ ಸಮಸ್ಯೆಗೆ ತಕ್ಕಂತೆ ಕಾನೂನು ಮಾಡಬೇಕೆಂದು ಒತ್ತಾಯ ಮಾಡಿದ್ದರು. ರೆಕಾರ್ಡ್‌ಗಳನ್ನು ತರಿಸಿ ನೋಡಿದರೆ ಗೊತ್ತಾಗುತ್ತದೆ. ವಿರೋಧ ಪಕ್ಷದವರು ಹೀಗೆ ಒತ್ತಾಯ ಮಾಡಿದರೆ ಏನಾಯಿತು? ೧೯೭೪ರಲ್ಲಿ ಕಾರ್ಪೊರೇಷನ್‌ನ್ನು ಮುಕ್ತಾಯ ಮಾಡಿದರು. ಮುಕ್ತಾಯ ಮಾಡುವ ಹಂತದಲ್ಲಿ ಇದು ಕಾರ್ಪೊರೇಷನ್ ಮುಂದೆ ಬಂದಿರಲಿಲ್ಲ. ಇದಾದನಂತರ ಅಡ್ಮಿನಿಸ್ಟ್ರೇಟರ್ ಯಾವಾಗ ಬಂದರೋ ಆಗ He acted as a Town Planning Committee as well as Taxation Finance Committee. ಎಲ್ಲಾ ಕಮಿಟಿಗಳ ಮತ್ತು ಕಾರ್ಪೊರೇಷನ್ನಿನ ಅಧಿಕಾರಗಳು ಅವರ ಕೈಗೆ ಬಂತು. ಅವರು ಇದನ್ನು ತೆಗೆದುಕೊಳ್ಳಬೇಕಾಗಿತ್ತು. ಅಲ್ಲಿಯವರೆಗೆ ಆಗದೇ ಇದ್ದಂತಹ ಪ್ರಯತ್ನವನ್ನು ಅವರು ಮಾಡಬೇಕಾಗಿತ್ತು. ಆದರೆ ಅವರು ತೆಗೆದುಕೊಳ್ಳಲಿಲ್ಲ. ೧೯೭೪ರಿಂದ ೮೩ರವರೆಗೆ ಎಲ್ಲಿ ಹೋಗಿತ್ತು ಇದು? ಈಗ ಬಂದಿದೆ. ತಾವು ನೋಡಿರಬಹುದು ಅಡ್ಮಿನಿಸ್ಟ್ರೇಟರ್ಸ್ ರೆಜೀಮ್‌ನಲ್ಲಿ ಶಾಸಕರು ಆಗಾಗ ಸಭೆ ಸೇರುತ್ತಿದ್ದರು. ಪ್ರತಿಯೊಂದು ಸಭೆಯಲ್ಲೂ ಈ ಬಗ್ಗೆ ಪ್ರಶ್ನೆಯಾಗಿ ಚರ್ಚೆಯಾಗಿರುವುದನ್ನು ಅಡ್ಮಿನಿಸ್ಟ್ರೇಟಿವ್ ಪ್ರೊಸೀಡಿಂಗ್ಸ್‌ನಲ್ಲಿ ತಾವು ಬೇಕಾದರೆ ನೋಡಬಹುದು. ಈ ನಿಯಮಾವಳಿಗಳು ಈಗಿನ ಕಾಲಕ್ಕೆ ತಕ್ಕಂತೆ ಇಲ್ಲದೇ ಹೋದರೆ, ಇದರಲ್ಲಿ ಬಿಗಿ ಇಲ್ಲದೇ ಹೋದರೆ, ನಾವು ಮನಸ್ಸಿಗೆ ಬಂದ ರೀತಿಯಲ್ಲಿ ಮಾಡಿಕೊಂಡು ಹೋಗಬಹುದು, ಸಾಕಷ್ಟು ಅನುಕೂಲಗಳನ್ನು ಪಡೆದುಕೊಂಡು ಹೋಗಬಹುದು ಎಂದು ಸಭೆಯಲ್ಲಿ ನಾವು ಮಾತನಾಡಿದ್ದೇವೆ. ಈ ಬಿಲ್ಡಿಂಗ್ ಬೈಲಾಸ್ ಏನಿದೆ ಅದು ಈಗ ಅಪ್ರೂವ್ ಆಗಿಹೋಗಿದೆ. ೯ ವರ್ಷಗಳ ಕಾಲ ಮಾಡದೇ ಇರತಕ್ಕಂಥಾದ್ದು, ಇದರ ಜವಾಬ್ದಾರಿಯನ್ನು ತಾವು ಒಪ್ಪಿಕೊಳ್ಳಬೇಕೋ ಬೇಡವೋ? ಇದರ ಜೊತೆಯಲ್ಲಿ ಏನಾಗಿದೆ ಎಂದರೆ, ಬೆಂಗಳೂರು ನಗರಕ್ಕೆ ಸಂಬಂಧಪಟ್ಟಹಾಗೆ ಯಾವುದನ್ನೇ ತೆಗೆದುಕೊಳ್ಳಿ, ಮುನಿಸಿಪಲ್ ಕಾರ್ಪೊರೇಷನ್ ಆ್ಯಕ್ಟ್ ಎಂದು ಇದೆ. ಇದನ್ನು ೧೯೭೬ರಲ್ಲಿ ಮಾಡಿರತಕ್ಕಂಥಾದ್ದು. ಹಳೆಯ ಆ್ಯಕ್ಟ್ ಈಗ ಸರಿಹೋಗುವುದಿಲ್ಲ ಎಂದು ಅನೇಕ ನಿಯಮಾವಳಿಗಳನ್ನು ಬದಲಾವಣೆ ಮಾಡಿ ಹೊಸ ಆ್ಯಕ್ಟ್‌ನ್ನು ಮಾಡಿದ್ದಾರೆ. ಆದರೆ, ಇದರಲ್ಲಿ ಬಂದ ನಿಯಮಾವಳಿಗಳನ್ನು ಪಾಲಿಸಲಿಕ್ಕೆ ಆಗುತ್ತಿಲ್ಲ. ಇದು ಬಹಳ ದುರದೃಷ್ಟಕರವಾದುದು. ಈಗ ಹೊಸ ಕಾರ್ಪೊರೇಷನ್ ಬಂದಿದೆ. ಇದರ ಬಗ್ಗೆ ಏನಾದರೂ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಸ್ವಾಮಿ, ಈ ನಗರ ಬೆಳೆದಿದೆ, ನಮ್ಮ ನಗರದ ಬೆಳವಣಿಗೆಯನ್ನು ಮೊಟಕು ಮಾಡಬೇಕು, ಇದನ್ನು ಕಂಟೈನ್ ಮಾಡತಕ್ಕಂಥ ಪ್ರಯತ್ನವನ್ನು ಈ ಸರ್ಕಾರ ಇದುವರೆಗೂ ಮಾಡಿಲ್ಲ. ಬೆಂಗಳೂರು ನಗರದ ಬಗ್ಗೆ ಅನೇಕ ವಿಚಾರಗಳಿವೆ. ಅನಧಿಕೃತ ಕಟ್ಟಡ ನಿರ್ಮಾಣ, ರೆವಿನ್ಯೂ ಲ್ಯಾಂಡ್ ಬಗ್ಗೆ ಇದುವರೆಗೂ ಯಾವರೀತಿಯಿಂದಲೂ ಹತೋಟಿಯಲ್ಲಿಡತಕ್ಕಂಥ ಪ್ರಯತ್ನವನ್ನು ಮಾಡಲಿಲ್ಲ. ಇದು ವರೆಗೂ ಈ ಬೆಳವಣಿಗೆಯನ್ನು ಕಂಟ್ರೈನ್ ಮಾಡತಕ್ಕಂಥ ಪ್ರಯತ್ನವನ್ನು ಮಾಡದೇ ಇರುವುದರಿಂದ, ಯಾವುದೇ ಹತೋಟಿಗೆ ಸಿಗದೇ ಇರತಕ್ಕಂಥ ರೀತಿಯಲ್ಲಿ ಬೆಂಗಳೂರು ನಗರ ಬೆಳೆದಿದೆ. ಸುಂದರವಾದ ನಗರ ಎಂದು ಇದರ ಬಗ್ಗೆ ಏನು ಹೇಳುತ್ತಿದ್ದೆವು, ಅದು ಈಗ ಹೊರಟುಹೋಗಿದೆ. ಇಲ್ಲಿ ಈಗ ಯಾವ ಬಗೆಯ ಸೌಂದರ್ಯವೂ ಉಳಿದಿಲ್ಲ. ಇವತ್ತು ನಗರ ಜೀವನ ನರಕಸದೃಶ್ಯವಾಗಿದ್ದು

ಇಲ್ಲಿ ಯಾವುದೇ ರೀತಿಯ ಅನುಕೂಲತೆಗಳೂ ಸಿಗುತ್ತಿಲ್ಲ. ಬೆಂಗಳೂರು ನಗರದಲ್ಲಿ ಹೆಚ್ಚು ಹೆಚ್ಚು ಕಾರ್ಖಾನೆಗಳು ಇನ್ನುಮುಂದೆ ಬರಬಾರದು ಎನ್ನುವ ಮಾತನ್ನು ಅನೇಕ ಮಂದಿ ನಗರ ತಜ್ಞರು ಹೇಳಿದ್ದಾರೆ. ತಮಗೆ ತಿಳಿದಹಾಗೆ ಇಡೀ ಭಾರತ ದೇಶದಲ್ಲಿ ಕೈಗಾರಿಕಾ ಬೆಳವಣಿಗೆಯಲ್ಲಿ ಬೆಂಗಳೂರಿಗೆ ೩೩ ಪರ್ಸೆಂಟ್ ಬಂದಿದೆ. ಆದರೂ ಕೂಡ ನಗರದ ಬೆಳವಣಿಗೆಯನ್ನು ಹತೋಟಿಯಲ್ಲಿಡತಕ್ಕ ಪ್ರಯತ್ನವನ್ನು ಮಾಡಲಿಲ್ಲ, ಇವತ್ತಿನ ದಿವಸ ಕಲ್ಕತ್ತಾನಗರ ಬಿಟ್ಟರೆ ಹೆಚ್ಚು ಪ್ರಮಾಣದಲ್ಲಿ ಏರ್ ಪೊಲ್ಯೂಶನ್ ಬೆಂಗಳೂರು ನಗರದಲ್ಲಿದೆ. ಆದ್ದರಿಂದ ಇವೆಲ್ಲಾ ಆಗಿರುವುದು ಆಡಳಿತಾಧಿಕಾರಿಯ ಆಡಳಿತದಲ್ಲಿ ಆಗಿರತಕ್ಕಂಥ ಪಾಪಗಳು ಎಂದು ಹೇಳಿದರೆ ತಪ್ಪಿಲ್ಲ. ಇದರ ಕಡೆಗೆ ಈಗ ಈ ಸರ್ಕಾರ ಗಮನ ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಸ್ವಾಮಿ, ಇನ್ನೊಂದು ವಿಚಾರವನ್ನು ಹೇಳಬೇಕು. ಈ ನಗರದಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆ್ಯಕ್ಟನ್ನು ಕಂಟ್ರೈನ್ ಮಾಡಬೇಕೆಂಬ ದೃಷ್ಟಿಯಿಂದ ತಂದರು. ಇದರ ಪ್ರಿಯಾಂಬಲ್‌ನಲ್ಲಿ ಹೇಳುತ್ತಾರೆ In the Urban Land Ceiling Act, 1976, it has been stated like this.—

> "............ ......to prevent the concentration of Urban Land in the hands of few persons, for speculation, profiteering etc."

೧೯೭೬ರಲ್ಲಿ ಈ ಆ್ಯಕ್ಟನ್ನು ತಂದಿದ್ದರೂ ಇದರಲ್ಲಿ ಎಷ್ಟರಮಟ್ಟಿಗೆ ನಾವು ಸಫಲರಾಗಿದ್ದೇವೆ? ಬಹುಶಃ ಈ ಅರ್ಬನ್ ಲ್ಯಾಂಡ್‌ನಲ್ಲಿ ಕಾಣತಕ್ಕಂಥ ಕಾಳಸಂತೆ, ಹೋರ್ಡಿಂಗ್ ಬೇರೆಲ್ಲೂ ಇಲ್ಲವೆಂದು ಹೇಳಬಹುದು. ಇದನ್ನು ತಂದಮೇಲೆ ಜನತೆಗೆ ಏನಾದರೂ ಉಪಯೋಗ ಆಗಿದೆಯೇ? ಈ ಸೀಲಿಂಗ್ ಆ್ಯಕ್ಟನಿಂದ ಏನೂ ಪ್ರಯೋಜನವಿಲ್ಲವೆಂದು ಕೇಂದ್ರ ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದಾರೆ. ಇದರಿಂದ ಏನಾಗಿದೆ ಎಂದರೆ, ಪುನಃ ಅಧಿಕಾರಿಗಳಿಗೆ ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶ ಆಯಿತೇ ಹೊರತು ಜನರಿಗೆ ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಆ್ಯಕ್ಟನಿಂದ ಪ್ರಯೋಜನ ಆಗುತ್ತಿಲ್ಲ. ಆದ್ದರಿಂದ, ಬೇರೆ ಯಾವುದಾದರೂ ರೀತಿಯಲ್ಲಿ ಸೀಲಿಂಗ್ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದನ್ನು ಬದಲಾವಣೆ ಮಾಡುವುದು ಸೂಕ್ತವಾಗಿದೆ. ಇದನ್ನು ತ್ವರಿತವಾಗಿ ತರಬೇಕು ಮತ್ತು ವೆಕೇಂಟ್ ಲ್ಯಾಂಡ್ ಮೇಲೆ ಹತೋಟಿ ತರತಕ್ಕದ್ದು ಸೂಕ್ತವೆಂದು ನಾನು ಹೇಳುತ್ತೇನೆ.

ಇನ್ನು, ಕಾರ್ಪೊರೇಷನ್ ವರ್ಕ್ಸ್ ಬಗ್ಗೆ ಒಂದೆರಡು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬೆಂಗಳೂರು ನಗರ ಕಾರ್ಪೊರೇಷನ್‌ನವರು ಹೈರೈಸ್ ಬಿಲ್ಡಿಂಗ್ಸ್ ಹತ್ತಿರ ೭೮ ಲಕ್ಷ ರೂಪಾಯಿ ವೆಚ್ಚದಲ್ಲಿ ಕಾರು ಪಾರ್ಕು ಮಾಡುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ಈಗಾಗಲೇ ಹಲವರು ಕೋರ್ಟಿಗೆ ಹೋಗಿದ್ದಾರೆ. ಸರಿಯಾದ ಪೌರಸೌಲಭ್ಯಗಳನ್ನು ಕೊಡುವುದಕ್ಕೆ ಈಗ ಸಾಧ್ಯವಾಗುತ್ತಿಲ್ಲ. ರಸ್ತೆ ಸೌಲಭ್ಯ, ದೀಪ ಸೌಲಭ್ಯ ಸರಿಯಾಗಿ ಇಲ್ಲದೇ ಇರುವಾಗ ೭೮ ಲಕ್ಷ ರೂಪಾಯಿ ವೆಚ್ಚದಲ್ಲಿ ಕಾರ್ ಪಾರ್ಕಿಂಗ್ ವ್ಯವಸ್ಥೆ ಏಕೆ? ಇದನ್ನು ಕೈಬಿಡಬೇಕೆಂದು ಬೆ ಕಾದಷ್ಟು ಸಲ ಹೇಳಿದ್ದೇವೆ ಒತ್ತಾಯ ಕೂಡ ಮಾಡಿದ್ದೇವೆ ಬಹುಶಃ ನಮ್ಮ ದೇಶದಲ್ಲಿ ಈ ರೀತಿ ಎಲ್ಲೂ ಇಲ್ಲವೆಂದು ಕಾಣುತ್ತದೆ. ಆದ್ದರಿಂದ ಇದನ್ನು ಕೈಬಿಡಬೇಕೆಂದು ನಾನು ಹೇಳುತ್ತಿದ್ದೇನೆ. ಇವತ್ತು ನಗರ ಕಾರ್ಪೊರೇಷನ್ ಹೇಗೆ ಕೆಲಸ ಮಾಡುತ್ತಿದೆ ಎಂದು ಒಂದು ಮಾತಿನಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೈರೈಸ್ ಬಿಲ್ಡಿಂಗ್ಸ್ ಬಗ್ಗೆ ಮಾತನಾಡುತ್ತಾ ಒಂದೆರಡು ಉದಾಹರಣೆ ಕೊಟ್ಟರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಧರ್ಮಸಿಂಗ್ ಅವರು ಹೇಳಿದರು ಎಷ್ಟು ಲೈಸೆನ್ಸ್ ಕೊಟ್ಟಿದ್ದೇವೆ ಎಂದು. ನಾನು ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ ಭಕ್ತಾರಾಮ್ ಕನ್‌ಸ್ಟ್ರಕ್ಷನ್ ಕಂಪನಿ ಅವರು ಲೈಸೆನ್ಸ್ ತೆಗೆದುಕೊಳ್ಳದೇ ಕಟ್ಟಡ ಕಟ್ಟುವುದಕ್ಕೆ ಹೋದರು, ನಮ್ಮಲ್ಲಿ ಒಬ್ಬರು ಮಹಿಳಾ ಕಮೀಷನರ್ ಇದ್ದರು. ಅದು ಅವರ ಗಮನಕ್ಕೆ ಬಂದು ಅದನ್ನು ಒಡೆದು ಹಾಕಲಿಕ್ಕೆ ಹೋದರು. ಬಹುಶಃ ಅವರು ನಗರ ಕಾರ್ಪೊರೇಷನ್ ಅಧಿಕಾರಿಗಳನ್ನು ತಮ್ಮ ಕಡೆಗೆ ಸೆಳೆದುಕೊಂಡು, ರಾಜಕೀಯದಲ್ಲಿ ಕಲುಷಿತ ಮಾಡಿದಂಥವರು. ಅವರು ಮಾತನಾಡುವುದು ಕೋಟಿಗಟ್ಟಲೆ ಬಗ್ಗೆ ಹೊರತು ಲಕ್ಷಗಟ್ಟಲೆ ಮಾತನಾಡುವುದಿಲ್ಲ. ಅವರು ಏನು ಮಾಡಿದರು? Wi hout licence, Licenser deemed to have been sanction d ಎಂದು ತಿಳಿದುಕೊಂಡು Th y have cons - ructed four floors. ಇದನ್ನು ಕಮಿಷನ್‌ರವರ ಗಮನಕ್ಕೆ ತಂದಾಗ ಅವರು ಅದನ್ನು ಒಡೆದ

ಹಾಕುವುದಕ್ಕೆ ಹೋದರೆ ಏನಾಯಿತು ಎಂದು ಹೇಳುತ್ತೇನೆ. ಒಡೆದು ಹಾಕಬೇಕಾದರೆ ಪೊಲೀಸ್‌ನವರ ಸಹಾಯ ಬೇಕಾಗುತ್ತದೆ. ಅವಾಗ ಶ್ರೀ ನಿಜಾಮುದ್ದೀನ್‌ರವರು ಪೋಲಿಸ್ ಕಮಿಷನರ್ ಆಗಿದ್ದರು, ಹೇಗೆ ಹಣ ಕೆಲಸ ಮಾಡುತ್ತದೆ ಎಂಬುದಕ್ಕೆ ಇದನ್ನು ಉದಾಹರಣೆಗಾಗಿ ಹೇಳುತ್ತಿದ್ದೇನೆ. ಅವರು ಒಡೆಸಿ ಹಾಕುವುದಕ್ಕೆ ಸಿಬ್ಬಂದಿಯವರ ಜೊತೆಯಲ್ಲಿ ಹೋದಾಗ, ಅವರಲ್ಲಿದ್ದಂತ ರಿವಲ್ವಾರ್‌ನ್ನು ತೋರಿಸಿ ಹತ್ತಿರ ಬಂದರೆ ಸುಟ್ಟು ಹಾಕುತ್ತೇನೆಂದು ಹೇಳಿದರು. ಆವಾಗ ಪೊಲೀಸ್‌ನವರು ವಾಪಸ್ ಬರ ಬೇಕಾಯಿತು. ಈ ಕಂಪೆನಿಯ ಬಗ್ಗೆ ಹೈಕೋರ್ಟಿನವರು ಸ್ಟ್ರಿಕ್ಚರ್ಸ್ ಪಾಸ್ ಮಾಡಿದ್ದಾರೆ. ಕಾರ್ಪೋರೇಷನ್‌ನ ಅಧಿಕಾರಿಗಳ ಮೇಲೆ ಈ ರೀತಿ ಮಾಡಿರತಕ್ಕಂತಹದು ಸರಿಯಲ್ಲ ಎಂದು ಹೇಳಿದ್ದಾರೆ. ಇನ್ನೊಂದು ಪ್ಯಾಲೇಸ್ ಆರ್ಚರ್ಡ್ಸ್‌ನಲ್ಲಿ ಅಂದರೆ ಸದಾಶಿವನಗರದಲ್ಲಿ ಕಟ್ಟಿರುವ ಹೈರೈಸ್ಡ್ ಬಿಲ್ಡಿಂಗ್‌ನ ವಿಚಾರದಲ್ಲಿ ಹೈಕೋರ್ಟಿನವರು ಸ್ಟ್ರಿಕ್ಚರ್ಸ್‌ಪಾಸ್ ಮಾಡಿದ್ದಾರೆ. ಆದರೆ ಇದುವರೆಗೂ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಹೈಕೋರ್ಟಿನವರು ಡೈರೆಕ್ಷನ್ ಕೊಟ್ಟಿರೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈ ಹೈರೈಸ್ಡ್ ಬಿಲ್ಡಿಂಗ್‌ನ ವಿಚಾರದಲ್ಲಿ ಒಬ್ಬೊಬ್ಬ ಅಧಿಕಾರಿಗಳು ಒಂದೊಂದು ರೀತಿಯಲ್ಲಿ ನಡೆದುಕೊಂಡಿದ್ದಾರೆ. ಇರತಕ್ಕಂತಹ ಕಾನೂನನ್ನು ಗಾಳಿಗೆ ತೂರಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರಬಹುದು, ಒಂದು ತಾಜ್ ಗ್ರೂಪ್ ಹೋಟೆಲ್ ಮಹಾತ್ಮ ಗಾಂಧಿ ರಸ್ತೆಯ ಕೊನೆಯಲ್ಲಿ ಬರುತ್ತದೆ. ಅದು ಇನ್ನೂ ಮುಗಿಯುತ್ತಾ ಇದೆ. ಆದರೆ ಹಿಂದೆ ಕಾರ್ಪೊರೇಷನ್ ಕಮೀಷನರ್ ಆಗಿದ್ದಂತಹ ಶ್ರೀಮಾನ್ ಪಟ್ನಾಯಕ್‌ರವರು ಹೋಗುವುದಕ್ಕಿಂತ ಮುಂಚೆ, ಕಟ್ಟಡದ ಕೆಲಸ ಪೂರ್ತಿಯಾಗದಿದ್ದರೂ ಆ ಹೋಟೆಲ್‌ಗೆ ಲೈಸೆನ್ಸ್‌ನ್ನು ಕೊಟ್ಟುಬಿಟ್ಟಿದ್ದಾರೆ. ಅದೇರೀತಿ ಅಸೆಸ್‌ಮೆಂಟ್ ಕೂಡ ೪ ಲಕ್ಷ ಎಂದು ಅಸೆಸ್‌ಮೆಂಟ್ ಮಾಡಿ ಹೊರಟು ಹೋಗಿದ್ದಾರೆ. ಕೆಲಸ ಇನ್ನೂ ಮುಗಿದಿಲ್ಲ. ತಾಜ್‌ಗ್ರೂಪ್ ಹೋಟೆಲ್‌ನ ಕಂಟ್ರಾಕ್ಟ್‌ದಾರರು ನಾರಾಯಣ ಶೆಟ್ಟಿ ಎಂಬುವರು.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಆ ಕಂಟ್ರಾಕ್ಟ್‌ದಾರರು ಮುಖ್ಯಮಂತ್ರಿಗಳಿಗೆ ಬೇಕಾದಂತಹ ಸ್ನೇಹಿತರಾಗಿದ್ದಾರೆ.

ಶ್ರೀ ಎಂ. ರಘುಪತಿ.—ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಲ್ಲಾ ಕಾಲದಲ್ಲೂ ಎಲ್ಲಾ ಕಂಟ್ರಾಕ್ಟ್‌ದಾರರು ಎಲ್ಲಾ ಮುಖ್ಯಮಂತ್ರಿಗಳಿಗೂ ಬೇಕಾದವರು ಆಗುತ್ತಾರೆ.

ಶ್ರೀ ಪಿ. ರಾಮದೇವ್.—ಆದರೆ ಇವತ್ತಿಗೂ ಕನ್ಸ್ಟ್ರಕ್ಷನ್ ಕೆಲಸ ಮುಗಿಯದಿದ್ದರೂ ಅಕ್ಯು ಪೇಷನ್ ಸರ್ಟಿಫಿಕೇಟ್‌ನ್ನು ಹೇಗೆ ಕೊಟ್ಟರು ? ಹೈರೈಸ್ಡ್ ಬಿಲ್ಡಿಂಗ್‌ನಲ್ಲಿ ಹೈರೈಸ್ಡ್ ಕರಪ್ಷನ್. ಉಡ್‌ಲ್ಯಾಂಡ್ ಹೋಟೆಲ್ ತೆಗೆದುಕೊಳ್ಳಿ. ಅಲ್ಲೂ ಕೂಡ ಒಂದು ಹೈರೈಸ್ಡ್ ಬಿಲ್ಡಿಂಗ್ ಬಂದಿದೆ. ಗಾರ್ಡನ್‌ಗೆ ಮೀಸಲಾಗಿದ್ದಂತಹ ಜಾಗದಲ್ಲಿ ಕಟ್ಟಿದ್ದಾರೆ. ಅವರಿಗೆ ಎಷ್ಟು ಫ್ಲೋರ್ಸ್‌ಗೆ ಅಪ್ಪಣೆ ಕೊಟ್ಟಿದ್ದಾರೋ, ಗೊತ್ತಿಲ್ಲ. ಆದರೂ ೬-೭ ಫ್ಲೋರ್ಸ್‌ನ್ನು ಕಟ್ಟಿದ್ದಾರೆ. ಅಲ್ಲೂ ೨ ಫ್ಲೋರ್ಸ್ ಜಾಸ್ತಿಯ ಕಟ್ಟಿಬಿಟ್ಟಿದ್ದಾರೆ. ಅವರ ಮೇಲೆ ಇದುವರೆವಿಗೂ ಪೆನಾಲ್ಟಿಯನ್ನು ಹಾಕಿಲ್ಲ. ಅದೇ ರೀತಿ ಇನ್ನೂ ಬೇಕಾದಷ್ಟು ಕೇಸ್‌ಗಳು ಇವೆ. ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇ ನೆಂದರೆ, ಇದರ ರೆಕಾರ್ಡ್‌ಗಳನ್ನು ತರಿಸಿ ನೋಡಿ ಎಲ್ಲವೂ ತಿಳಿಯುತ್ತದೆ.

ಶ್ರೀ ಬಿ. ಶಿವಣ್ಣ.—ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಇಲ್ಲ. ಸಂಬಂಧಪಟ್ಟ ಮಂತ್ರಿ ಗಳೇ ಇಲ್ಲಿ ಇಲ್ಲ ಅಂದರೆ ಹೇಗೆ ?

ಶ್ರೀ ಪಿ. ರಾಮ್‌ದೇವ್.—ಹೈರೈಸ್ಡ್ ಕಟ್ಟಡಗಳಲ್ಲಿ ಹೈರೈಸ್ಡ್ ಕರಪ್‌ಸನ್. ಬಹುಶಃ ಇದು ಇನ್ನೆಲ್ಲೂ ಇಲ್ಲ. ಸರ್ಕಾರ ತರಿಸಿ ನೋಡಬೇಕು. ಅನೇಕ ಕಡೆ ಲೈಸೆನ್ಸ್ ಕೊಟ್ಟಿರತಕ್ಕಂತಹದ್ದು ೫ ಫ್ಲೋರ್ಸ್‌ಗೆ ಕೊಟ್ಟಿದ್ದರೆ,ಕಾರ್ಪೊರೇಷನಿನ ಕಡತದಲ್ಲಿ ಕೇವಲ ೩ಫ್ಲೋರ್ಸ್ ಎಂದು ಇರುತ್ತದೆ.ಪಾರ್ಟಿಗೆ ೫ ರಿಂದ ೬ ಫ್ಲೋರ್ಸ್‌ಗೆ ಅಪ್ಪಣೆಯನ್ನು ಕೊಟ್ಟು ಸೀಲ್ ಹಾಕಿ ಕೊಟ್ಟಿರುತ್ತಾರೆ. ಏಕೆಂದರೆ ನಾವು ಅಲ್ಲಿ ಹೋಗಿ ವಿಚಾರಣೆ ಮಾಡಿದಾಗ ಕಾನೂನು ಪ್ರಕಾರ ಕೊಟ್ಟಿದ್ದಾರೆಂದು ತೋರಿಸುತ್ತಾರೆ. ಕಾನೂನು ವ್ಯವಸ್ಥೆಯಲ್ಲಿ ೩ ಫ್ಲೋರ್ಸ್‌ಗೆ ಕೊಡಬಹುದು ಎಂದು ಇದ್ದರೆ, ಪಾರ್ಟಿಗೆ ೬ ಫ್ಲೋರ್ಸ್‌ಗೆ ಕೊಟ್ಟಿರು ತ್ತಾರೆ. ನಾವು ಇಂತಹ ಅನೇಕ ವಿಚಾರಗಳನ್ನು ಹಿಂದಿನ ಕಮೀಷನರ್‌ರವರ ಗಮನಕ್ಕೆ ತಂದಾಗ, ಮಂತ್ರಿಗಳ ಗಮನಕ್ಕೆ ತಂದಾಗ ಮತ್ತು ಸರ್ಕಾರದ ಗಮನಕ್ಕೆ ತಂದಾಗ ಹಿಂದೆ ಕಾರ್ಪೊರೇಷನ್‌ನಲ್ಲಿ ಮಹಿಳಾ ಕಮಿಷನರ್ ಆಗಿದಂತಹ ಶ್ರೀಮತಿ ತೆರೆಸಾ ಭಟ್ಟಾಚಾರ್ಯರವರು ಏನು ಮಾಡಿದರು

ಅಂದರೆ, ಇಂತಹ ಅನೇಕರ ಮೇಲೆ ಸಾವಿರಾರು ರೂಪಾಯಿಗಳು, ಅಂದರೆ ೫೦,೬೦,೭೦,೮೦, ಸಾವಿರದಂತೆ ದಂಡವನ್ನು ಹಾಕಿದರು. ಆದರೆ ಅದನ್ನು ವಸೂಲಿ ಮಾಡುವವರೆಗೂ ಅವರನ್ನು ಅಲ್ಲಿ ಉಳಿಸಲಿಲ್ಲ, ಹೈರೈಸ್ಡ್ ಬಿಲ್ಡಿಂಗ್‌ನ ಅವ್ಯವ್ಯವಹಾರದಲ್ಲಿ ಅವರು ಕೊಚ್ಚಿಕೊಂಡು ಹೋಗಿಬಿಟ್ಟರು. ಈ ರೀತಿ ದೊಡ್ಡ ಅನಾಹುತ, ಭ್ರಷ್ಟಾಚಾರ ನಡೆಯುತ್ತಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಸಂಪೂರ್ಣವಾದ ವಿಚಾರಣೆ ಮಾಡಬೇಕು. ಇದುವರೆವಿಗೂ ಕೊಟ್ಟಿರತಕ್ಕಂತಹ ಲೈಸೆನ್ಸ್‌ಗಳನ್ನು ಹೇಗೂ ೨ ತಿಂಗಳು ಹೈರೈಸ್ಡ್ ಬಿಲ್ಡಿಂಗ್‌ಗಳನ್ನು ಕಟ್ಟಕೂಡದು ಎಂದು ಬ್ಯಾನ್ ಮಾಡಿದ್ದೀರಲ್ಲ, ಈ ಸಂದರ್ಭದಲ್ಲಿ ಕಾರ್ಪೊರೇಷನ್‌ನಲ್ಲಿರತಕ್ಕಂತಹ ಎಲ್ಲ ರೆಕಾರ್ಡುಗಳನ್ನು ತರಿಸಿ ನೋಡಬೇಕು. ಮಲ್ಲೇಶ್ವರಂನಲ್ಲಿ ಒಬ್ಬ ಟಾರ್ ಕಂಟ್ರಾಕ್ಟ್‌ದಾರರೊಬ್ಬರು ಹೈರೈಸ್ಡ್ ಬಿಲ್ಡಿಂಗ್‌ನ್ನು ಕಟ್ಟಿಬಿಟ್ಟಿದ್ದಾರೆ ಅವರು ಹೇಗೆ ಕಟ್ಟಿದ್ದಾರೆಂದರೆ ಟಾರ್ ರಸ್ತೆಯನ್ನು ಮಾಡಿದ ಹಾಗೆ ಕಟ್ಟಿಬಿಟ್ಟಿದ್ದಾರೆ. ಆ ಕಟ್ಟಡದಲ್ಲಿ ನೀರು ಮೇಲಿಂದ ಕೆಳಗಡೆವರೆಗೂ ಸುರಿಯುತ್ತಿರುತ್ತದೆ. ದಯಮಾಡಿ ನಮ್ಮ ಜನತೆಯನ್ನು ಇಂತಹ ಪಿಡುಗುಗಳಿಂದ ಉಳಿಸಬೇಕು. ಅವರು ಸಾವಿರಾರು ರೂಪಾಯಿಗಳನ್ನು, ಲಕ್ಷಾಂತರ ರೂಪಾಯಿಗಳನ್ನು ಅಧಿಕಾರಿಗಳಿಗೆ ಕೊಟಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿ ತಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಂಡು ಇದನ್ನು ಸರಿಪಡಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಯಾರೇ ತಪ್ಪು ಮಾಡಿರಲಿ, ನಾವು ತಪ್ಪು ಮಾಡಿದ್ದರೆ ನಮ್ಮ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಬೆಂಗಳೂರು ನಗರದ ಅಭಿವೃದ್ಧಿಗಾಗಿ ಹೊರಗಿನಿಂದ ಸಹಾಯವನ್ನು ತೆಗೆದುಕೊಂಡು ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಾ ಹೇಳುತ್ತಿದ್ದೇನೆ. ಉದಾಹರಣೆಗೆ ಪೂನಾವನ್ನು ತೆಗೆದುಕೊಳ್ಳಿ, ಅಥವಾ ಮದ್ರಾಸ್‌ನ್ನಾಗಲಿ ತೆಗೆದುಕೊಳ್ಳಿ, ಅವರು ಎಲ್ಲಿಯವರೆಗೆ ಸಹಾಯವನ್ನು ತೆಗೆದುಕೊಂಡಿದ್ದಾರೆಂದರೆ. ಬೀದಿ ದೀಪಕ್ಕೆ ಸೋಡಿಯಂ ಲೈಟ್ ಹಾಕುವುದಕ್ಕೆ ಕೂಡ ವಿಶ್ವಬ್ಯಾಂಕಿನ ನೆರವನ್ನು ತೆಗೆದುಕೊಂಡಿದ್ದಾರೆಂದರೆ ಪ್ರತಿಯೊಂದು ಅಭಿವೃದ್ಧಿ ಯೋಜನೆಗೂ ವಿಶ್ವಬ್ಯಾಂಕಿನ ನೆರವನ್ನು ಅವರು ತೆಗೆದುಕೊಂಡಿದ್ದಾರೆ. ಅದನ್ನು ಬಿಟ್ಟರೆ, ನಮಗೆ ಇರತಕ್ಕಂತಹ ಸಂಪನ್ಮೂಲವನ್ನು ಹೆಚ್ಚಿಸುವ ಕಡೆ ಪ್ರಯತ್ನಪಡಿ. ಮನೆಗಂದಾಯ, ಟ್ಯಾಕ್ಸ್ ಬರುತ್ತದೆ. ಅದರ ಹೊರತಾಗಿ ಬೇರೆ ಯಾವ ದುಡ್ಡೂ ಕಾರ್ಪೊರೇಷನ್‌ಗೆ ಬರುವುದಿಲ್ಲ. ಆದ್ದರಿಂದ ಹಣಕಾಸಿನ ಸಂಸ್ಥೆಗಳಿಂದ, ಧನಸಹಾಯವನ್ನು ತೆಗೆದುಕೊಂಡು ನಗರಕ್ಕೆ ಬೇಕಾದ ಸೌಲಭ್ಯವನ್ನು ಕೊಡತಕ್ಕಂತಹದ್ದು ಆಗುತ್ತಿಲ್ಲ. ಅದರ ಬಗ್ಗೆ ಅಧಿಕಾರಿಗಳೂ ಗಮನಕೊಡುತ್ತಿಲ್ಲ. ಇನ್ನೂ ಬೇಕಾದಷ್ಟು ವಿಷಯಗಳು ಮಾತನಾಡುವುದಕ್ಕೆ ಇದ್ದರೂ ಹೆಚ್ಚಿಗೆ ಮಾತನಾಡದೆ ಒಂದೆರಡು ವಿಚಾರಗಳನ್ನು ನಮ್ಮ ಬೆಂಗಳೂರು ನೀರು ಸರಬರಾಜು ಮಂಡಲಿಯ ಬಗ್ಗೆ ಹೇಳುತ್ತೇನೆ.

ಜಲಮಂಡಲಿ ಬೆಂಗಳೂರಿಗೆ ವಿಶೇಷವಾಗಿ ಮಾಡಿರತಕ್ಕಂತಹದ್ದು ಅದಕ್ಕೆ ದೊಡ್ಡ ಜವಾಬ್ದಾರಿ ಇದೆ. ಇದು ಒಂದು Welfare measure ಇದುವರೆವಿಗೂ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ಇಂತಹ ಒಂದು ಮುಖ್ಯವಾದುದನ್ನು ಬಹಳ ತೀವ್ರರೀತಿಯಲ್ಲಿ ಮಾಡಲಿಲ್ಲ ಎಂಬ ತಕ್ಕಂತಹದನ್ನು ಬಹಳ ದುಃಖದಾಯಕವಾಗಿ ಹೇಳಬೇಕಾಗಿದೆ. ಅನೇಕಬಾರಿ ನೀರು ಏನು ಬರುತ್ತದೋ ಅದರ ಬಗ್ಗೆ ಕೆಲವು ಕಾರಣಗಳನ್ನು ತೋರಿಸುತ್ತಾರೆ. ಕೆಲವು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನು ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಏನೊಂದು ಜಾಗ್ರತೆಯನ್ನು ವಹಿಸಬೇಕೋ ಅದನ್ನು ವಹಿಸುತ್ತಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಒಂದು ಅನ್ಯಾಯ ನಮಗೆ ಆಗಿದೆ. ಅರ್ಧ ಭಾಗದ ಬೆಂಗಳೂರು ನಗರದ ಜನ ಕಾವೇರಿ ನೀರನ್ನು ಕುಡಿಯುತ್ತಿದ್ದರೆ, ಇನ್ನರ್ಧ ಭಾಗದವರು ಅರ್ಕಾವತಿ ನೀರು ಕುಡಿಯುತ್ತಿದ್ದಾರೆ, ಅರ್ಕಾವತಿಯಿಂದ ನಗರಕ್ಕೆ ಪ್ರತಿನಿತ್ಯ ೩೦ ಮಿಲಿಯನ್ ಗ್ಯಾಲನ್ ನೀರು ಬರುತ್ತಿದೆ. ೧೯೭೮ ರಲ್ಲೇ ಇದರ ೪ನೇ ಹಂತದ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅದಕ್ಕಾಗಿ ೧೪ ಕೋಟಿ ರೂಪಾಯಿಗಳ ಅಂದಾಜನ್ನೂ ಕೂಡ ತಯಾರು ಮಾಡಿದ್ದರು. ನಮ್ಮ ದುರ್ದೈವವೋ ಏನೋ, ಯಾರೋ ಕೆಲವರು ಅದನ್ನು ಕಾವೇರಿ ಯೋಜನೆಗೆ ಸೇರಿಸಿಕೊಂಡು ಬಿಟ್ಟಿದ್ದಾರೆ. ಹಿಂದೆ ೧೯೬೪ ರಲ್ಲಿ ಏನು ನೀರು ಬರುತ್ತಿತ್ತು, ಅದಕ್ಕಿಂತ ಒಂದು ಹನಿ ನೀರು ಕೂಡ ಜಾಸ್ತಿ ಬರುತ್ತಿಲ್ಲ ಇವತ್ತಿನವರೆಗೆ. ಅದರಿಂದ ಅರ್ಕಾವತಿ ನೀರನ್ನು ಉಪಯೋಗ ಮಾಡತಕ್ಕಂತಹ ಜನರಿಗೆ ತೊಂದರೆಯಾಗಿದೆ. ಇದರ ಬಗ್ಗೆ ನಾನು ಬಹಳ ವರ್ಷಗಳಿಂದ ಒತ್ತಾಯ ಮಾಡಿಕೊಂಡು ಬರುತ್ತಿದ್ದೇನೆ. ಈಗ ಏನು ೩ ಸಾಲು ಪೈಪುಗಳಲ್ಲಿ ಅರ್ಕಾವತಿಯಿಂದ ನಗರಕ್ಕೆ ನೀರು ಬರುತ್ತಿದೆ, ಆ ಮೂರು ಲೈನ್‌ಗಳನ್ನು ತೆಗೆದುಹಾಕಿ, ದೊಡ್ಡ ಪೈಪಿನ ಲೈನ್‌ನ್ನು ಹೊಸದಾಗಿ ಹಾಕಿ ಅರ್ಕಾವತಿ ನೀರನ್ನು ಸಮರ್ಪಕವಾಗಿ ಬಳಸುವುದಕ್ಕೆ ಏರ್ಪಾಡು ಮಾಡಬೇಕೆಂದು

ಒತ್ತಾಯ ಮಾಡುತ್ತಾ ಹೇಳುತ್ತಿದ್ದೇನೆ. ಅರ್ಕಾವತಿ ನೀರು ಏನು ಬೆಂಗಳೂರು ನಗರಕ್ಕೆ ಬರುತ್ತಿದೆ ಅದು ಕೇವಲ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆಯೆಂದು ಬರುತ್ತಿತ್ತು. ಆದರೆ ಈಗ ಇಡೀ ವರ್ಷವೆಲ್ಲಾ ತೊಂದರೆ ಬರುತ್ತಿದೆ. ಇದಕ್ಕೆ ಕಾರಣವೇನೆಂದರೆ, ಹೆಚ್ಚು ಹೆಚ್ಚು ಕಮರ್ಷಿಯಲ್ ಪರ್‌ಪಸ್‌ಗೋಸ್ಕರ ಈ ನೀರನ್ನು ಕೊಟ್ಟುಬಿಡುತ್ತಿದ್ದಾರೆ ಅಂದರೆ ದುಡ್ಡು ಜಾಸ್ತಿ ಬರುತ್ತದೆ ಎಂದು ಕಾರ್ಖಾನೆಗಳಿಗೆ ಕೊಡುತ್ತಿದ್ದಾರೆ ಇತ್ತೀಚೆಗೆ ನಮಗೆ ಗೊತ್ತಿದೆ ಈ ಅರ್ಕಾವತಿ ನೀರನ್ನು ಮಿಲ್ ಅಂಡ್ ಏಕ್ಸಿಲ್ ಕಂಪನಿಯವರಿಗೆ ಕೊಟ್ಟಿದ್ದಾರೆ. ಹಿಗಾಗಿ ಕುಡಿಯುವ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಇದು ಹೋಗಬೇಕು. ಇಲ್ಲದಿದ್ದರೆ ನಗರದ ನಾಗರೀಕರು ಕುಡಿಯುವ ನೀರಿಗಾಗಿ ಪರದಾಡ ಬೇಕಾಗುತ್ತದೆ.

೪-೦೦ ಪಿ.ಎಂ.

ಈವೊತ್ತು ನಮ್ಮ ಸರ್ಕಾರ ಇರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕಾಗುವುದಿಲ್ಲ. ಇದೇ ರೀತಿ ಮುಂದುವರೆಯುವುದಾದರೆ ಫ್ಯಾಕ್ಟರಿಗೆ ಹೋಗತಕ್ಕಂಥಾ ವಾಟರ್ ಲೈನ್ ಅನ್ನು ಕಟ್ ಮಾಡತಕ್ಕಂಥ ಅಥವಾ ಬ್ರೇಕ್ ಮಾಡತಕ್ಕಂಥ ಚಳುವಳಿಯನ್ನು ಹೂಡಬೇಕಾಗುತ್ತದೆ. ಅವರಿಂದ ದುಡ್ಡು ಜಾಸ್ತಿ ಬರುತ್ತದೆ ಎಂದು ಹೀಗೆ ನೀರು ಕೊಟ್ಟುಬಿಟ್ಟರೆ ನಮಗೆ ಇಲ್ಲಿ ಕುಡಿಯುವುದಕ್ಕೆ ನೀರು ಇಲ್ಲದ ಹಾಗೆ ಆಗಿದೆ. ಇವರು ಹಾಗೆ ಮಾಡುವುದು ಸರಿಯೇ?

ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರು ನಮ್ಮ ಸರ್ಕಾರ ಇರುವುದರಿಂದ ನಾವು ಹೆಚ್ಚು ಗಲಾಟೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಿಮ್ಮ ಸರ್ಕಾರ ಸೇಫ್ ಆಗಿದೆಯೇ?

ಶ್ರೀ ಪಿ. ರಾಂದೇವ್.—ನಾವು ಸೇಫ್ ಆಗಿದ್ದೇವೆ. ಅದರ ಬಗ್ಗೆ ಏನೂ ಕಳವಳ ಬೇಡ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಶ್ರೀ ಪಿ. ರಾಂದೇವ್ ಅವರು ಒಳ್ಳೆಯ ಭಾಷಣ ಮಾಡುತ್ತಿದ್ದಾರೆ ನಾವು ಕೇಳೋಣ.

ಶ್ರೀ ಪಿ. ರಾಂದೇವ್.—ನೀವು ಬೆಂಗಳೂರಿಗೆ ಬಂದು ಎಲ್ ಹೆಚ್.ನಲ್ಲಿ ಇದ್ದು ಬಿಡುತ್ತೀರಾ. ಅಲ್ಲಿ ೨೪ ಗಂಟೆಯೂ ನೀರು ಸಿಕ್ಕುತ್ತದೆ ಅದರಿಂದ ನಿಮಗೆ ಏನೂ ಗೊತ್ತಾಗುವುದಿಲ್ಲ. ಇಲ್ಲಿ ನಾವು ಗೌರಿ ಗಣೇಶ ಹಬ್ಬದ ದಿವಸ ಪ್ರತಿ ಬೀದಿಗೂ ಹೋಗಿ ನಿಮಗೆ ನೀರು ಬಂತೇ ಇಲ್ಲವೇ ಎಂದು ಕೇಳಬೇಕಾಗುತ್ತದೆ. ಅದರ ಕಷ್ಟ ಸುಖ ನಮಗೆ ಗೊತ್ತಿದೆ. ಆದ್ದರಿಂದ ನಾನು ಈ ಮಾತು ಹೇಳುತ್ತಾ ಇರುವುದು. ಈ ಎರಡನೆ ಯೋಜನೆಗೆ ೫೬ ಕೋಟಿ ರೂಪಾಯಿ ಕೊಡಲು ನೀವು ಗಲಾಟೆ ಮಾಡಿದಿರಿ ಆ ಯೋಜನೆ ಮಾಡಿದರೂ ಸಹ ಈ ನೀರಿನ ಒಂದು ಬವಣೆ ಇನ್ನಷ್ಟು ಭೀಕರ ಆಗಿದೆ. ಆದುದರಿಂದ ಈ ಮೂರನೇ ಯೋಜನೆ ಮಾಡಬೇಕು. ಇದಕ್ಕೆ ೨೦೦-೨೫೦ ಕೋಟಿ ರೂಪಾಯಿಯಷ್ಟು ಹಣ ಬೇಕಾಗಿದೆ. ಇದಕ್ಕೆ ಫೈನಾನ್ಸ್ ಕನಕರೆನ್ಸ್ ಕೊಡಬೇಕು. ಇದಕ್ಕೆ ಹಣ ಸರ್ಕಾರ ಒದಗಿಸಬೇಕು. ಯಾವ್ಯಾವ ಮೂಲಗಳಿಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಲ್ಲಿಂದೆಲ್ಲಾ ತಂದು ಈ ಯೋಜನೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಈ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಅಧ್ಯಕ್ಷರು ಏನು ಇದ್ದಾರೆ ಅವರು ಇನ್ನೊಂದು ತಿಂಗಳಲ್ಲಿ ನಿವೃತ್ತರಾಗಲಿದ್ದಾರೆ. ಆ ಸ್ಥಾನಕ್ಕೆ ಉತ್ತಮರಾಗಿರುವ ಅದಕ್ಕೆ ಕಾಂಪಿಟೆಂಟ್ ಆಗಿರುವವರನ್ನು ನೇಮಕ ಮಾಡಿ ಎಂದು ಹೇಳುತ್ತೇನೆ. ಈ ಎರಡನೇ ಯೋಜನೆಗೆ ಯಾವ ರೀತಿಯಾದ ಒಬ್ಬ ಕಾಂಪಿಟೆಂಟ್ ಆಫೀಸರನ್ನು ನೇಮಕ ಮಾಡಿದಿರೋ ಅದೇ ರೀತಿಯಾಗಿ ಈ ೩ನೇ ಯೋಜನೆಗೂ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಫಿಲಂ ಸಬ್ಸಿಡಿ ಬಗ್ಗೆ ಹೇಳುತ್ತೇನೆ. ಮಾನ್ಯ ರಘುಪತಿಯವರು ಮತ್ತು ರಾಜಕುಮಾರ್ ರವರು ಒಳ್ಳೆಯ ಸ್ನೇಹಿತರು, ಕನ್ನಡ ಅಭಿಮಾನಿಗಳು, ಕನ್ನಡ ಚಲನಚಿತ್ರದ ಅಭಿಮಾನಿಗಳು, ಆದುದರಿಂದ ಈಗ ಉತ್ತಮ ಮಟ್ಟದಲ್ಲಿ ಕನ್ನಡ ಚಿತ್ರಗಳು ಬರುತ್ತವೆ. ಮಲೆಯಾಳಿಯಲ್ಲೇ ಬರತಕ್ಕಂಥ ಕನ್ನಡ ಚಲನಚಿತ್ರವನ್ನು ಮಾನ್ಯ ರಘುಪತಿಯವರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ. ರಘುಪತಿ.—ನಾನು ನೋಡಿಲ್ಲ.

ಶ್ರೀ ಸಿ. ಬೈರೇಗೌಡ.—ಇಬ್ಬರೂ ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಪಿ. ರಾಂದೇವ್.—ಮಲೆಯಾಳಿ ಚಿತ್ರದಲ್ಲಿ ಬರತಕ್ಕಂಥ ಅಶ್ಲೀಲ ಮತ್ತು ಅಸಹ್ಯ ಚಿತ್ರಗಳ ಬಗ್ಗೆ ಡೆಲ್ಲಿಯಲ್ಲಿ ಸಾಕಷ್ಟು ಚಳುವಳಿ ಮಾಡಿದ್ದಾರೆ. ಸರ್ಕಾರಕ್ಕೆ ಇದನ್ನು ತಡೆಗಟ್ಟಲು ಅಧಿಕಾರ ಇದೆ. ಆದುದರಿಂದ ಶ್ರೀಮತಿ ಚಂದ್ರಪ್ರಭಾ ಅರಸುರವರು ಇಂತಹ ಚಿತ್ರಗಳನ್ನು ನೋಡುವುದಕ್ಕೆ ಮುಂಚೆ ಇಂತಹ ಸೆಕ್ಸ್ ಫಿಲಂ ಪ್ರದರ್ಶನವನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ. ಇನ್ನು ಕನ್ನಡ ಫಿಲಂಸ್ ಸಬ್ಸಿಡಿ ಬಗ್ಗೆ ಮತ್ತು ತೆರಿಗೆಯ ಬಗ್ಗೆ ಒಂದು ಹೊಸ ನೀತಿ ನಿರೂಪಣೆ ಮಾಡಬೇಕಾಗಿದೆ ಎಂದು ಹೇಳುತ್ತಿದ್ದೀರಿ. ಒಂದು ಕಡೆ ತೆರಿಗೆ ವಿನಾಯಿತಿ, ಇನ್ನೊಂದು ಕಡೆ ಸಬ್ಸಿಡಿ ಕೊಡುವುದು ಎರಡೂ ಮಾಡುವುದು ಸರಿಯಲ್ಲ. ಇದರ ಬಗ್ಗೆ ಯಾವ ಒಂದು ನೀತಿ ಹಾಕಿಕೊಂಡಿದ್ದೀರಾ ಅನ್ನುವುದನ್ನು ಹೇಳಬೇಕು.

ಇನ್ನು ಈ ಕನ್ನಡ ಚಲನಚಿತ್ರವನ್ನು ೧೨ ವಾರಗಳ ಕಾಲ ಎಲ್ಲಾ ಥಿಯೇಟರ್‌ಗಳಲ್ಲೂ ಖಡ್ಡಾಯವಾಗಿ ಪ್ರದರ್ಶನ ಮಾಡಬೇಕು ಎಂದು ಹೇಳುತ್ತೀರಿ. ಎಷ್ಟು ಥಿಯೇಟರ್‌ಗಳಲ್ಲಿ ಇದನ್ನು ಖಡ್ಡಾಯವಾಗಿ ತೋರಿಸಿದ್ದಾರೆ ಹೇಳಿ. ಒಂದು ವೇಳೆ ಅವರು ೧೨ ವಾರಗಳ ಕಾಲ ಇದನ್ನು ಪ್ರದರ್ಶನ ಮಾಡದೇ ಹೋದರೆ ಆ ಥಿಯೇಟರುಗಳನ್ನು ೧೨ ವಾರಗಳ ಕಾಲ ಮುಚ್ಚುವ ಒಂದು ವ್ಯವಸ್ಥೆಯನ್ನಾದರೂ ಮಾಡಿ. ತಮಗೆ ಹೇಳಬೇಕಾದರೆ ಅನೇಕ ಪ್ರಶಸ್ತಿ ಬರತಕ್ಕಂಥ ಚಿತ್ರಗಳನ್ನು ಮೆಜೆಸ್ಟಿಕ್ ಸರ್ಕಲ್‌ನಲ್ಲಿರುವ ಥಿಯೇಟರುಗಳಲ್ಲಿ ಹಾಕಲು ಅವಕಾಶವೇ ಸಿಗುತ್ತಿಲ್ಲ. ಆದುದರಿಂದ ತಾವು ಹೀಗಾದರೂ ಮಾಡಿ. ಇಂತಿಂಥ ಥಿಯೇಟರುಗಳು ಇಂತಿಂಥಾ ಕನ್ನಡ ಚಿತ್ರಗಳನ್ನು ತೆಗೆದುಕೊಂಡು ಹಾಕಬೇಕು ಇಲ್ಲದೇ ಹೋದರೆ ಅವರು ೧೨ ವಾರಗಳ ಕಾಲ ಆ ಥಿಯೇಟರ್ ಅನ್ನು ಮುಚ್ಚಬೇಕು ಎಂದಾದರೂ ಮಾಡಿ.

ಇನ್ನು ಟೂರಿಸಂ ಬಗ್ಗೆ ಒಂದೆರಡು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ವಿದೇಶದಿಂದ ಟೂರಿಸ್ಟ್ ಭಾರತಕ್ಕೆ ಏನು ಬರುತ್ತಾರೋ ಅವರು ಕರ್ನಾಟಕಕ್ಕೆ ಜಾಸ್ತಿ ಬರುತ್ತಾ ಇಲ್ಲ. ಕಾರಣ ಇಲ್ಲಿ ಏರ್‌ಪೋರ್ಟ್ ಸೌಲಭ್ಯ ಇಲ್ಲ. ಆದುದರಿಂದ ಬೆಂಗಳೂರಿನಲ್ಲಿ ಒಂದು ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಮಾಡುವ ಹಾಗೆ ತಾವು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀಮಾನ್ ರಘುಪತಿಯವರು ಬಂದಮೇಲೆ ಕಬ್ಬನ್‌ಪಾರ್ಕ್ ರೆಸ್ಟೋರೆಂಟ್‌ನಲ್ಲಿ ಡ್ರಿಂಕ್ಸ್, ಬೀರ್ಸ್ ವಗೈರೆ ಕೊಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಶ್ರೀ ಯಡಿಯೂರಪ್ಪ.—ಎಲ್.ಎಚ್.ನಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಪಿ. ರಾಂದೇವ್.—ಅದೇನೂ ಟೂರಿಸ್ಟ್ ಪ್ಲೇಸ್ ಅಲ್ಲವಲ್ಲ.

ಶ್ರೀ ವಿ.ಎಸ್. ಆಚಾರ್.—ಅದು ಟೂರಿಸ್ಟ್ ಪ್ಲೇಸ್ ಅಲ್ಲದೆ ಇದ್ದರೂ ಕೂಡ ಅದು ಟೂರಿಸ್ಟ್ ಪ್ಲೇಸ್ ಇದ್ದ ಹಾಗೆ. ಏತಕ್ಕೆಂದರೆ ಅಲ್ಲಿ ರಾಜ್ಯದ ಎಲ್ಲಾ ಸಮಸ್ಯೆಗಳೂ ಬರುತ್ತವೆ. ಅದರ ಬಗ್ಗೆಯೂ ಯೋಚನೆ ಮಾಡಬೇಕು.

ಶ್ರೀ ಪಿ. ರಾಂದೇವ್.—ಎಲ್.ಹೆಚ್. ಅನ್ನುವುದು ಅಧ್ಯಕ್ಷರ ಕಂಟ್ರೋಲ್‌ನಲ್ಲಿ ಬರುತ್ತದೆ. ಸ್ವಾಮಿ, ತಾವು ಒಂದು ಸಾರಿ ನಿಮ್ಮ ಮನೆಯವರನ್ನೂ ಕೂಡ ವಿಹಾರಾರ್ಥವಾಗಿ ಹೋಗಿ ಅಲ್ಲಿರುವ ಕಬ್ಬನ್‌ಪಾರ್ಕ್ ರೆಸ್ಟೋರೆಂಟ್ ನೋಡಿಕೊಂಡು ಬನ್ನಿ. ಗೊತ್ತಾಗುತ್ತದೆ. ಅವರು ಬಾಟಲ್ ಎತ್ತಿಕೊಂಡು ಕುಡಿಯುತ್ತಾ ಇರುವುದನ್ನು ಅಲ್ಲಿ ನೋಡಬಹುದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತು ಕಬ್ಬನ್ ಪಾರ್ಕ್‌ಗೆ ಅವಕಾಶ ಕೊಟ್ಟರೆ ಮುಂದೆ ಲಾಲ್‌ಬಾಗ್‌ಗೂ ಅವಕಾಶ ಕೊಡಬೇಕಾಗುತ್ತದೆ. ಆದುದರಿಂದ ಈ ಕಬ್ಬನ್‌ಪಾರ್ಕ್ ರೆಸ್ಟೋರೆಂಟ್‌ನಲ್ಲಿ ಕುಡಿಯುವುದು ಬೇಡ. ಕುಡಿಯುವುದನ್ನು ನಿಲ್ಲಿಸಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ.ಎಸ್. ಆಚಾರ್ (ಉಡುಪಿ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ನಗರಾಡಳಿತ ಸಚಿವರು ಈ ಸದನದಲ್ಲೇ ಮಂಡಿಸಿದಂಥ ೩೧ ಮತ್ತು ೩೨ನೇ ಬೇಡಿಕೆಗಳನ್ನು ಅನುಮೋದಿಸುತ್ತಾ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೆಲವು ವಿಷಯಗಳನ್ನು ಇಲ್ಲಿ ತಿಳಿಸಲು ಅಪೇಕ್ಷೆ ಪಡುತ್ತೇನೆ. ಈ ಬೇಡಿಕೆ ಬಹಳ ಪ್ರಾಮುಖ್ಯವಾದುದು. ಕಾರಣ ಇಷ್ಟೆ. ನಾವು ನಗರೀಕರಣ ಆಗಬೇಕು ಎನ್ನುವುದನ್ನು ಅಪೇಕ್ಷೆ ಪಡಲಿ ಪಡದೇ ಇರಲಿ ಇದು ಒಂದು ಜಾಗತಿಕ ಫಿನಾಮಿನನ್. ಬೇರೆ ಬೇರೆ ಕಾರಣಗಳಿಗಾಗಿ ಇದು ಒಂದು ಹೊಸ ಪಟ್ಟಣವಾಗುತ್ತದೆ. ಆ ನಗರದಲ್ಲಿ ಇದರಿಂದ ಒಳ್ಳೆಯ ಶಿಕ್ಷಣ ಪಡೆಯಬಹುದು ಎನ್ನುವುದಾಗಲೀ, ಅಥವಾ ಉದ್ಯೋಗ ಸಿಗಲಿ ಎನ್ನುವುದಾಗಲಿ ಅಥವಾ ಅಲ್ಲಿ ಒಳ್ಳೆಯ ಚಿಕಿತ್ಸೆ ಪಡೆಯುವುದಕ್ಕಾಗಲಿ ಯಾವುದಾದರೂ ಒಂದು ಉದ್ದೇಶದಿಂದ ಆಗಬಹುದು. ಜನರು ಪಟ್ಟಣಗಳಲ್ಲಾಗಲಿ ಬಂದು ನೆಲೆಸುತ್ತಾರೆ. ಈಗ ಇರತಕ್ಕಂಥ ನಗರಗಳು ಇನ್ನಷ್ಟು ವಿಸ್ತಾರಗೊಂಡಾಗ ಅದು ಹೊಸ ಹೊಸ ಪಟ್ಟಣವಾಗಿ ನಿರ್ಮಾಣಗೊಂಡಂತಾಗುತ್ತದೆ, ನೀವು ಬರಬೇಡಿರಿ ಅದನ್ನು ಇಲ್ಲಿಗೆ ಲಿಮಿಟ್ ಮಾಡಬೇಕು ಎಂದರೂ ಕೂಡ ಅದು ನಿಲ್ಲುವಂಥ ಪ್ರಶ್ನೆ ಅಲ್ಲ. ಈ ಬಗ್ಗೆ ತಮಗೆ ಸ್ವಲ್ಪ ವಿವರಗಳನ್ನು ಹೇಳ ಬಯಸುತ್ತೇನೆ. ಈಗ್ಗೆ ೧೦ ವರ್ಷದ ಹಿಂದೆ ನಮ್ಮ ರಾಜ್ಯದ ಜನಸಂಖ್ಯೆ ೨೫ರಷ್ಟು ಇದ್ದುದು ಈವೊತ್ತು ೩೦ ರಷ್ಟು ಇದೆ. ನಮ್ಮ ರಾಜ್ಯದ ೧೯೮೧ರ ಅಂಕಿಸಂಖ್ಯೆ ಪ್ರಕಾರ ೩ ಕೋಟಿ ೭೦ ಲಕ್ಷ ಜನರಲ್ಲಿ ೧ ಕೋಟಿ ೭ ಲಕ್ಷ ಜನ ಅಷ್ಟು ಬೇರೆ ಬೇರೆ ನಗರದಲ್ಲಿ ವಾಸವಾಗಿದ್ದಾರೆ, ೧೯೮೩ನೇ ಇಸವಿಯ ಲೆಕ್ಕ ತೆಗೆದುಕೊಂಡರೆ ೧ ಕೋಟಿ ೨೫ ಲಕ್ಷ ನಗರದಲ್ಲಿ ವಾಸವಾಗಿದ್ದಾರೆ ಇಂಥಾದ್ದರಲ್ಲಿ ನಗರಗಳಲ್ಲಿರತಕ್ಕಂಥ ಜನರ ಸೌಕರ್ಯವನ್ನೂ ಸಹ ನಾವು ನೋಡಿಕೊಳ್ಳಬೇಕಾದ್ದು ಬಹಳ ಮುಖ್ಯ. ಆ ನಗರಗಳಿಗೆ ಬೇಕಾದಂಥ ವಾಟರ್ ಸಪ್ಲೈ ವ್ಯವಸ್ಥೆ, ಸಾನಿಟರಿ ವ್ಯವಸ್ಥೆ ಯೋಗ್ಯವಾದ ರಸ್ತೆಗಳ ವ್ಯವಸ್ಥೆಗಳನ್ನು ಮಾಡಿಕೊಡುವುದು ಮತ್ತು ಸ್ವಚ್ಛತೆ ಇದು ನಾಗರೀಕರ ಸೌಲಭ್ಯಕ್ಕೆ ತಕ್ಕಂತೆ ಇರಬೇಕಾಗುತ್ತವೆ. ಇವುಗಳನ್ನು ನಗರ ವಿಸ್ತರಣೆ ಆದ ಹಾಗೆಲ್ಲಾ ಮಾಡಿಕೊಡಬೇಕಾದ್ದು ಬಹಳ ಮುಖ್ಯ ಇದೆ. ಈ ಕೆಲಸಗಳನ್ನು ನಾವು ಬಹು ಎಚ್ಚರಿಕೆಯಿಂದ ಗಮನಿಸಿ ಮಾಡಿಕೊಡಬೇಕು. ಆದರೆ ಸುಮಾರು ೧೦-೧೫ ವರ್ಷಗಳಿಂದಲೂ ಕೂಡಾ ನಗರಾಡಳಿತ ಅಧಿಕಾರ ಜನತಾ ಪ್ರತಿನಿಧಿಗಳ ಕೈಯಲ್ಲಿ ಇಲ್ಲದೇ ಇದ್ದುದರಿಂದ ಈ ಕೆಲಸ ಸರಿಯಾಗಿ ಆಗಲಿಲ್ಲ. ಈವೊತ್ತು ಒಬ್ಬ ನಾಗರೀಕ ಪ್ರತಿನಿಧಿ ಆ ಸ್ಥಾನದಲ್ಲಿ ಇದ್ದರೆ ಒಳ್ಳೆಯದು. ರಾಜ್ಯ ಸರ್ಕಾರದ ಕೆಲಸವಾಗಲಿ ಕೇಂದ್ರ ಸರ್ಕಾರದ ಕೆಲಸವಾಗಲಿ ಅಥವಾ ಯಾವುದೇ ಒಂದು ಸಂಸ್ಥೆಯ ಕೆಲಸವಾಗಲಿ ಮಾಡಬೇಕಾದರೆ ನಾನು ಮೊದಲೇ ಹೇಳಿದ ಹಾಗೆ ಅಲ್ಲಿ ಒಬ್ಬ ಜನತಾ ಪ್ರತಿನಿಧಿ ಇದ್ದರೆ ಆತನು ಕಾರ್ಪೊರೇಟರೇ ಆಗಿರಬಹುದು ಅಥವಾ ಕೌನ್ಸಿಲರೇ ಆಗಿರಹಬುದು. ಆ ಕ್ಷೇತ್ರದ ಕೆಲಸವನ್ನು ಮಾಡಿಕೊಡಬಹುದು. ಇಂಥಾ ಒಂದು ವ್ಯವಸ್ಥೆ ಬಹಳ ವರ್ಷದಿಂದಲೂ ಇರಲಿಲ್ಲ.

ಜನ ಇಂದು ಓಟುಕೊಟ್ಟು ನಮ್ಮನ್ನು ಕಳುಹಿಸಿದ್ದಾರೆ. ಜನತೆಗೆ ತಮ್ಮ ಪ್ರತಿನಿಧಿ ಏನು ಮಾಡುತ್ತಾರೆ, ಯಾವ ಕೆಲಸವನ್ನು ಮಾಡುತ್ತಾರೆನ್ನುವುದನ್ನು ಪ್ರತ್ಯೇಕವಾಗಿ ಕಾಣುವುದಕ್ಕೆ ಈ ಕಾರ್ಪೊರೇಷನ್‌ಗಳು ಮತ್ತು ನಗರಸಭೆಗಳು ಸಹಾಯಕವಾಗಿವೆ. ಎಂ.ಎಲ್.ಎ.ಗಳು ಮತ್ತು ಎಂ.ಪಿ.ಗಳು ಡೆಲ್ಲಿ ಮತ್ತು ಬೆಂಗಳೂರಿನಲ್ಲಿರುವುದರಿಂದ ಜನರಿಗೆ ಇವರು ಯಾವ ಕೆಲಸ ಮಾಡುತ್ತಾರೆನ್ನುವುದನ್ನು ಕಾಣಲು ಅವಕಾಶವಾಗುವುದಿಲ್ಲ. ಜನತೆಯ ಎದುರಿನಲ್ಲಿ ಕೆಲಸ ಮಾಡುತ್ತಿರುವುದರಿಂದ ನಗರಸಭೆಗಳು ಮತ್ತು ಮುನಿಸಿಪಾಲಿಟಿಗಳು ಹೊಸ ಹೊಸ ನಾಯಕತ್ವವನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶವಾಗಿದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಈ ದಿಸೆಯಲ್ಲಿ ನಾನು ಹೊಸ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ ಇವರು ಅಧಿಕಾರಕ್ಕೆ ಬಂದ ನಂತರ ನಗರ ಸಭೆಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆಯನ್ನು ಮಾಡಿ ಜನತಾ ಪ್ರತಿನಿಧಿಗಳು ಕೆಲಸ ಮಾಡುವಂತೆ ಮಾಡಿದ್ದಾರೆ. ಈ ಜನತಾ ಪ್ರತಿನಿಧಿಗಳಿಂದ ಜನತೆ ಬಹಳ ನಿರೀಕ್ಷಣೆ ಮಾಡುತ್ತಿದ್ದಾರೆ ಅವರ ನಿರೀಕ್ಷಣೆಗೆ ತಕ್ಕಂತೆ ಕೆಲಸ ಮಾಡದಿದ್ದರೆ ಜನರಿಗೆ ನಿರಾಸೆಯಾಗುತ್ತದೆ, ಅವರ ನಿರೀಕ್ಷಣೆಗೆ ಸರಿಯಾಗಿ ಕೆಲಸ ಮಾಡಿದರೆ ನಗರದ ಆಡಳಿತ ಮತ್ತು ವ್ಯವಸ್ಥೆ ಎಲ್ಲಾ ಕೂಡ ಸರಿಯಾಗಿ ನಡೆಯುತ್ತದೆ. ಇಂಥ ನಗರಾಡಳಿತ ವ್ಯವಸ್ಥೆಗೆ ಸರ್ಕಾರದವರು ಸುಮಾರು ೮ ವರ್ಷಗಳಕಾಲ ಚುನಾವಣೆಯನ್ನು ಮಾಡದೆ ಹಾಗೆಯೇ ಮುಂದೂಡಿಕೊಂಡು ಬಂದರು. ಈ ಮುನಿಸಿಪಾಲಿಟಿಯಲ್ಲಿ ಕೆಲಸಮಾಡಿದ ಅನುಭವ ಸ್ವಲ್ಪ ಮಟ್ಟಿಗೆ ನನಗೆ ಇರುವುದರಿಂದ ಮತ್ತು ಉಡುಪಿ ಮುನಿಸಿಪಾಲಿಟಿಯ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವ ಸಹ ಇರುವುದರಿಂದ ಇವುಗಳ ಸಮಸ್ಯೆಗಳ ಬಗ್ಗೆ ನಾನು ಸ್ವಲ್ಪಮಟ್ಟಿಗೆ ಹೇಳಲೇಬೇಕಾಗಿದೆ. ಈ ಸ್ಥಳೀಯ ಸಂಸ್ಥೆಗಳ ಬಹುಮುಖ್ಯವಾದ ಅಂಶಗಳು ಎಂದರೆ, ಒಂದು-ಇದರ ಆಡಳಿತ ವ್ಯವಸ್ಥೆ ಇನ್ನೊಂದು ಹಣಕಾಸಿನ ವ್ಯವಸ್ಥೆ. ಈ ಎರಡು ಅಂಶಗಳೂ ಸಹ ಇಲ್ಲದೆ ನಮ್ಮ ನಗರಸಭೆಗಳ ಸ್ಥಿತಿ ಬಹಳ ನಿಕೃಷ್ಟ ಸ್ಥಿತಿಯಲ್ಲಿದೆ ಎಂದು ಹೇಳುವುದಕ್ಕೆ ನಾನು ದುಃಖ ಪಡುತ್ತೇನೆ. ನಮ್ಮ ಕಾರ್ಪೊರೇಷನ್ ಚುನಾವಣೆಗಳು ನಡೆಯುವುದಕ್ಕೆ ಮುಂಚೆ ಪತ್ರಿಕೆಗಳಲ್ಲಿ ಅಂಕಣಗಳನ್ನು ಪ್ರಾರಂಭ ಮಾಡಿದರು. ಇದರಲ್ಲಿ ನಗರಸಭೆಗಳ ಸ್ಥಿತಿಗತಿಗಳು ಮತ್ತು ಶಿರ್ಷಿಕೆಗಳಲ್ಲಿ

ಇನ್ನಿತರ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೀಗೆ ಸುಮಾರು ೪೫ ಆರ್ಟಿಕಲ್ಸ್ ಸೀರೀಸ್ ಆಗಿ ಬಂದಿವೆ. ಅದರಲ್ಲಿರತಕ್ಕ ಹೆಡಿಂಗ್ಸನ್ನು ಮಾತ್ರ ನಾನು ಓದುತ್ತೇನೆ. 'Towns around City-Water, Water-City in wilderness', 'Sick Councils and Stinking Tows', 'Plethora of Promises', 'Neglected Civic Needs and Slums', 'Shortfalls in Budgets and Performances', 'Municipality faces severe financial crisis'. ಈ ರೀತಿಯಲ್ಲಿ ಎಲ್ಲಾ ನಗರಸಭೆಗಳಲ್ಲಿ ಜನರಿಗೆ ನೀರು ಕೊಡತಕ್ಕ ವ್ಯವಸ್ಥೆ ಇಲ್ಲ, ಅನೇಕ ಕಡೆಗಳಲ್ಲಿ ಅದರಲ್ಲಿಯೂ ಉತ್ತರ ಕರ್ನಾಟಕದ ಕೆಲವು ಮುನಿಸಿಪಾಲಿಟಿಗಳಲ್ಲಿ ಯಾವ ಒಂದು ವ್ಯವಸ್ಥೆಯನ್ನು ಮಾಡಲಿಕ್ಕಾಗಿಲ್ಲ. 'Municipality faces severe financial crisis', 'Inefficient administration has burdened with big loans'.........

ಈ ಬಗ್ಗೆ ವಿವರವಾದ ಆರ್ಟಿಕಲ್ಸ್‌ಗಳನ್ನು ಬರೆದಿದ್ದಾರೆ. ಇಂಥ ಸ್ಥಿತಿ ನಮ್ಮ ರಾಜ್ಯದ ಮುನಿಸಿಪಾಲಿಟಿಗಳಲ್ಲಿ ಹಾಗೂ ಕಾರ್ಪೊರೇಷನ್‌ಗಳಲ್ಲಿ ನೆಲಸಿದೆ. ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ ವ್ಯವಸ್ಥೆ ಮತ್ತು ಹಣಕಾಸಿನ ವ್ಯವಸ್ಥೆ ಕುಸಿದು ಬಿದ್ದಿದೆ ಎಂದು ನಾನು ಬಹಳ ವಿಷಾದದಿಂದ ಹೇಳಲಿಕ್ಕೆ ಬಯಸುತ್ತೇನೆ. ಈ ಕಾರಣದಿಂದ ಕಳೆದ ವರ್ಷ ನಗರಾಡಳಿತದ ಬಗ್ಗೆ ಹಣಕಾಸಿನ ವ್ಯವಸ್ಥೆ ಇಲ್ಲದಿದ್ದರೆ ಯಾವ ಅಭಿವೃದ್ಧಿಯ ಕೆಲಸಗಳೂ ಅಥವಾ ನಾಗರೀಕ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ವೆನ್ನುವುದನ್ನು ನಾವು ಮನಗಂಡಿದ್ದೇವೆ. ಇಂಥ ಸಮಸ್ಯೆಗಳನ್ನು ನಾವು ಸರ್ಕಾರಕ್ಕೆ ಬರೆದರೆ ಅವರಿಂದ ಬರುವಂಥ ಉತ್ತರವಾದರೂ ಏನು? ಅದನ್ನೂ ಸಹ ನಾವು ತಿಳಿದುಕೊಂಡಿದ್ದೇವೆ. 'You raise your internal finance resource'. ನಿಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳಿ ಎಂದು ನಮಗೆ ಪತ್ರ ಬರೆಯುತ್ತಾರೆ. ನಗರಸಭೆಯವರು ನೀರಿಗಾಗಿ ೨೦ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ ಎಂದರೆ, ಅಥವಾ ಹೊಸ ಲಾರಿಗಳನ್ನು ಖರೀದಿ ಮಾಡಬೇಕಾಗಿದೆ ಎಂದರೆ ಆಡಳಿತ ಮಂಜೂರಾತಿ ಕೊಡುವುದಕ್ಕೆ ಇದೇ ರೀತಿಯ ಮಾತನ್ನು ಹೇಳುತ್ತಿರುತ್ತಾರೆ. ' ಈ ಸಂದರ್ಭದಲ್ಲಿ ನಾನು ನಗರಸಭೆಗಳ ಹಾಗೂ ಕಾರ್ಪೊರೇಷನ್‌ಗಳ ಆರ್ಥಿಕ ಮೂಲದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವುಗಳಿಗೆ ಮುಖ್ಯವಾದ ಆರ್ಥಿಕ ಮೂಲ ಎಂದರೆ, Tax on on buildings, Octroi on goods (specific item), Tax on entry of goods into local areas for sale, use or consumption therein, a toll on vehicles, tax on vehicles, tax within the municipality, Tax on Profession, Trades and Callings, Tax on shops, Tax on advertisements etc. etc.

ಈ ರೀತಿಯಾಗಿ ೧೩ ಬಗೆಯ ವಿಚಾರಗಳನ್ನು ಬರೆದಿದ್ದಾರೆ. ನಾನು ಒಂದೊಂದರ ಬಗ್ಗೆ ಇಲ್ಲಿ ಹೇಳಬೇಕು ಎಂದರೆ, ಆಕ್ಟ್ರಾಯ್. ಇದು ಈಗ ಇಲ್ಲ, ಇದನ್ನು ನಗರಸಭೆಗಳಿಂದ ಹೊರತುಪಡಿಸಿದ್ದಾರೆ, ವೆಹಿಕಲ್ ಟ್ಯಾಕ್ಸ್ ವಸೂಲು ಮಾಡುವುದು ಇದರಿಂದ ಬೇಕಾದಂಥ ಆದಾಯ ಬರುವುದಿಲ್ಲ. ಟ್ಯಾಕ್ಸ್ ಆನ್ ಡಾಗ್ಸ್, ಇದರಿಂದ ಒಂದು ನಾಯಿಗೆ ಒಂದು ರೂಪಾಯಿ ಮಾತ್ರ ಬರುತ್ತಿದೆ. ಇದೂ ಸಹ ಸರಿಯಾದ ತೆರಿಗೆಯಲ್ಲ. ಟ್ಯಾಕ್ಸ್ ಆನ್ Dogs. 'Tax on shops and other establishments. ಪ್ರೊಫೆಷನ್, ಇದೂ ಇಲ್ಲ, ಹೋಗಿದೆ. Tax on shops and other Profession, ಇದರಲ್ಲಿಯೂ ಕೂಡ ಸರಿಯಾದ ತೆರಿಗೆ ಬರುವುದಿಲ್ಲ. ಈ ರೀತಿಯಲ್ಲಿ ೧೩ ರೀತಿಯ ತೆರಿಗೆಗಳನ್ನು ನಗರಸಭೆಗಳಿಗೆ ತೋರಿಸಿದ್ದರೂ ಸಹ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ೭ ತೆರಿಗೆಗಳು ಬರುವುದರಿಂದ ಮತ್ತು ಇರತಕ್ಕ ಆದಾಯ ಮೂಲಗಳು ಸರಿಯಾದ ರೀತಿಯಲ್ಲಿ ಬಾರದೆ ಇರುವುದರಿಂದ, ಇವುಗಳ ಆರ್ಥಿಕ ಮೂಲಗಳನ್ನು ಮೊಬಿಲೈಸ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೆಲವೊಂದು ಟ್ಯಾಕ್ಸ್‌ಗಳನ್ನು ರಾಜ್ಯ ಸರ್ಕಾರದವರು ವಾಪಸ್ ತೆಗೆದುಕೊಂಡಿದ್ದಾರೆ. ಈ ರೀತಿಯಾಗಿ ರಾಜ್ಯ ಸರ್ಕಾರದವರು ಅಧಿಕಾರ ಕೊಟ್ಟಂಥ ಟ್ಯಾಕ್ಸ್‌ಗಳನ್ನು ನಗರಸಭೆಯವರಿಂದ ಮತ್ತೆ ಒಂದೊಂದಾಗಿ ವಾಪಸ್ ಪಡೆದುಕೊಂಡು ನಗರಸಭೆಗಳ ಆರ್ಥಿಕಸ್ಥಿತಿ ಅತ್ಯಂತ ಚಿಂತಾಜನಕವಾಗುವುದಕ್ಕೆ ಬಹುತೇಕ ಕಾರಣವಾಗಿದ್ದಾರೆ. ಅವರಿಗೆ ಈಗ ಇರುವಂಥ ಒಂದು ಸೋರ್ಸ್ ಎಂದರೆ, ಟ್ಯಾಕ್ಸ್ ಆನ್ ಬಿಲ್ಡಿಂಗ್ಸ್, ಮತ್ತು ಪ್ರಾಪರ್ಟೀಸ್. ಪ್ರಾಪರ್ಟಿ ಟ್ಯಾಕ್ಸ್ ಯಾವರೀತಿಯಲ್ಲಿ ವಸೂಲಾಗುತ್ತಿದೆ ಎನ್ನುವುದರ ಬಗ್ಗೆ ಹಿಂದೂ ಪತ್ರಿಕೆಯಲ್ಲಿ dated 26th July, 83 ಒಬ್ಬ ಐ.ಎ.ಎಸ್. ಅಧಿಕಾರಿ ಮಾನ್ಯ P.C. HAREKA, IAS ಅವರು

ವಿವರವಾಗಿ ಬರೆದಿದ್ದಾರೆ. Though the property tax is the main source of Municipal Body, there are no clear guidelines to fix the property tax in this country since there is no Common Rating Act as prevailing in Western countries. ಬಹಳ ಪರಿಶ್ರಮದಿಂದ ಅವರು ಇದನ್ನು ಬರೆದಿದ್ದಾರೆ. ನಮ್ಮ ದೇಶದಲ್ಲಿ ಸ್ಪೆಷಲ್ ರೇಟಿಂಗ್ ಆಕ್ಟ್ ಎಂದು ಇಲ್ಲ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ರೇಟಿಂಗ್ ಆಕ್ಟ್ ಇದೆ. ನಮ್ಮ ದೇಶದಲ್ಲಿ ಇದು ಇಲ್ಲ. ನಗರಸಭೆಯ ಆಕ್ಟ್‌ನಲ್ಲಿ ಸೆಕ್ಷನ್ ೧೦೧-೧೦೨ರಲ್ಲಿ ಆಸ್ತಿ ತೆರಿಗೆಯ ಉಲ್ಲೇಖ ಇದೆ. ಈ ಉಲ್ಲೇಖ ವ್ಯವಹಾರಿಕವಾಗಿ ಇಲ್ಲ. In the absence of such a Common Rating Act, there is all scope for subjective assessment and no scope for objective criteria. ಸರಿಯಾದ ವ್ಯಾಪ್ತಿಯಿಲ್ಲ, ಯಾವ ವ್ಯವಸ್ಥೆಯೂ ಇಲ್ಲಿಲ್ಲ. ಅದಕ್ಕೋಸ್ಕರ ಈ ತೆರಿಗೆಯನ್ನು ರೆಂಟಲ್ ಬೇಸಿಸ್ ಮೇಲೆ ಕಲೆಕ್ಟ್ ಮಾಡುತ್ತಿದ್ದಾರೆ. ಆದರೆ ಇದನ್ನು ವಿಮರ್ಶೆ ಮಾಡಿ ನೋಡಿದಾಗ ರೆಂಟನ್ನು ನಾವು ತೆರಿಗೆಯಾಗಿ ಕೊಡುವುದಕ್ಕೆ ಬರುವುದಿಲ್ಲ. ಸಿನಿಮಾ ಥಿಯೇಟರ್ಸ್, ರೆಸ್ಟೋರೆಂಟ್ಸ್ ಇತ್ಯಾದಿಗಳು ರೆಂಟ್ ಕೊಡಲಿಕ್ಕೆ ಬರುವುದಿಲ್ಲ. ಪ್ರಾಫಿಟ್ ಮೇಲೆ ಮತ್ತೆ ಕ್ಯಾಪಿಟಲ್ ವ್ಯಾಲ್ಯೂ ಮೇಲೆ ಇವುಗಳನ್ನು ನೋಡಬೇಕು.

> "These reforms of administration of property tax are overdue and inevitable without eliminating the existing element of subjective assessment tax structure. It is futile to expect reduction in corruption and fair deal etc. etc."

ಎಂದು ಹೇಳಿದ್ದಾರೆ. ನಗರಸಭೆಯ ಆರ್ಥಿಕತೆ ಸಂಪೂರ್ಣವಾಗಿ ಅಧೋಗತಿಗೆ ಹೋದಾಗಯಾವ ರೀತಿಯ ಕೆಲಸಗಳನ್ನು ಅವರು ಮಾಡಲಿಕ್ಕೆ ಸಾಧ್ಯ ? ಅವರಿಗೆ ತೆರಿಗೆಯ ಮೂಲಗಳು ಎರಡು ಮೂರು ಮಾತ್ರ ಉಳಿದಿವೆ, ಬಾಕಿ ತೆರಿಗೆಯ ಮೂಲಗಳು ಯಾವುದೂ ಇಲ್ಲ. ಇವರಿಗೆ ಪ್ರೊಫೆಷನ್ ಟ್ಯಾಕ್ಸ್ ಮತ್ತು ಆಕ್ಟ್ರಾಯನು ತೆಗೆದುಕೊಂಡ ನಂತರ ಪರಿಹಾರ ಕೊಡುತ್ತೇವೆಂದು ಸರ್ಕಾರದವರು ಹೇಳಿದರು. ಇದುವರೆಗೂ ನಗರಸಭೆಗಳಿಗೆ ಎಷ್ಟು ಪರಿಹಾರ ಕೊಟ್ಟಿದ್ದಾರೆ ಎಂದು ನೋಡಿದರೆ ಅದೂ ಸಹ ಸರಿಯಾದ ರೀತಿಯಲಿಲ್ಲ. ಮನರಂಜನ ತೆರಿಗೆ ಎರಡೂವರೆ ರೂಪಾಯಿಗಳನ್ನು ತೆಗೆದುಕೊಂಡರೆ ಒಂದೂಕಾಲು ರೂಪಾಯಿಗಳನ್ನು ಮನರಂಜನ ತೆರಿಗೆಯಾಗಿ ನೂರಕ್ಕೆ ನೂರರಷ್ಟನ್ನು ನಗರಸಭೆಯವರು ಪಡೆಯುತ್ತಿದ್ದರು ಮತ್ತು ಹಿಂದೆ ಸೇಲ್ಸ್ ಟ್ಯಾಕ್ಸನ್ನು ಸಹ ಇವರು ವಸೂಲು ಮಾಡುತ್ತಿದ್ದರು, ಇದಕ್ಕೆ ಕಲೆಕ್ಷನ್ ಚಾರ್ಜ ಎಂದು ಕೊಡುತ್ತಿದ್ದರು. ಮನರಂಜನಾ ತೆರಿಗೆ ಮತ್ತು ಸರ್‌ಚಾರ್ಜ ಎರಡೂ ನೂರಕ್ಕೆ ನೂರರಷ್ಟು ಇವರಿಗೆ ಬರುತ್ತಿತ್ತು, ಆದರೆ ಈಗ ೪೫ ಪರ್ಸೆಂಟ್ ಇವರಿಗೆ ೫೫ ಪರ್ಸೆಂಟ್ ರಾಜ್ಯ ಸರ್ಕಾರಕ್ಕೆ ಹೋಗುತ್ತಿದೆ. ಈಗ ಸರ್ ಚಾ ರ್ಜ ಡಿವಿಷನಲ್ ಪೂಲ್‌ನಲ್ಲಿ ಅಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಈ ರೀತಿಯಾಗಿ ಅನೇಕ ವಿಚಾರಗಳನ್ನು ತಮ್ಮ ವರದಿಯಲ್ಲಿ ಸರ್ಕಾರದವರು ಉಲ್ಲೇಖ ಮಾಡಿದ್ದಾರೆ. ಆಮೇಲೆ ನಗರಗಳಲ್ಲ ಒಂದು ಕಿಲೋಮೀಟರ್ ರಸ್ತೆ ಹಾಳಾದರೆ ವಾಹನಗಳು ಓಡಾಡಿ ರಸ್ತೆಯಲ್ಲಾ ಹಾಳಾಗಿ ಹೋಗುತ್ತದೆ, ಮಾನ್ಯ ಮಂತ್ರಿಗಳಾದ ಬೊಮ್ಮಾಯಿಯವರು ಹಿಂದೆ ಸದಸ್ಯರಾಗಿದ್ದಾಗ ಈ ಮೋಟಾರ್ ವಾಹನಗಳ ತೆರಿಗೆಯನ್ನು, ಇದು ಅತಿ ಹೆಚ್ಚಿನ ತೆರಿಗೆ ಇದನ್ನು ರಾಜ್ಯ ಸರ್ಕಾರದವರು ತೆಗೆದುಕೊಂಡಿದ್ದಾರೆ, ಮತ್ತು ನಗರಸಭೆಗಳಿಗೆ ಇಷ್ಟು ತೆರಿಗೆಯನ್ನು ಕೊಡಬೇಕು ಎಂದು ೧೯೫೭ನೇ ಇಸವಿಯಲ್ಲಿಯೇ ನಿಗದಿಪಡಿಸಿದ್ದಾರೆ, ಈ ರೀತಿಯಾಗಿ ಬೆಂಗಳೂರಿನಲ್ಲಿ ಮಾತ್ರ ಕೊಡುತ್ತಿದ್ದಾರೆ ಬೇರೆ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಇದನ್ನು ಕೊಡುತ್ತಿಲ್ಲವೆಂದು ಉಲ್ಲೇಖ ಮಾಡಿದ್ದರು. ಉಡುಪಿ ನನ್ನ ಸ್ವಂತ ಕ್ಷೇತ್ರದಲ್ಲಿ ೫೭ರಲ್ಲಿ ಸರ್ಕಾರದವರು ೧೫೭೧ ರೂಪಾಯಿಗಳನ್ನು ಕೊಟ್ಟಿದ್ದರು. ಮಂಗಳೂರಿಗೆ ೨೨ ಸಾವಿರ, ಬೆಂಗಳೂರಿಗೆ ೩೭ ಸಾವಿರ ಎಂದು ನಿಗದಿ ಪಡಿಸಿದ್ದಾರೆ. ಅದು ಲಕ್ಷಾಂತರ ಎಂದು ಹೇಳಿದರೂ ಪರಿಹಾರ ಬಹಳ ಕಡಿಮೆ ಕೊಡುವುದು. ಈ ರೀತಿ ಮೋಟಾರು ವಾಹನಗಳು ಹೋಗಿ ರಸ್ತೆಗಳು ಹಾಳಾಗುತ್ತಿವೆ. ಆದರೆ ತೆರಿಗೆ ಎಲ್ಲಾ ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತಾ ಇದೆ, ಇದು ಯಾವ ನ್ಯಾಯ ನಗರದಲ್ಲಿ ಕಸ ಕಡ್ಡಿ ಸಿಗುತ್ತದೆ, ಕಸದ ತೊಟ್ಟಿಗಳ ಹತ್ತಿರ ಒಂದು ನಿಮಿಷ ನೋಡಬೇಕು, ಅದರಲ್ಲಿ ಏನಿರುತ್ತದೆ ಅಂದರೆ ಪ್ಯಾಕಿಂಗ್ ಮೆಟೀರಿಯಲ್ಸ್ ಇರುತ್ತದೆ, ಡಬ್ಬಗಳು, ಬಾಟಲ್ಸ್, ಬ್ಲೇಡ್ ಇರುತ್ತವೆ. ಅವೆಲ್ಲಾ ವಸ್ತುಗಳು ಮನುಷ್ಯನಿಗೆ ಬೇಕಾ

ಗಿದು ಉಪಯೋಗ ಮಾಡಿ ಬಿಸಾಡಿರತಕ್ಕ ವಸ್ತುಗಳು. ಆ ಪ್ರತಿಯೊಂದು ವಸ್ತುವಿಗೂ ಕೊಡ ತಕ್ಕಂಥ ಮಾರಾಟ ತೆರಿಗೆ ರಾಜ್ಯಸರ್ಕಾರಕ್ಕೆ ಹೋಗುತ್ತಿದೆ. ಶೇಕಡ ೪ ರಿಂದ ೧೪ರವರೆಗೆ ಮಾರಾಟ ತೆರಿಗೆ ರಾಜ್ಯಸರ್ಕಾರ ತೆಗೆದುಕೊಂಡು ಉಪಯೋಗ ಆದಮೇಲೆ ಅದರ ಹೊರೆ ಮಾತ್ರ ನಗರ ಸಭೆಗಳ ಮೇಲೆ ಬಿದ್ದಿದೆ, ನಗರಸಭೆಗಳು ಅದನ್ನು ಕ್ಲೀನ್ ಮಾಡುವಂಥಾದ್ದು ಮತ್ತು ಸಾರ್ವಜನಿಕರ ಅನು ಕೂಲಕ್ಕೆ ಸ್ವಚ್ಛ ಮಾಡಬೇಕಾದ ಕೆಲಸ ಮಾಡುತ್ತಿವೆ. ಮೋಟಾರ್ ವೆಹಿಕಲ್ಸ್ ಪರಿಹಾರ ಹೀಗೆ ಪ್ರತಿಯೊಂದರಲ್ಲೂ ಪಾಲು ತೆಗೆದುಕೊಂಡು ಇಡೀ ವರಮಾನವನ್ನು ಒಂದೊಂದೇ ಕಬಳಿಸುತ್ತಾ ಹೋದರೆ ನಗರ ಸಭೆಗಳು ಹೇಗೆ ನಡೆಯಬೇಕು ? ನೀವು ರಿಸೋರ್ಸಸ್ ಜಾಸ್ತಿ ಮಾಡಿಕೊಳ್ಳಿ ಅಂದರೆ ಹೇಗೆ ? ಅವರಿಗೆ ವಸೂಲು ಮಾಡುವುದಕ್ಕೆ ಕಾನೂನಿನ ಬಲ ಇಲ್ಲ. ಇವತ್ತು ಅದನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ. ಈ ರೀತಿಯಾಗಿ ನಗರಸಭೆಗಳು ಕೆಲಸ ಮಾಡುತ್ತಾ ಇವೆ. ಈಗಾಗಲೇ ೮ ನೇ ಫೈನಾನ್ಸ್ ಕಮಿಷನ್ ಬಂದಿತ್ತು. ೧೯೮೪ರ ಏಪ್ರಿಲ್ ಒಂದರಿಂದ ಪ್ರಾರಂಭವಾಗತಕ್ಕಂಥ ೭ನೇ ಯೋಜನೆಯಲ್ಲಿ ಕರ್ನಾಟಕಕ್ಕೆ ಏನೇನು ಪಾಲು ಸಿಗಬೇಕು ಮತ್ತು ಈಗ ಸಿಗುತ್ತಾ ಇರುವುದು ಸಾಕಾಗುತ್ತಿಲ್ಲ ಎಂದು ಹೇಳಿದೆನು, ಹಾಗೆಯೇ ನಗರಾಡಳಿತ ಸಚಿವರು ರಾಜ್ಯಸರ್ಕಾರದ ಪಾಲಿನಿಂದ ನಗರ ಪಾಲಿಕೆಗೆ ಏನೇನು ಬರಬೇಕು ಎಂಬುವರ ಬಗ್ಗೆ ಒಂದು ಡೈಲಾಗ್‌ಗೆ ಒಂದು ಅವಕಾಶ ಮಾಡ ಬೇಕು. ಸೇಲ್ಸ್ ಟ್ಯಾಕ್ಸ್‌ನಿಂದ ಎಷ್ಟು ಪಾಲು ಬರಬೇಕು, ಮೋಟಾರು ವಾಹನಗಳ ತೆರಿಗೆಯಲ್ಲಿ ಎಷ್ಟು ಪಾಲು ಬರಬೇಕು ಎಂದು ಒಂದು ಡೈಲಾಗ್ ಮಾಡಬೇಕಾಗಿದೆ. ಕೇಂದ್ರದ ಸಮಿತಿ ಬಂದಾಗ ಅವರ ಮುಂದೆ ಬೇಡಿಕೆ ಮಂಡಿಸಿದೆವು. ಅದೇ ರೀತಿ ಮಾನ್ಯ ಮುಖ್ಯ ಮಂತ್ರಿಗಳು ಅವರು ಹಣಕಾಸಿನ ಸಚಿವರೂ ಹೌದು ಅವರು ನಗರ ಸಭೆಗಳ ಅಭಿವೃದ್ಧಿಯ ಕಡೆ ಗಮನಕೊಡಬೇಕು. ಇವತ್ತಿನ ದಿವಸ ನಗರಾಡಳಿತದಲ್ಲಿ ನಗರಗಳ ಅಭಿವೃದ್ಧಿ ಮಾಡಲಿಕ್ಕೆ ಕಷ್ಟವಾಗುತ್ತಿದೆ. ದುದರಿಂದ ನಗರ ಸಭೆಗಳು ನ್ಯಾಯವಾದಂಥ ಪಾಲನ್ನು ತೆಗೆದುಕೊಂಡು ಕೆಲಸವನ್ನು ಮಾಡಬೇಕು. ಜನಸಂಖ್ಯೆ ಆಧಾರದ ಮೇಲೆ ಪರಿಹಾರ ಕೊಡತಕ್ಕಂಥಾದ್ದು ಆಗಬೇಕು, ಅಲ್ಲಿ ಅಭಿವೃದ್ಧಿಯ ಕೆಲಸಗಳು ಆಗಬೇಕು ಅದು ದರಿಂದ ಇನ್‌ಸೆಂಟೀವ್ ರೂಪದಲ್ಲಿ ಯಾರ್ಡ್‌ಸ್ಟಿಕ್ ಹಾಕಿಕೊಂಡು ಕೊಡಬೇಕು, ಸ್ಥಳೀಯ ಸಂಸ್ಥೆ ಉತ್ತಮವಾದಂಥ ಆರ್ಥಿಕ ಸ್ಥಿತಿಗತಿಯ ಬಗ್ಗೆ ಒಂದು ತೀರ್ಮಾನ ಆಗಲೇಬೇಕಾಗಿದೆ. ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಈ ವರದಿಯಲ್ಲಿ ಯಾವ ಉಲ್ಲೇಖವೂ ಇಲ್ಲ. ನಗರಸಭೆಗಳ ಅಥವಾ ಮುನಿಸಿಪಾಲಿಟಿಗಳ ಬಗ್ಗೆ ಆಕ್ಟ್‌ನಲ್ಲಿ ಸುಧಾರಣೆ ಮಾಡುವುವರ ಬಗ್ಗೆ ಇದರಲ್ಲಿ ಪ್ರಸ್ತಾಪ ಇಲ್ಲ. ಮಾನ್ಯ ಧರ್ಮಸಿಂಗ್‌ರವರು ಈಗಾಗಲೇ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾನು ಆಗ್ರಹಪೂರ್ವಕವಾಗಿ ಹೇಳಬೇಕಾಗಿದೆ. ನಗರಾಡಳಿತದ ವ್ಯವಸ್ಥೆ ಹೇಗಿದೆ ಎಂದರೆ ಟೌನಿನ ಮುನಿಸಿಪಲ್ ಕೌನ್ಸಿಲರುಗಳು ನಿರ್ಣಯ ತೆಗೆದುಕೊಂಡು ಆ ಪತ್ರವನ್ನು ಸರ್ಕಾರದ ಒಪ್ಪಿಗೆಗಾಗಿ ಕಳಿಸಬೇಕಾದರೆ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಬೇಕು, ಅಲ್ಲಿಂದ ಡಿವಿಜನಲ್ ಕಮಿಷನರ್ ರವರ ಕಛೇರಿಗೆ ಹೋಗಬೇಕು, ಅಲ್ಲಿಂದ ಬೆಂಗಳೂರಿನ ವಿಧಾನಸೌಧದಲ್ಲಿರುವ ಹೆಚ್.ಯು.ಡಿ. ಮಿನಿಸ್ಟರಿಗೆ ಹೋಗಬೇಕು. ಆ ಪತ್ರಗಳು ಗಡಿ ದಾಟಿ ಇಲ್ಲಿ ಅನುಮತಿಗೆ ಬರುವಷ್ಟರಲ್ಲಿ ಚುನಾಯಿತ ಕೌನ್ಸಿಲರುಗಳ ಅವಧಿ ಮುಗಿದು ಹೋಗಿರುತ್ತದೆ. ಆಸಕ್ತಿಯಿಂದ ಕೆಲಸಮಾಡತಕ್ಕ ಜನರು ಪೂರ್ತಿ ನಿರಾಸಕ್ತರಾದರೆ ಕೆಲಸ ಹೇಗೆ ನಡೆಯುತ್ತದೆ ನಗರ ಸಭೆಗಳ ಕೌನ್ಸಿಲರುಗಳು, ಅಧ್ಯಕ್ಷರುಗಳು ವಿಧಾನ ಸೌಧದಲ್ಲಿ ತಿರುಗಾಡುತ್ತಾ ಇರುವುದು ದೈನಂದಿನ ಸ್ಥಿತಿಯಾಗಿದೆ. ಈ ಆಕ್ಟನ್ನು ಓದಬೇಕಾದರೆ ಎರಡು ಜನ ವಕೀಲರು ಬೇಕು. ಅಂತಹ ಜಟಿಲವಾದ ಕಾಯಿದೆ ಇದೆ. ಆದುದರಿಂದ ಇದನ್ನು ಸರಳಗೊಳಿಸ ಬೇಕು. ಈ ನಗರಾಡಳಿತದ ಒಂದು ಸುಧಾರಣೆಯಾಗಬೇಕಾದರೆ ಇದಕ್ಕೆ ಒಂದು ಡೈರೆಕ್ಟೋರೇಟ್ ಆಗಬೇಕು ಎಂದು ನಾನು ಉಲ್ಲೇಖ ಮಾಡಬೇಕಾಗಿದೆ. ಮುನಿಸಿಪಲ್ ಸಿಬ್ಬಂದಿಯನ್ನು ನೇಮಕ ಮಾಡಿದ ಮೇಲೆ ಅವರಿಗೆ ಬೇಕಾದಂಥ ಪ್ರಮೋಷನ್ ಕೊಡುವುದರ ಬಗ್ಗೆ ಉಲ್ಲೇಖ ಇದೆ. ಸ್ಟಾಫ್ ರೂಲ್ಸ್ ೭೩ರಲ್ಲಿ ೧೦ ಲಕ್ಷಕ್ಕಿಂತ ಹೆಚ್ಚು ಆದಾಯ ಇರತಕ್ಕಂಥ ಕಡೆ ಯಾವ ರೀತಿ ಮಾಡಬೇಕು ಎಂದು ಇದೆ. ಇದರಲ್ಲಿ ದೊಡ್ಡ ಲಿಸ್ಟ್ ಇದೆ. ಹೆಲ್ತ್ ಆಫೀಸರನ್ನು ಯಾವಾಗ ಯಾರು ನೇಮಕ ಮಾಡುವಂಥಾದ್ದು. ೧೦ ಲಕ್ಷಕ್ಕಿಂತ ಹೆಚ್ಚು ಆದಾಯ ಇರತಕ್ಕ ನಗರಸಭೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಅವನ್ನು ಭರ್ತಿ ಮಾಡಬೇಕು. ನಗರ ಸಭೆಗಳಲ್ಲಿ ಖಾಲಿ ಇರುವಂಥ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಸರಿಯಾದ ಕೆಲಸಗಳು ಆಗುತ್ತಿಲ್ಲ. ರೆವಿನ್ಯೂ ಇಲಾಖೆಯಲ್ಲಿರುವ ಟಿ.ಡಿ.ಬಿ. ಎಕ್ಸ್‌ಟೆನ್‌ಷನ್ ಆಫೀಸರನ್ನು ಇಲ್ಲಿ ಮುಖ್ಯಾಧಿಕಾರಿಯನ್ನಾಗಿ ಮಾಡುತ್ತಾರೆ. ಸರ್ವಿಸಿನಲ್ಲಿರುವವರು ಇಲ್ಲಿ ಬಂದು ಕೆಲಸಮಾಡಲಿಕ್ಕೆ ಕಷ್ಟವಾಗುತ್ತದೆ. ರೆವಿನ್ಯೂನಿಂದ ಸಣ್ಣಪುಟ್ಟ ಅಧಿಕಾರಿಗಳು ಬಂದು ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ನಾನು ಬಂದಿರತಕ್ಕ ನಗರಸಭೆಯಲ್ಲಿ ಕಮಿಷನರ್ ಹುದ್ದೆಯನ್ನು ಯನ್ನು ನೇಮಕಮಾಡಬಹುದು ಎಂದು ಇದ್ದೆ, ಅಲ್ಲಿ ಮೆಡಿಕಲ್ ಆಫೀಸರ್ ಇಲ್ಲ, ಮ್ಯಾನೇಜರ್ ಇಲ್ಲ, ಅಕೌಂಟೆಂಟ್ ಇಲ್ಲ, ಎರವಲು ತಂದಂಥವರು ಅಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಇನ್ನು

ಎಕ್ಸ್‌ಪೆಂಡಿಚರ್ ಬಗ್ಗೆ ಹೇಳುವುದಾದರೆ ೫೦೦ ರೂಪಾಯಿ ಇದ್ದುದನ್ನು ೫೦೦೦ ರೂಪಾಯಿ ಅನುಮತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅಸಿಸ್ಟೆಂಟ್ ಇಂಜನಿಯರ್‌ಗೆ, ಜೂನಿಯರ್ ಇಂಜನಿಯರ್‌ಗೆ ಒಂದು ಕೆಲಸದ ಬಗ್ಗೆ ಖರ್ಚು ಮಾಡಲಿಕ್ಕೆ ೧೯೭೬ನೇ ಇಸವಿವರೆಗೆ ಇದ್ದಂಥ ಅಧಿಕಾರ ೫೦೦ ರೂಪಾಯಿ ಅದರಲ್ಲಿ ಏನು ಕೆಲಸ ಮಾಡಬಹುದು ? ಅದನ್ನು ಈಗ ೫೦೦೦ ರೂಪಾಯಿ ಮಾಡಿದ್ದಾರೆ. ಕಟ್ಟಡ ಕಟ್ಟುವಂಥಾದರಲ್ಲಿ ೨೫ ಸಾವಿರದವರೆಗೆ ಅವರಿಗೆ ಪವರ್ಸ್ ಇದೆ. ಡಿವಿಜನಲ್ ಕಮಿಷನರಿಗೆ ಒಂದು ಲಕ್ಷದ ವರೆಗೆ ಅಧಿಕಾರವಿದೆ. ಲಾರಿ ಮುಂತಾದ ವಾಹನಗಳ ರಿಪೇರಿಗೆ One thousand at a time ಎಂದು ಇದೆ. ಇನ್ನೂ ಮುಂತಾದ ವಿಷಯಗಳ ಬಗ್ಗೆ ಈ ರೀತಿ ಇದೆ. ಇದನ್ನೆಲ್ಲಾ ಸರಿ ಪಡಿಸಬೇಕಾಗಿದೆ. ೧೯೭೬ರಲ್ಲಿ ಈ ರೂಲ್ಸ್ ಬಂದಿದೆ. ಹೊಸ ರೂಲ್ಸ್ ಪ್ರಕಾರ ಕಾರು, ವ್ಯಾನ್ ಜೀಪ್ ಪರ್ಚೇಸ್ ಮಾಡಬೇಕಾದರೆ ಸರ್ಕಾರದ ಅನುಮತಿ ಪಡೆಯಬೇಕು. ಮತ್ತೆ ಪ್ರಿಂಟಿಂಗ್ ಅಂಡ್ ಸ್ಟೇಷನರಿಯಲ್ಲಿ ೨೦೦೦ ಒಂದು ವರ್ಷಕ್ಕೆ ಇದೆ. ಈ ರೀತಿ ಪ್ರತಿಯೊಂದು ವಿಷಯದಲ್ಲೂ ಅಡ್ಡಿ ಆತಂಕಗಳು ಇವೆ.

೪-೫೦ ಪಿ.ಎಂ.

ಪವರ್ಸ್ ಆಫ್ ಎಕ್ಸ್‌ಪೆಂಡಿಚರ್ ಬಗ್ಗೆ ಅಪರೇಟಿಂಗ್ ಆಗಬೇಕಾಗಿದೆ. ಸ್ಟಾಫ್ ಪ್ಯಾಟರ್ನ್ ಸರಿಯಾಗಬೇಕಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಜಿಲ್ಲಾಧಿಕಾರಿಗಳು ಐ.ಎ.ಎಸ್, ಆಗಿರುತ್ತಾರೆ, ಅವರ ಒಂದು ಅನುಭವದಿಂದ ನಗರ ಸಭೆಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಇದರಿಂದ ನಗರ ಸಭೆಗಳು ಚೆನ್ನಾಗಿ ನಡೆಯುತ್ತವೆ ಎನ್ನುವ ವಾದ ಇರಬಹುದು. ಅವರ ಕಾರ್ಯನಿರ್ವಹಣಾ ಶಕ್ತಿ ಅತ್ಯುತ್ತಮ ಎನ್ನುವುದರಲ್ಲಿ ವಿವಾದವಿಲ್ಲ. ಆದರೆ ಐ.ಎ.ಎಸ್. ಅಧಿಕಾರಿಗಳಿಗೆ ಎಷ್ಟೋ ಕೆಲಸಗಳು ಇರುತ್ತವೆ, ಎಷ್ಟೋ ಮೀಟಿಂಗ್‌ಗಳಿಂದ ಅವರು ತುಂಬಿ ಹೋಗಿ ಬಿಟ್ಟಿರುತ್ತಾರೆ. ಇದರಿಂದಾಗಿ ಅವರು ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ಅವರ ಕಾರ್ಯ ಕ್ಷೇತ್ರ 'ಫ್ಯಾಮಿಲಿ ಪ್ಲಾನಿಂಗ್‌ನಿಂದ ಹಿಡಿದು ಟೌನ್ ಪ್ಲಾನಿಂಗ್' ವರೆಗೂ ಇರುತ್ತದೆ. ಅವರ ಸಹಾಯ ಎಲ್ಲಾ ಕಡೆಗೂ ಬೇಕಾಗಿರುತ್ತದೆ. ಆದುದರಿಂದ ಅವರ ಸಹಾಯ ಸಿಗುವುದೇ ದುರ್ಲಭವಾಗಿರುತ್ತದೆ. ಇದರಿಂದ ನಗರದ ಅಭಿವೃದ್ಧಿಯ ಬಗ್ಗೆ ಅವರ ಸೇವೆಯನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇದಕ್ಕೆ ಒಂದು ಐ.ಎ.ಎಸ್. ಆಫೀಸರ್‌ರವರ ನೇತೃತ್ವದಲ್ಲಿ ಸೀನಿಯರ್ ಡೈರೆಕ್ಟರೇಟ್ ಮಾಡಿ ಅವರ ಕೆಳಗೆ ಒಬ್ಬರು ಪರ್ಸನಲ್ ಆಗಿ ನೋಡಿಕೊಳ್ಳುವುದಕ್ಕೆ ಒಬ್ಬ ಜಾಯಿಂಟ್ ಡೈರೆಕ್ಟರ್‌ರವರು, ಆಡಳಿತ ವಗೈರೆ ಫೈನಾನ್ಸ್ ನೋಡಿ ಕೊಳ್ಳಲು ಮತ್ತೊಬ್ಬರು ಹೀಗೆ ಮಾಡಿ. ಟೌನ್ ಪ್ಲಾನಿಂಗ್ ನೋಡಿಕೊಳ್ಳಲು ಒಂದು ಡೈರೆಕ್ಟರೇಟ್ ಮಾಡಿರುವಾಗ, ೬ ಕಾರ್ಪೊರೇಷನ್, ೧೯೩ ನಗರ ಸಭೆಗಳು, ೨೪೫ ಸ್ಥಳೀಯ ಸಂಸ್ಥೆಗಳು ಇರುವಾಗ ಇದಕ್ಕೆ ಒಂದು ಡೈರೆಕ್ಟರೇಟ್ ಆಗಬೇಕಾದಂಥದ್ದು ತುಂಬಾ ಅವಶ್ಯಕತೆ ಇದೆ. ಉಡುಪಿ ನಗರ ಸಭೆಗೆ ಹಿಂದೆ ಮುನಿಸಿಪಲ್ ಕಮಿಷನರ್ ಆಗಿದ್ದ ಶ್ರೀ ಬಾಲಗಂಗಾಧರ ಮೆನನ್‌ರವರು ಕೇರಳ ರಾಜ್ಯದ ನಿರ್ದೇಶನಾಲಯದ ಡೈರೆಕ್ಟರ್ ಆಗಿ ಹೋದರು. ಅವರು ಕಾಸರಗೋಡಿಗೆ ಬಂದಿದ್ದಾಗ ಉಡುಪಿಗೂ ಬಂದಿದ್ದರು. ಅವರು ಅಲ್ಲಿಯ ವಿಚಾರ ಹೇಳುತ್ತಿದ್ದನ್ನು ತಿಳಿದುಕೊಂಡಿದ್ದೇನೆ. ಮೈಸೂರು ಡಿವಿಜನ್ನಿನ ಕಮಿಷನರ್ ಆಗಿದ್ದ ಸ್ಯಾಮ್ಯುಯಲ್ ಅಪ್ಪಾಜಿಯವರು ಕೇರಳ ಡೈರೆಕ್ಟರೇಟ್ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಿಕೊಂಡು ಬರಲು ಒಂದು ಟೀಂನ್ನು ಕಳುಹಿಸಿದ್ದರು ಎಂದು ಕೇಳಿದ್ದೇನೆ. ಅವರು ಸಹ ಅಲ್ಲಿಗೆ ಹೋಗಿ ವರದಿಯನ್ನು ಕೊಟ್ಟಿರಬಹುದು. ತಾವು ಅದನ್ನು ತರಿಸಿ ನೋಡಬಹುದು. ನಮ್ಮ ಮಂಗಳೂರಿನ ಜಿಲ್ಲಾಧಿಕಾರಿಯಾಗಿದ್ದ ಸನ್ಮಾನ್ಯ ಶ್ರೀ ಬಿ.ಎಸ್. ಪಾಟೀಲ್ ರವರನ್ನು ನಗರಾಡಳಿತದ ಬಗ್ಗೆ ತಿಳಿದುಕೊಳ್ಳಲು ಇಂಗ್ಲೆಂಡಿಗೆ ಹಿಂದಿನ ಸರ್ಕಾರದವರು ಕಳುಹಿಸಿದ್ದರು. ಮುಂದೆ ಡೈರೆಕ್ಟರೇಟ್ ಎಂದು ಮಾಡಿದರೆ ಅವರನ್ನೇ ಅದಕ್ಕೆ ಡೈರೆಕ್ಟರನ್ನಾಗಿ ಮಾಡಬೇಕೆಂದು ಆಲೋಚನೆಯಿಂದ ಇಂಗ್ಲೆಂಡಿಗೆ ಕಳುಹಿಸಿದ್ದರೆಂದು ಕಾಣುತ್ತದೆ. ಆ ರೀತಿಯಾಗಿ ಅವರು ಇಂಗ್ಲೆಂಡಿಗೆ ಹೋಗಿ ಬಂದರು. ಬಂದ ಮೇಲೆ ಅವರನ್ನು ನಗರಾಡಳಿತ ಖಾತೆಗೆ ಸೇರಿಸಿಕೊಂಡ ಹಾಗೆ ಕಾಣುತ್ತಿಲ್ಲ. ಅವರನ್ನು ಉಗ್ರಾಣದ ಖಾತೆಯಲ್ಲಿ ಅಥವಾ ಇನ್ನು ಎಲ್ಲೋ ಹಾಕಿದ್ದಾರೆಂದು ಕಾಣುತ್ತದೆ. ಇಂಥವರನ್ನು ಡೈರೆಕ್ಟರೇಟ್‌ನಲ್ಲಿ ಹಾಕಿದರೆ ಆಗ ನಗರಾಡಳಿತವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ನಗರ ಸಭೆಗಳಲ್ಲಿ ಯಾವ ರೀತಿಯಾಗಿ ಖರ್ಚು ವೆಚ್ಚ ಆಗಬೇಕು ಎನ್ನುವ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಲಾಂಗ್ ಟರ್ಮ್ ಡೆವಲಪ್‌ಮೆಂಟ್ ಆಗಬೇಕಾಗಿದೆ. ವಾಟರ್ ಸಪ್ಲೈ ಆಗಲೀ, ಡ್ರೈನೇಜ್ ಆಗಲೀ ಅಡ್ಮಿನಿಸ್ಟ್ರೇಟಿವ್ ಬಿಲ್ಡಿಂಗ್ ಆಗಲೀ ಇತ್ಯಾದಿಗಳಿಗೆ ನಗರ ಸಭೆಗಳಿಗೆ ಬರತಕ್ಕ ವರಮಾನದಲ್ಲಿ ಮುಕ್ಕಾಲು ಭಾಗವನ್ನು

ವಿನಿಯೋಗ ಮಾಡಬೇಕು ಇನ್ನು ಕೆಲವು ಭಾಗದಲ್ಲಿ ಉಸ್ತುವಾರಿ ಕೆಲಸಕ್ಕೆ ಅಂದರೆ ಬೀದಿ ದೀಪಕ್ಕೆ ಮತ್ತು ಸಿಬ್ಬಂದಿ ಖರ್ಚು ವೆಚ್ಚಗಳಿಗೆ ಖರ್ಚು ಮಾಡಬೇಕು ಎನ್ನತಕ್ಕ ಮಾತನ್ನು ಹೇಳಬಯಸು ತ್ತೇನೆ. ಏತಕ್ಕೆಂದರೆ ನೀರಿನ ಯೋಜನೆ ಬಗ್ಗೆ ನಾವು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳ ಬೇಕಾಗಿದೆ, ಮುಂದೆ ನಮ್ಮ ಮಕ್ಕಳು, ಮರಿ ಮೊಮ್ಮಕ್ಕಳ ಕಾಲದವರೂ ಸಹ ನೀರನ್ನು ಉಪ ಯೋಗ ಮಾಡಿಕೊಳ್ಳಬೇಕಾಗಿರುತ್ತದೆ. ಆದುದರಿಂದ ಇದರ ಮೇಲೆ ಹೆಚ್ಚಿನ ಜವಾಬ್ದಾರಿ ಇರು ವುದರಿಂದ ಇದಕ್ಕೆ ದೀರ್ಘಾವಧಿ ಸಾಲದ ವ್ಯವಸ್ಥೆ ಮಾಡಿ ಇದನ್ನು ಮಾಡಲೇ ಬೇಕಾಗಿರುತ್ತದೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ವಿಚಾರ ವನ್ನು ಹೇಳಬೇಕಾಗಿದೆ. ಅಲ್ಲಿ ಸಹ ಪೈಪ್ಡ್ ವಾಟರ್ ಸ್ಕೀಂ ಬರುತ್ತದೆ, ಮುನಿಸಿಪಲ್ ಸ್ಕೀಂ ಬೋರ್ಡ್ ಸ್ಕೀಂ, ಎಂದು ಇದೆ. ಇದಕ್ಕೆ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಮತ್ತು ಮೇನ್‌ಟೆನೆನ್ಸ್ ನಿಂದ ಹಣ ಬರುತ್ತಿದೆ. ಆದರೆ ನಮ್ಮ ರಾಜ್ಯದ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರನ್ನು ದೂರಿ ಏನೂ ಪ್ರಯೋಜನವಿಲ್ಲ. ೨೪೨ ಯೋಜನೆಗಳಲ್ಲಿ ೨೪೧ ಯೋಜನೆಗಳಲ್ಲಿ ನೀರನ್ನು ಪೂರೈಕೆ ಮಾಡಿದ್ದೇವೆ ಎನ್ನತಕ್ಕ ಉಲ್ಲೇಖವಿದೆ. ಕರ್ನಾಟಕದಲ್ಲಿ ಅನೇಕ ಜಿಲ್ಲೆಗಳಲ್ಲಿ ನಾನು ಸಂಚರಿಸಿ ನೋಡಿಕೊಂಡು ಬಂದಿದ್ದೇನೆ. ಇವತ್ತಿಗೂ ಕೂಡ ಅನೇಕ ನಗರಗಳಲ್ಲಿ ನೀರಿನ ಕೊರತೆ ಇದೆ, ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಅಗ್‌ಮೆಂಟೇಷನ್ ಮಾಡಿಲ್ಲ. ಕೆಪಾಸಿಟಿ ಹೆಚ್ಚು ಮಾಡಿಲ್ಲ, ಹೆಚ್ಚು ಮಾಡಬೇಕಾಗಿದ್ದರೆ ನಗರಸಭೆಗಳಿಗೆ ದುಡ್ಡಿಲ್ಲ ಎನ್ನತಕ್ಕ ಪರಿಸ್ಥಿತಿ ಇದೆ. ಈ ವಿಷಯದಲ್ಲಿ ನಮ್ಮ ರಾಜ್ಯ ತುಂಬಾ ಹಿಂದೆ ಬಿದ್ದಿದೆ. ಅದೇ ಪಕ್ಕದ ರಾಜ್ಯವಾದ ತಮಿಳುನಾಡಿನವರು ಎಷ್ಟು ಮುಂದೆ ಹೋಗಿದ್ದಾರೆಂದರೆ ಅವರು ಜಾಗತಿಕ ಬ್ಯಾಂಕ್ ನವರಿಂದ ಸಹಾಯ ತೆಗೆದುಕೊಳ್ಳುತ್ತಿದ್ದಾರೆ ಎಂದು ನಮ್ಮ ಶ್ರೀ ರಾಮದೇವ್‌ರವರು ತಿಳಿಸಿದರು. ಅಲ್ಲಿ ಎಕ್ಸ್‌ಪರ್ಟ್ ಕಮಿಟಿಯವರು ಟೇರಿಫ್ ಇದನ್ನೆಲ್ಲಾ ತೆಗೆದುಕೊಂಡು ಅಲ್ಲಿ ಕೆಲಸವನ್ನು ಮುಂದುವರಿಸುತ್ತಿದ್ದಾರೆ. ೧೪೫ ಕೋಟಿ ರೂಪಾಯಿಗಳು ಇದರಲ್ಲಿ ಕವರ್ ಆಗಿದೆ. ಇದರಲ್ಲಿ ಬಹಳ ಮಹತ್ವದ್ದು ಏನೆಂದರೆ ಮೂರು ಮುಖ್ಯ ಪಟ್ಟಣಗಳು ಇವೆ. ಕೊಯಮತ್ತೂರು, ಮಧುರೈ ಮತ್ತು ಸೇಲಂ ಈ ನಗರಗಳಿಗೆ ಹೊಂದಿಕೊಂಡಿರುವಂತೆ ಸಣ್ಣಪುಟ್ಟ ನಗರಗಳನ್ನೂ ಹೊಂದಿಸಿಕೊಂಡು ಗ್ರ್ಯಾಂಟ್ ಫ್ಯಾಕ್ಟರ್ನ್ನು ಯಾವ ರೀತಿಯಾಗಿದೆ ಎನ್ನುವ ಬಗ್ಗೆ ಉಲ್ಲೇಖ ಇಲ್ಲಿದೆ. ನಮ್ಮ ರಾಜ್ಯಕ್ಕೂ ಸಹ ನೀರನ್ನು ಒದಗಿಸುವ ಬಗ್ಗೆ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಸ್ಕೀಂಗೆ ೯೦ ಪರ್ಸೆಂಟ್ ಕೇಂದ್ರ ಸರ್ಕಾರದವರಿಂದ ಬರುತ್ತದೆ ಉಳಿದ ೧೦ ಪರ್ಸೆಂಟ್ ರಾಜ್ಯ ಸರ್ಕಾರ ಕೊಡಬೇಕಾಗಿರುತ್ತದೆ. ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ಇದು ಬೈಲ್ಯಾಟ್ರಲ್ ಸ್ಕೀಂ. ಇವತ್ತು ಪಟ್ಟಣಗಳ ಜೊತೆಗೆ ಅದರ ಪಕ್ಕದಲ್ಲಿರತಕ್ಕ ಸಣ್ಣಪುಟ್ಟ ಪ್ರದೇಶಗಳನ್ನೂ ಸೇರಿಸಿಕೊಂಡರೆ ಖಂಡಿತವಾಗಿಯೂ ನಮಗೆ ಸೆಂಟ್ರಲ್ ಗೌವರ್ನ್‌ಮೆಂಟಿನಿಂದ ಬರತಕ್ಕ ಗ್ರ್ಯಾಂಟ್ ಬಂದೇ ಬರುತ್ತದೆ. ಎಲ್.ಐ.ಸಿ.ಯಿಂದ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಕೇಂದ್ರ ಸರ್ಕಾರದವರಿಂದ ಬೈಲ್ಯಾಟ್ರಲ್ ಅಸಿಸ್ಟೆನ್ಸ್ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆ ದೃಷ್ಟಿಯಿಂದ ನೀರನ್ನು ಒದಗಿಸು ವುದಕ್ಕೆ ಒಂದು ನಿಯಮವನ್ನು ಹಾಕಿ ನಗರ ಸಭೆಗಳಿಂದ ಇದನ್ನು ಡಿ–ಲಿಂಕ್ ಮಾಡಿ, ಸಂಪೂರ್ಣ ವಾದ ವರ್ಕಿಂಗ್ ಕ್ಯಾಪಿಟಲ್‌ನ್ನು ಹಾಕಿ ನಗರಗಳಿಗೆ ಎಷ್ಟು ನೀರಿನ ಅವಶ್ಯಕತೆ ಇದೆಯೋ ಅಷ್ಟನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಮಿಳುನಾಡಿನ ಸರ್ಕಾರದವರು ೧೪೫ ಕೋಟಿ ರೂ. ಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ರಾಜ್ಯದವರು ಹೆಚ್ಚು ಕಡಿಮೆ ೨೦–೨೨ ಕೋಟಿ ಖರ್ಚು ಮಾಡುತ್ತಿದ್ದರೆ ಅದೇ ಹೆಚ್ಚಾಯಿತು. ಮದ್ರಾಸ್‌ನವರು ತೆಲುಗು ಗಂಗಾ ಪ್ರಾಜೆಕ್ಟ್‌ಗೆ ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆ ಹಾಕಿ ಕೇಂದ್ರ ಸರ್ಕಾರದವರಿಂದ ಅದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆ. ಆದರೆ ನಮ್ಮ ಕಾವೇರಿ ಫಿನೇ ಸ್ಟೇಜ್‌ಗೆ ೨೪೦ ಕೋಟಿ ರೂ.ಗಳನ್ನು ಕೊಡುವ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಆದುದರಿಂದ ಇದಕ್ಕೆ ಎಲ್.ಐ.ಸಿ.ಯಿಂದ ಆಗಲೀ ಇಲ್ಲವೇ ವರ್ಲ್ಡ್ ಬ್ಯಾಂಕ್‌ನಿಂದ ಆಗಲೀ ಹಣವನ್ನು ಪಡೆದು ಅದರ ಸಂಪೂರ್ಣವಾದ ಜವಾಬ್ದಾರಿಯನ್ನು ಆ ಬೋರ್ಡಿಗೆ ವಹಿಸಿಕೊಟ್ಟು ಕೆಲಸ ಮಾಡಬೇಕು ಮತ್ತು ನಗರ ಸಭೆಯಿಂದ ಇದನ್ನು ಡೀಲಿಂಗ್ ಮಾಡುವುದು ಬಹಳಷ್ಟು ಅವಶ್ಯಕತೆ ಇದೆಯೆಂದು ಹೇಳಬಯಸುತ್ತೇನೆ.

ಇನ್ನು ಕುಮಟಾ, ಹೊನ್ನಾವರ, ಸಂಕೇಶ್ವರ, ಹುಕ್ಕೇರಿ, ಗದಗ, ಬೆಟಗೇರಿ, ಮೈಸೂರು ಮತ್ತು ಉಡುಪಿ ಈ ಭಾಗಗಳಲ್ಲಿ ದೊಡ್ಡ ಯೋಜನೆಗಳನ್ನು ಬೈಲ್ಯಾಟ್ರಲ್ ಅಸಿಸ್ಟೆನ್ಸ್‌ನಿಂದ ತಜ್ಞರು ಕ್ಲಿಯರೆನ್ಸ್ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಮಲಪ್ರಭಾ ಯೋಜನೆ ೧೯೫೭ರಲ್ಲಿ ಪ್ರಾರಂಭವಾದರೂ ಇನ್ನೂ ಪೂರ್ಣಗೊಂಡಿಲ್ಲ. ತುಂಗಭದ್ರಾ ನೀರಿನಲ್ಲೂ ಸಹ ಇವತ್ತಿನ ದಿವಸ ಕ್ಲೋರಿನ್ ಜಾಸ್ತಿಯಾಗಿದೆ. ಆ ನೀರನ್ನು ಕುಡಿದರೆ ಹಲ್ಲೆಲ್ಲಾ ಕಿತ್ತು ಹೋಗುತ್ತದೆ, ಬೆನ್ನೆಲುಬು

ಮತ್ತು ಮೈ ಎಲ್ಲಾ ಬಗ್ಗಿ ಹೋಗಿ ಬಿಡುತ್ತದೆ. ಕ್ಲೋರಿನ್ ಹತ್ತಿಪ್ಪತ್ತು ಪಾಲು ಜಾಸ್ತಿಯಾಗಿ ಇದೆ. ಅಲ್ಲಿ ಬೋರ್‌ವೆಲ್‌ನಿಂದ ನೀರು ಬರುತ್ತಿಲ್ಲ. ಬಂದಂತಹ ನೀರನ್ನು ಉಪಯೋಗಿಸುವಂತಿಲ್ಲ. ಈ ೫ ಯೋಜನೆಗಳನ್ನು ಮಂತ್ರಿಗಳು ಆದಷ್ಟು ಜಾಗ್ರತೆ ಕೈಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚಿಗೆ ಹೇಳುವ ಪ್ರಶ್ನೆ ಇಲ್ಲ. ಬಿ.ಡಿ.ಎ. ಅವ್ಯವಸ್ಥೆ ಬಗ್ಗೆ ಮಾತ್ರ ಸ್ವಲ್ಪ ಹೇಳಬೇಕಾಗಿದೆ. ಬಿ.ಡಿ.ಎ. ಯಾವ ಉದ್ದೇಶಕ್ಕೋಸ್ಕರ ನೇಮಕವಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರು ನಗರದ ಅಭಿವೃದ್ಧಿಗೆ ಬೇಕಾದ ಕೆಲಸಗಳನ್ನು ಮಾಡಿಕೊಂಡು ಅವಶ್ಯವಿದ್ದಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಇಲ್ಲಿಯ ಜನರಿಗೆ ಬೇಕಾದ ಲೇಔಟ್‌ಗಳನ್ನು ಮಾಡಿಕೊಡುವುದಕ್ಕೆ ಇರುವುದು. ಆದರೆ ಅಲ್ಲಿ ಯಾವ ವ್ಯವಸ್ಥೆಯೂ ಸರಿಯಾಗಿಲ್ಲ. ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಜನರಿಗೆ ನಿವೇಶನಗಳನ್ನು ಕೊಡಬೇಕಾದ ಬಿ.ಡಿ.ಎ. ಏನು ಮಾಡಿದೆ ಎಂಬುದಕ್ಕೆ ಒಂದು ಪ್ರಕರಣವನ್ನು ಉದಾಹರಣೆಯಾಗಿ ಹೇಳುತ್ತೇನೆ. ೧೯೭೫ರಲ್ಲಿ ಹೆಚ್.ಎ.ಎಲ್.ನ ೩ನೇ ಹಂತದಲ್ಲಿ ನಿವೇಶನಗಳನ್ನು ಕೊಡುತ್ತೇವೆಂದು ಜನರಿಂದ ಅರ್ಜಿಗಳನ್ನು ಕರೆದು ನಿಮಗೆಲ್ಲ ನಿವೇಶನಗಳನ್ನು ಅಲಾಟ್ ಮಾಡಿದ್ದೇವೆಂದು ಹೇಳಿ ಸರ್ಟಿಫಿಕೇಟ್ ಕೊಟ್ಟರು. ಆಮೇಲೆ ಮನೆ ಕಟ್ಟಲು ಯಾವುದಾದರೂ ಸಂಸ್ಥೆಗೆ ನಿವೇಶನವನ್ನು ಆಧಾರ ಮಾಡಿ ಸಾಲ ಪಡೆಯಲು ಅನುಮತಿ ಕೊಟ್ಟರು. ಪೊಸೆಷನ್ ಸರ್ಟಿಫಿಕೇಟ್ ಸಹ ಕೊಟ್ಟರು. ನಂತರ ಆ ಜನರು ಪ್ಲಾನ್ ಮತ್ತು ಎಸ್ಟಿಮೇಟನ್ನು ತಯಾರಿಸಿಕೊಂಡು ಕಟ್ಟಡ ಕಟ್ಟಲು ಹೋದಾಗ ಆ ಜಾಗದ ಮಾಲೀಕರು ಜಾಗದ ಸುತ್ತೆಲ್ಲ ತಂತಿ ಬೇಲಿ ಹಾಕಿಕೊಂಡು ಈ ಜಾಗವನ್ನು ಬಿ.ಡಿ.ಎ. ನವರು ಸ್ವಾಧೀನಪಡಿಸಿಕೊಂಡಿಲ್ಲವೆಂದು ಹೇಳಿದರು. ಈ ವಿಷಯ ಗೊತ್ತಾದ ಮೇಲೆ ಆ ಜನರೆಲ್ಲ ಬಿ.ಡಿ.ಎ. ಅಧಿಕಾರಿಗಳ ಹತ್ತಿರ ಹೋದರು. ಆ ಜನರು ಪೂರಾ ಹಣ ಕಟ್ಟಿ ಪೊಸೆಷನ್ ಸರ್ಟಿಫಿಕೇಟ್ ಬಿ.ಡಿ.ಎ. ಯಿಂದ ಪಡೆದಿದ್ದಾರೆ. ಆದರೆ ಬಿ.ಡಿ.ಎ. ನವರು ಆ ಜಾಗವನ್ನು ಸ್ವಾಧೀನಪಡಿಸಿಕೊಳ್ಳದೆ ಅಲಾಟ್ ಮಾಡಿದ್ದಾರೆ. ಅದು ಇವರು ಮನೆ ಕಟ್ಟುವುದಕ್ಕೆ ಹೋದಾಗ ಗೊತ್ತಾಗಿದೆ. ಈ ವಿಚಾರ ಈಗ್ಗೆ ೩-೪ ತಿಂಗಳ ಹಿಂದೆ ಧಾರಾವಾಹಿ ರೂಪದಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿತ್ತು. ಇಂಥ ಸಂಸ್ಥೆಯಲ್ಲಿ ನಾಗರೀಕರಿಗೆ ಕೊಡಬೇಕಾದ ಅವಕಾಶ ಕೊಡದಿದ್ದರೆ ಹೇಗೆ? ಇದರ ಬಗ್ಗೆ ತನಿಖೆ ಆಗಬೇಕು. ಯಾರು ಈ ವಿಷಯದಲ್ಲಿ ತಪ್ಪಿತಸ್ಥರಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು ಮತ್ತು ಆ ಜನರಿಗೆ ಕೂಡಲೇ ಬೇರೆ ಕಡೆ ನಿವೇಶನಗಳನ್ನು ಕೊಡಬೇಕೆಂದು ಹೇಳುತ್ತೇನೆ. ಪ್ರೈವೇಟ್ ಲೇಔಟ್‌ನವರು ಮಾಡಿದಷ್ಟು ಚೆನ್ನಾಗಿ ಬಿ.ಡಿ.ಎ. ಯವರು ರಸ್ತೆಗಳನ್ನು ಮಾಡುವುದಿಲ್ಲ. ಆದರೂ ನೂರಕ್ಕೆ ನೂರರಷ್ಟು ಹಣವೂ ಖರ್ಚಾಗಿರುತ್ತದೆ. ಇದರ ಬಗ್ಗೆ ಕೂಡ ತನಿಖೆ ಆಗಬೇಕು. ಏತಕ್ಕೆ ಹೀಗಾಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಹೊಸ ಏರಿಯಾಗಳನ್ನು ಲೊಕೇಟ್ ಮಾಡುವಾಗ ಸ್ಥಳೀಯ ಕನ್‌ಸಲ್ಟೇಟೀವ್ ಕಮಿಟಿಗಳನ್ನು ಮಾಡಿ ಅವುಗಳ ಸಲಹೆ ಪಡೆದು ಮಾಡಬೇಕು. ಮಂಗಳೂರಿನಂಥ ನಗರಗಳಲ್ಲಿ ಕೆಟ್ಟ ಬೀದಿ ದೀಪಗಳನ್ನು ಬದಲಾಯಿಸುವುದಕ್ಕೆ ಪ್ರತಿ ದಿವಸ ನಿಮ್ಮ ಜನ ಅಲ್ಲಿ ಹೋಗುವಂತೆ ಮಾಡಬೇಕು. ಎಲೆಕ್ಟ್ರಿಕಲ್ ಸಬ್ ಡಿವಿಜನ್‌ನವರೇ ಬೀದಿದೀಪಗಳನ್ನು ನೋಡಿಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು. ಮುಖ್ಯವಾಗಿ ಸ್ಥಳೀಯ ಅವಶ್ಯಕತೆಗಳ ಬಗ್ಗೆ ಸರ್ಕಾರ ತೀವ್ರ ಗಮನ ಕೊಡದಿದ್ದರೆ ಅವರ ಪರಿಸ್ಥಿತಿ ಕಷ್ಟವಾಗುತ್ತದೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣ ಕೂಡ ಕಡಿಮೆಯಾಗುತ್ತದೆ. ಒಂದೂವರೆ ಕೋಟಿ ಜನಸಂಖ್ಯೆ ಇರುವ ನಗರ ಪ್ರದೇಶಗಳಿಗೆ ಬೇಕಾದ ನೀರಿನ ವ್ಯವಸ್ಥೆ, ರಸ್ತೆಯ ವ್ಯವಸ್ಥೆ ಮುಂತಾದ ಸೌಲಭ್ಯಗಳು ಸರಿಯಾಗಿಲ್ಲದೆ ನರಕ ಯಾತನೆಯನ್ನು ಅನುಭವಿಸಬೇಕಾಗಿದೆ. ಇದರ ಕಡೆ ಸರ್ಕಾರ ತೀವ್ರ ಗಮನ ಕೊಡಬೇಕು. ೧೯೭೧ರಲ್ಲಿ ಬೆಂಗಳೂರಿನಲ್ಲಿ ೧೬ ಲಕ್ಷ ಜನಸಂಖ್ಯೆ ಇದ್ದರೆ ಇವತ್ತಿನ ದಿವಸ ೩೩ ಲಕ್ಷ ಆಗಿದೆ. ಆದ್ದರಿಂದ, ಅವರಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಕಡೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು. ಇವತ್ತಿನ ದಿವಸ ತಮಿಳುನಾಡು ಮತ್ತು ಕೇರಳದಲ್ಲಿ ಯಾವರೀತಿ ಕೆಲಸ ಮಾಡುತ್ತಿದ್ದಾರೆಂಬುದನ್ನು ನೋಡಬೇಕು. ಅಲ್ಲಿರುವ ರೀತಿ ಇಲ್ಲಿಯೂ ಕೂಡ ನೀರಿನ ಬೋರ್ಡ್ ಮತ್ತು ಡೈರೆಕ್ಟರೇಟ್ ಮಾಡುವ ಬಗ್ಗೆ ಹೊಸ ಸರ್ಕಾರದ ಸಚಿವರು ಅತಿ ಶೀಘ್ರವಾಗಿ ಗಮನ ಕೊಡುತ್ತಾರೆಂದು ನಂಬಿದ್ದೇನೆ. ಇನ್ನು ನಗರಸಭೆಯ ಕಾಯಿದೆಯಲ್ಲಿರತಕ್ಕ ಕೆಲವು ಲೋಪದೋಷಗಳನ್ನು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿಗೆ ರಾಷ್ಟ್ರ ನಾಯಕರು ಬಂದಾಗ ೧೦ ರೂಪಾಯಿನ ಗಾರ್ಲೆಂಡ್ ಹಾಕಿದಾಗ ಸರ್ ಚಾರ್ಜ್ ಪ್ರಶ್ನೆ ಬಂತು. ಆಗ ಐಟಂ ನಂ. ೧೯ನ್ನು ಡಿಲಿಟ್ ಮಾಡಬೇಕೆಂಬ ವಿಚಾರ ಬಂತು.

* * *

ರಾಷ್ಟ್ರಪತಿಯವರು ನಮ್ಮ ಊರಿಗೂ ಬಂದಿದ್ದರು. ಆಗ ನಾವು ಅವರನ್ನು ಸ್ವಾಗತಿಸಿ ಗೌರವಿಸಿದೆವು. ಆದರೆ ನಾವು ಅಷ್ಟು ಹಣ ಖರ್ಚು ಮಾಡಲಿಲ್ಲ. ಇದನ್ನು ಸರ್ಕಾರದವರು ಗಮನಿಸುತ್ತಾರೆಂದು ಆಶಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಅದನ್ನು ಬಹುಶಃ ಉದ್ದೇಶಪೂರ್ವಕವಾಗಿ ಹೇಳಿರಲಿಕ್ಕೆ ಇಲ್ಲವೆಂದು ನನ್ನ ನಂಬಿಕೆ. ರಾಷ್ಟ್ರಪತಿಯವರು ಬಂದಾಗ ಮಾಡಿದ ಖರ್ಚಿನ ಬಗ್ಗೆ ಪ್ರಸ್ತಾಪ ಮಾಡಿದ್ದು ರೆಕಾರ್ಡಿಗೆ ಹೋದರೆ ನಾಳೆ ದಿವಸ ಇಂಥ ಸನ್ಮಾನವನ್ನು ಯಾರೂ ಸ್ವೀಕರಿಸುವುದಿಲ್ಲ. ನಾಳೆ ದಿವಸ ಇದೇ ಒಂದು ಚರ್ಚೆಯ ವಿಷಯವಾಗುತ್ತದೆ. ಆದ್ದರಿಂದ, ದಯವಿಟ್ಟು ಅದನ್ನು ಎಕ್ಸ್‌ಪಂಜ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ವಿ.ಎಸ್. ಆಚಾರ್ಯ.—ನಾನು ಇದರಲ್ಲಿರತಕ್ಕ ಲೋಪದೋಷಗಳನ್ನು ಹೇಳಿದ್ದೇನೆ.

ಉಪಾಧ್ಯಕ್ಷರು.— ನಿಮ್ಮ ಉದ್ದೇಶ ನನಗೆ ಅರ್ಥವಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ.— ರಾಷ್ಟ್ರಪತಿಯವರ ಹೆಸರು ರೆಕಾರ್ಡಿಗೆ ಹೋಗಬಾರದು.

ಉಪಾಧ್ಯಕ್ಷರು.— ಅದನ್ನು ನಾನು ತೆಗೆಸುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ವಿರೋಧ ಪಕ್ಷದ ನಾಯಕರಿಗೆ ಹೇಳಬಯಸುವುದೇನೆಂದರೆ. ನಾನು ರಾಷ್ಟ್ರಪತಿಯವರ ಬಗ್ಗೆ ಸಂಪೂರ್ಣ ಗೌರವವುಳ್ಳವನು. ಆದರೆ ಕಾನೂನು ಮತ್ತು ನಿಯಮಗಳಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕೆಂಬ ವಿಚಾರಕ್ಕೋಸ್ಕರ ಹೇಳಿದೆ ಅಷ್ಟೆ.

† ಶ್ರೀ ಎಸ್.ಆರ್. ಮೊರೆ (ಧಾರವಾಡ).— ಮಾನ್ಯ ಅಧ್ಯಕ್ಷರೆ, ಇಂದು ಸಭೆಯ ಮುಂದಿರತಕ್ಕ ಬೇಡಿಕೆಗಳ ಮೇಲೆ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಬಗ್ಗೆ ಹೇಳುವುದಾದರೆ ಅದರ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ಆಕ್ಟ್ರಾಯ್ ಮೂಲಕ ಹಿಂದೆ ಮಹಾ ನಗರಸಭೆಗೆ ಏನು ಹಣ ಸಂದಾಯವಾಗುತ್ತಿತ್ತು ಅಷ್ಟು ಹಣ ಈಗ ಸರ್ಕಾರದವರು ಕೊಡತಕ್ಕ ಅನುದಾನದಿಂದ ದೊರೆಯುತ್ತಿಲ್ಲ. ಈ ವರ್ಷ ಕೇವಲ ೨.೩೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೋದವರ್ಷ ೨.೧೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಕೇವಲ ೧೩ ಲಕ್ಷ ರೂಪಾಯಿಗಳನ್ನು ಮಾತ್ರ ಈ ವರ್ಷಕ್ಕೆ ಹೆಚ್ಚಿಸಿದ್ದಾರೆ. ಆಕ್ಟ್ರಾಯ್ ಮೂಲಕ ಪ್ರತಿ ವರ್ಷ ೨೫ರಿಂದ ೩೦ ಪರ್ಸೆಂಟ್ ಹಣ ಹೆಚ್ಚಾಗುತ್ತಿತ್ತು. ಅದಕ್ಕೆ ಹೋಲಿಸಿದರೆ ಸರ್ಕಾರದವರು ಕೊಡತಕ್ಕ ಅನುದಾನ ಬಹಳ ಕಡಿಮೆಯಾಗಿದೆ. ಆದ್ದರಿಂದ, ಮಂತ್ರಿಗಳು ಈ ಅನುದಾನದ ಮೊತ್ತವನ್ನು ಕನಿಷ್ಠ ಪಕ್ಷ ೩ ಕೋಟಿ ರೂಪಾಯಿಗಳವರೆಗೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ಹುಬ್ಬಳ್ಳಿ-ಧಾರವಾಡ ಕ್ಷೇತ್ರದಲ್ಲಿ ಬರತಕ್ಕ ಸುಮಾರು ೧೪ ಹಳ್ಳಿಗಳಿಗೆ ಹಿಂದಿನ ಸರ್ಕಾರದವರು ೧೦ ಲಕ್ಷ ರೂಪಾಯಿ ಅನುದಾನ ಕೊಟ್ಟಿದ್ದರು. ಆದರೆ ಈ ವರ್ಷದ ವರದಿಯಲ್ಲಿ ಆ ಬಾಬಿಗೆ ಒಂದು ನಯಾಪೈಸೆ ಕೂಡ ಕೊಡುವ ಪ್ರಸ್ತಾಪ ಮಾಡಿಲ್ಲ. ಆದ್ದರಿಂದ, ಮಂತ್ರಿಗಳು ಇದನ್ನು ಸಹ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಚುನಾವಣೆ ಮಾಡಿದ್ದೀರಿ. ಆ ಸಂದರ್ಭದಲ್ಲಿ ತಾವು ಹೇಳಿದ ಪ್ರಕಾರ ಹಳ್ಳಿಗಳಿಗೆ ಏನು ಸೌಲಭ್ಯಗಳನ್ನು ಕೊಡಬೇಕೋ ಆ ಸೌಲಭ್ಯಗಳನ್ನು ಕೊಟ್ಟಿಲ್ಲ. ಆ ಹಳ್ಳಿಗಳು ನಗರಸಭೆಯ ವ್ಯಾಪ್ತಿಗೆ ಸೇರಿ ೧೫–೨೦ ವರ್ಷಗಳು ಆಗಿವೆ. ನಿವೇಶನಗಳ ಬಗ್ಗೆ ಹೇಳುವುದಾದರೆ, ನೀವು ಬಂದು ೬ ತಿಂಗಳಾದರೂ ಒಂದು ನಿವೇಶನವನ್ನು ಹಂಚಿಲ್ಲ. ಮಹಾನಗರ ಸಭೆಯಲ್ಲಿ ೧೨ ಸಾವಿರ ಅರ್ಜಿಗಳು ಇತ್ಯರ್ಥವಾಗದೆ ಉಳಿದಿವೆ. ದಯಮಾಡಿ ನಿವೇಶನ ಹಂಚುವ ಬಗ್ಗೆ ಮಂತ್ರಿಗಳು ದಿಟ್ಟ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ಬಗ್ಗೆ ಹೇಳಬೇಕೆಂದರೆ ಚೇರ್ಮನ್ನರನ್ನು ಮಾಡಿ ೬ ತಿಂಗಳಾದರೂ ಸದಸ್ಯರನ್ನು ನೇಮಕ ಮಾಡಿಲ್ಲ. ಹುಬ್ಬಳ್ಳಿ ಧಾರವಾಡ ಮಹಾ ನಗರಸಭೆ ಪ್ರದೇಶದಲ್ಲಿ ಸೈಟುಗಳ ಬೆಲೆ ಗಗನಕ್ಕೇರುತ್ತಿವೆ. ಹೋದ ವರ್ಷ ಒಂದು ಗುಂಟೆ ನಿವೇಶನ ಧಾರವಾಡದಲ್ಲಿ ೩ ಸಾವಿರ ರೂಪಾಯಿಗಳಿಗೆ ಸಿಗುತ್ತಿದ್ದರೆ ಈ ವರ್ಷ ೪೦ ಸಾವಿರ ರೂಪಾಯಿ ಆಗಿದೆ. ಬಡವರು ಮತ್ತು ಮಧ್ಯಮ ವರ್ಗದವರಿಗೆ ಸೈಟು ಸಿಗುತ್ತಿಲ್ಲ. ಸರ್ಕಾರದವರು ಸದಸ್ಯರನ್ನು ನೇಮಿಸಿ ನಗರಸಭೆಯಿಂದ ಸೈಟುಗಳನ್ನು ಹಂಚುವ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಕಟ್ಟಡಗಳ ಬಗ್ಗೆ ಹೇಳಬೇಕೆಂದರೆ ಈ ಬಗ್ಗೆ ಎರಡು ಅಥಾರಿಟಿ ಇದೆ. ಒಂದು–ಮಹಾ ನಗರಸಭೆ, ಇನ್ನೊಂದು ಟೌನ್ ಪ್ಲಾನಿಂಗ್ ಅಥಾರಿಟಿ. ಬಡವರು ಎರಡೂ ಕಡೆ ಓಡಾಡುವುದಕ್ಕೆ ಕಷ್ಟವಾಗುತ್ತದೆ. ಟೌನ್ ಪ್ಲಾನಿಂಗ್ ಅಥಾರಿಟಿಯವರು ಬಂದು ಇನ್ಸ್‌ಪೆಕ್ಷನ್

† ಈ ಚಿನ್ಹೆ ಸಂಬಂದ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುವುದಕ್ಕೆ ಕನಿಷ್ಟ ಪಕ್ಷ ಎರಡು ತಿಂಗಳು ತೆಗೆದುಕೊಳ್ಳುತ್ತಾರೆ. ಮಹಾ ನಗರಸಭೆಯವರು ಮಂಜೂರಾತಿಗೆ ಎರಡು ತಿಂಗಳು ತೆಗೆದುಕೊಳ್ಳುತ್ತಾರೆ. ಹೀಗಾಗಿ ಕಟ್ಟಡ ಕಟ್ಟುವುದಕ್ಕೆ ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ವಿಳಂಬವಾಗುತ್ತಿದೆ. ಆದ್ದರಿಂದ ಟೌನ್ ಪ್ಲಾನಿಂಗ್ ಅಥಾರಿಟಿಯ ಅಧಿಕಾರಿಯೊಬ್ಬರು ನಗರಸಭೆಯಲ್ಲೇ ಇರುವಂತೆ ಮಾಡಿದರೆ ಒಂದೇ ಕಚೇರಿಯಲ್ಲಿ ಜನರು ಕಟ್ಟಡ ಕಟ್ಟಲು ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಮಹಾ ನಗರಸಭೆಗೆ ಆಯುಕ್ತರನ್ನಾಗಿ ಹಿರಿಯ ಐ.ಎ.ಎಸ್. ಅಧಿಕಾರಿಗಳನ್ನು ನೇಮಿಸಬೇಕು. ಹುಬ್ಬಳ್ಳಿ–ಧಾರವಾಡ ನಗರ ಸಭೆಯ ವರಮಾನ ೨ ರಿಂದ ೨½ ಕೋಟಿ ರೂಪಾಯಿ ಆಗಿದೆ. ಆದ್ದರಿಂದ ಅದರ ಜವಾಬ್ದಾರಿಯೂ ಹೆಚ್ಚಾಗಿದೆ. ಹೀಗಿರುವುದರಿಂದ ಅಲ್ಲಿಗೆ ಸೀನಿಯರ್ ಐ.ಎ.ಎಸ್. ಅಧಿಕಾರಿಯನ್ನು ಕಮಿಷನರನ್ನಾಗಿ ನೇಮಿಸಬೇಕೆಂದು ಕೇಳಿಕೊಂಡು ಕೆಲವು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ.ಪಿ. ಹೆಗರೆ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಭೆಯ ಮುಂದಿಟ್ಟಿರುವ ಬೇಡಿಕೆಗಳಿಗೆ ಬೆಂಬಲ ನೀಡಿ ಬೇಡಿಕೆ ಸಂಖ್ಯೆ ೩೧೮ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಈಗಾಗಲೇ ಕೆಲವು ಸದಸ್ಯರು ಈ ವಿಷಯದಲ್ಲಿ ಮಾತನಾಡಿರುವುದರಿಂದ ನಾನು ಮತ್ತೆ ಮತ್ತೆ ಅದನ್ನು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಮಾನ್ಯ ಸದಸ್ಯರು ಯಾವ ವಿಷಯವನ್ನು ಮಾತನಾಡಲಿಲ್ಲವೋ ಅದನ್ನು ನಾನು ಈಗ ಹೇಳಬಯಸುತ್ತೇನೆ. ಸಿಟಿ ಮುನಿಸಿಪಾಲಿಟಿಯಲ್ಲಾಗಲೀ ಟೌನ್ ಮುನಿಸಿಪಾಲಿಟಿಯಲ್ಲಾಗಲೀ ಬಜೆಟ್ಟಿನಲ್ಲಿ ೧೮ ಪರ್ಸೆಂಟನ್ನು ಹರಿಜನ ಗಿರಿಜನರ ಯೋಗಕ್ಷೇಮವನ್ನು ನೋಡಿಕೊಳ್ಳಲು ಕಾದಿರಿಸಬೇಕು ಎಂದು ಮಾನ್ಯ ದೇವರಾಜ ಅರಸ್ ಅವರು ಕಾನೂನು ಮಾಡಿದ್ದರು. ದೇಶದಲ್ಲಿ ಬೇರೆ ಯಾವ ರಾಜ್ಯದಲ್ಲೂ ಈ ರೀತಿ ಮುನಿಸಿಪಾಲಿಟಿಗಳಲ್ಲಿ ಹರಿಜನಗಿರಿಜನರ ಸಲುವಾಗಿ ಖರ್ಚು ಮಾಡಲು ಹಣ ಮೀಸಲಿಡುವ ಪದ್ಧತಿ ಇರಲಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ದಿವಂಗತ ದೇವರಾಜ ಅರಸ್ ಅವರು ಮಾಡಿ ಹೋದರು. ಈವತ್ತು ಅವರನ್ನು ನೆನೆಸಿಕೊಳ್ಳಬೇಕಾಗಿದೆ. ಆದರೆ ಎಲ್ಲಾ ಮುನಿಸಿಪಾಲಿಟಿಗಳಲ್ಲಿ ಈ ರೀತಿ ೧೮ ಪರ್ಸೆಂಟ್ ಹಣವನ್ನು ತಮ್ಮ ಬಜೆಟ್ಟಿನಲ್ಲಿ ಇಡುತ್ತಿದ್ದಾರೋ ಇಲ್ಲವೋ ಮತ್ತು ಅದನ್ನು ಸರಿಯಾಗಿ ಖರ್ಚು ಮಾಡುತ್ತಿದ್ದಾರೋ ಇಲ್ಲವೋ ಎಂಬುದನ್ನು ನೋಡಬೇಕಾಗಿದೆ. ಈ ಎಗ್ಸಿಕ್ಯುಟೀವ್ ಆರ್ಡರ್ ಆಗಿ ೯–೧೦ ವರ್ಷಗಳಾಗಿವೆ. ಪ್ರಥಮದಲ್ಲಿ ಈ ವ್ಯವಸ್ಥೆ ಇರಲಿಲ್ಲ. ಒಂದೊಂದು ಡಿವಿಜನ್‌ನಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಎಂಬುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಬೆಂಗಳೂರು ಡಿವಿಜನ್‌ನಲ್ಲಿ ೩೭.೯೨ ಲಕ್ಷ ರೂಪಾಯಿಗಳನ್ನು ಮಾತ್ರ ಹರಿಜನರ ಗಿರಿಜನರ ಸಲುವಾಗಿ ಖರ್ಚಿಗೆ ಇಟ್ಟಿದ್ದಾರೆ. ಇಡೀ ಬೆಂಗಳೂರು ಡಿವಿಷನ್‌ಗೆ ಇಷ್ಟು ಹಣ ಇಟ್ಟಿದ್ದಾರೆ. ಇಟ್ಟಿರುವ ಹಣ ಸರಿಯಾಗಿ ಹರಿಜನಗಿರಿಜನರ ಸಲುವಾಗಿ ಖರ್ಚಾಗುತ್ತಿದೆಯೋ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲಿಸಬೇಕು. ಹರಿಜನ ಗಿರಿಜನರ ಸಮಸ್ಯೆ ಬಿಡಿಸುವುದು ದೊಡ್ಡ ಕೆಲಸ. ಇದನ್ನು ಕ್ಷುಲ್ಲಕ ಎಂದು ಭಾವಿಸಬಾರದು. ಮುನಿಸಿಪಾಲಿಟಿಗಳು ಈ ದಿಸೆಯಲ್ಲಿ ಸರಿಯಾಗಿ ಕೆಲಸ ಮಾಡಿವೆಯೇ ಎಂಬುದನ್ನು ನೋಡಬೇಕು. ಅದೇ ರೀತಿ ಮೈಸೂರು ಡಿವಿಷನ್‌ನಲ್ಲಿ ೮೩.೩೪ ಲಕ್ಷ ರೂಪಾಯಿಗಳನ್ನು ೧೯೮೨–೮೩ನೇ ಸಾಲಿನಲ್ಲಿ ತೆಗೆದಿಟ್ಟಿದ್ದು ಅದರಲ್ಲಿ ೨೪ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಮೈಸೂರು, ಮಂಡ್ಯ, ಹಾಸನ, ಕೊಡಗು, ಚಿಕ್ಕಮಗಳೂರು–ಎಲ್ಲ ಕಡೆಗಳದ್ದು ಸೇರಿ ಇಷ್ಟು ಹಣ ಖರ್ಚಾಗಿರುವುದು. ಇದು ಕಡಿಮೆ ಎಂದು ನನಗನ್ನಿಸುತ್ತದೆ. ಈ ಹೊತ್ತಿಗೆಯಲ್ಲಿ ಮುನಿಸಿಪಾಲಿಟಿಗಳು ಮಾಡಬೇಕಾದ ಖರ್ಚು ಎಷ್ಟು ಎಂಬುದನ್ನು ನಮೂದಿಸಬೇಕಾಗಿತ್ತು. ಮತ್ತು ಈ ವರೆಗೆ ಎಷ್ಟು ಖರ್ಚು ಮಾಡಿದ್ದಾರೆಎಂಬುದನ್ನು ನಮೂದಿಸಬೇಕಾಗಿತ್ತು. ಈ ಹಣ ಲ್ಯಾಪ್ಸ್ ಆಗಕೂಡದು, ಈ ವರ್ಷ ಖರ್ಚು ಮಾಡದೇಹೋದರೆ ಮುಂದಿನ ವರ್ಷವಾದರೂ ಖರ್ಚು ಮಾಡಬೇಕು ಎಂಬ ಆದೇಶ ಸರ್ಕಾರ ನೀಡಿದೆ. ಆದರೆ ಮುನಿಸಿಪಾಲಿಟಿಗಳು ಅದನ್ನು ಸರಿಯಾಗಿ ಪಾಲಿಸುತ್ತಿವೆಯೋ ಎಂಬುದನ್ನು ನೋಡಬೇಕು. ಒಂದೊಂದು ಡಿವಿಷನ್‌ನಲ್ಲಿ ಎಷ್ಟು ಹಣ ಇಡಲಾಗಿತ್ತು ಮತ್ತು ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಮಾತ್ರ ಹೇಳಿದ್ದಾರೆಯೇ ಹೊರತು ಪ್ರತಿಯೊಂದು ಕಡೆ ಎಷ್ಟೆಷ್ಟು ಖರ್ಚಾಗಿದೆ ಎಂಬುದನ್ನು ಹೇಳಿಲ್ಲ.

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ–ಎಲ್ಲಾ ಮುನಿಸಿಪಾಲಿಟಿಗಳು ತಮ್ಮ ಬಜೆಟ್ಟಿನಲ್ಲಿ ೧೮ ಪರ್ಸೆಂಟ್ ಹಣವನ್ನು ಇಟ್ಟು ಹರಿಜನಗಿರಿಜನರ ಸಲುವಾಗಿ ಖರ್ಚು ಮಾಡಿದೆಯೋ ಎಂಬುದನ್ನು ನೋಡಿಕೊಳ್ಳಬೇಕು. ಕಾರ್ಪೊರೇಷನ್ನಿನವರು ಎಷ್ಟು ಖರ್ಚು ಮಾಡಿದ್ದಾರೆ ಎಂಬುದನ್ನು ಹೇಳ ಬಯಸುತ್ತೇನೆ. ಬೆಂಗಳೂರು ನಗರ ಕಾರ್ಪೊರೇಷನ್ನಿನವರು ೧೫೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಏತಕ್ಕಾಗಿ ಖರ್ಚು ಮಾಡಿದ್ದಾರೆ ಎಂಬುದನ್ನು ನೋಡಿದರೆ ನೀರಿನ ಯೋಜನೆ ಮಾಡುವ ಸಲುವಾಗಿ ಕೆಲವು ಸಾರಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ನೀರಿನ ಯೋಜನೆ ಇದರಲ್ಲಿ ಬರಕೂಡದು. ನೀರಿನ ಯೋಜನೆ ಮಾಡುವುದು, ರಸ್ತೆ ಮಾಡುವುದು ೧೮ ಪರ್ಸೆಂಟಿನಲ್ಲಿ ಬರಕೂಡದು. ಈ ಕೆಲಸಗಳೆಲ್ಲಾ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಸರ್ವೇಸಾಮಾನ್ಯವಾಗಿ ಮಾಡುವ ಕೆಲಸಗಳು. ಅದಕ್ಕೆ ಖರ್ಚು ಮಾಡಿ ಈ ಲೆಕ್ಕದಲ್ಲಿ ತೋರಿಸುವುದು ಸರಿಯಲ್ಲ. ಹರಿಜನಗಿರಿಜನ ಮಕ್ಕಳ ಶಿಕ್ಷಣದ ಸಲುವಾಗಿ, ಬಾಲಕರ ಸ್ಕಾಲರ್‌ಷಿಪ್ ಸಲುವಾಗಿ ಅಥವಾ ಹಾಸ್ಟಲ್ ನಿರ್ಮಾಣಕ್ಕಾಗಿ ಅಥವಾ ಸಮಾಜ ಮಂದಿರ ಇಂಥವನ್ನು ಕಟ್ಟುವುದಕ್ಕಾಗಿಯೋ ಖರ್ಚು ಮಾಡಬೇಕು. ಈ ರೀತಿಯ ವಿಶೇಷ ಕೆಲಸಗಳಿಗೆ ೧೮ ಪರ್ಸೆಂಟ್ ಹಣವನ್ನು ಉಪಯೋಗ ಮಾಡಬೇಕು. ರಸ್ತೆ ಮಾಡಿದ್ದೇವೆ, ನೀರಿನ ಯೋಜನೆ ಮಾಡಿದ್ದೇವೆ ಎಂದು ಹೇಳ ಬಾರದು. ಕೆಲವು ಮುನಿಸಿಪಾಲಿಟಿಗಳು ಸಾಮಾನ್ಯವಾಗಿ ಮಾಡುವ ಕೆಲಸಗಳನ್ನು ಹರಿಜನ ಕೇರಿಗಳಲ್ಲಿ ಮಾಡಿ ೧೮ ಪರ್ಸೆಂಟ್ ಹಣವನ್ನು ಅಲ್ಲಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಮಂತ್ರಿಗಳು ಗಮನಿಸಬೇಕು. ಸಾಮಾನ್ಯವಾಗಿ ಮಾಡುವ ಕೆಲಸಗಳನ್ನು ಮುನಿಸಿಪಾಲಿಟಿಗಳಲ್ಲಿಟ್ಟಿರುವ ಹಣದಲ್ಲಿ ಮಾಡಬೇಕು. ೧೮ ಪರ್ಸೆಂಟ್ ಹಣದಲ್ಲಿ ಹರಿಜನಗಿರಿಜನರ ಸಲುವಾಗಿ ಮಾತ್ರ ಖರ್ಚು ಮಾಡಬೇಕು. ಬೆಂಗಳೂರು ನಗರ ಕಾರ್ಪೊರೇಷನ್ನಿನವರು ಹಾಸ್ಟೆಲ್ ಕಟ್ಟಡವನ್ನು ಕಟ್ಟಿದ್ದಾರೆ. ಆದ್ದರಿಂದ ಇವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಸ್ಟೆಲ್ ಕಟ್ಟಡಗಳನ್ನು, ವಿಮೆನ್ ವೆಲ್ಫೇರ್ ಸೆಂಟರ್‌ಗಳನ್ನು ಕಮ್ಯುನಿಟಿ ಸೆಂಟರ್‌ಗಳನ್ನು ಕಟ್ಟುವುದಕ್ಕೆ ಸರ್ಕಾರದಲ್ಲಿ ಹಣ ಇಲ್ಲ ಎಂದು ಉತ್ತರ ಬರುತ್ತಿರುವುದು ದುರ್ದೈವದ ಸಂಗತಿ. ಇಂಥ ಪ್ರಸಂಗಗಳಲ್ಲಿ ಮುನಿಸಿಪಾಲಿಟಿಯವರು ಈ ಕೆಲಸಗಳನ್ನು ಮಾಡಬೇಕು ಬೆಂಗಳೂರು ನಗರಸಭೆಯವರು ಜಯನಗರ ಮತ್ತು ಹೊಸಹಳ್ಳಿಯಲ್ಲಿ ಗರ್ಲ್ಸ್ ಹಾಸ್ಟಲ್ ಕಟ್ಟುತ್ತಿರುವುದು ಆನಂದದ ಸಂಗತಿ. ಆದರೂ ಈ ಹಣ

೫-೦೦ ಪಿ.ಎಂ.

ಸಾಲದು. ಕೆಲವು ಮುನಿಸಿಪಾಲಿಟಿಗಳಲ್ಲಿ ಹಾಗೂ ನಗರಸಭೆಗಳಲ್ಲಿ ಸಾಕಷ್ಟು ಹಣ ಹರಿಜನರಿಗಾಗಿ ಖರ್ಚು ಮಾಡುವಂತಾದ್ದು ಉಳಿದಿದೆ, ಹಾಗೆ ಉಳಿದಿರುವಂಥ ಎಲ್ಲ ಹಣವನ್ನು ಹರಿಜನರಿಗಾಗಿಯೇ ಖರ್ಚು ಮಾಡಬೇಕು ಬೆಂಗಳೂರು ನಗರಸಭೆಯವರು ೧೦-೨೦ ಲಕ್ಷ ಖರ್ಚು ಮಾಡಿದ್ದಾರೆಂದು ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥ ಸಂಖ್ಯೆ ನಿಜವಾಗಿದ್ದರೆ ನಾನು ಆನಂದವನ್ನು ವ್ಯಕ್ತ ಮಾಡುತ್ತೇನೆ. ಹರಿಜನ ಮಕ್ಕಳ ಹಾಸ್ಟೆಲು ಕಟ್ಟಡಗಳ ಸಲುವಾಗಿ ಖರ್ಚು ಮಾಡಿದ್ದಾರೆ. ಅದೇ ರೀತಿ ಬೆಳಗಾಂ ಕಾರ್ಪೊರೇಷನ್‌ನಲ್ಲಿಯೂ ಸಾಕಷ್ಟು ಹಣ ಉಳಿದಿದೆ. ಇದನ್ನು ಒಂದೆರಡು ವರ್ಷಗಳಲ್ಲಿ ಹಾಸ್ಟೆಲುಗಳ ಕಟ್ಟಡಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ ಕೆಲವೊಂದು ಮುನಿಸಿಪಾಲಿಟಿಯವರು ಪೌರ ಕಾರ್ಮಿಕರಿಗೆ ಮನೆಗಳನ್ನು ಹದಿನೆಂಟು ಪರ್ಸೆಂಟೇ ಹಣದಲ್ಲಿ ಕಟ್ಟುತ್ತಿದ್ದಾರೆ. ಇದು ಸರಿಯಾದುದಲ್ಲ, ಇವರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕೆಂದು ಹೇಳುತ್ತೇನೆ. ವಾಸದ ಮನೆಗಳನ್ನು ಬೇರೆ ಬಾಬಿನಿಂದ ಕಟ್ಟಬೇಕೆಂಬ ಸೂಚನೆಯನ್ನು ಸರ್ಕಾರದಿಂದ ಕಳುಹಿಸಬೇಕೆಂದು ಹೇಳುತ್ತೇನೆ. ಇವತ್ತು ಹರಿಜನ ಗಿರಿಜನರ ಉನ್ನತಿ ಆಗಬೇಕಾದರೆ, ಶಿಕ್ಷಣವನ್ನು ಮಾತ್ರ ಕಡ್ಡಾಯವಾಗಿ ಕೊಡಬೇಕು. ಇದರಿಂದ ಮಾತ್ರ ಹರಿಜನರ ಉದ್ಧಾರ ಸಾಧ್ಯ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಹುಬ್ಬಳ್ಳಿ ಧಾರವಾಡ ನಗರಸಭೆಯವರು ಸಮುದಾಯ ಭವನಗಳನ್ನು ಭಜನೆ ಮಂಡಲಿಗಳನ್ನು ಕಟ್ಟಿದ್ದಾರೆ. ಶಿಕ್ಷಣಕ್ಕೆ ಅವರು ಕೈಹಾಕಿಲ್ಲ. ಶಿಕ್ಷಣದ ಕಡೆಗೂ ಹೆಚ್ಚು ಗಮನಹರಿಸುವಂತೆ, ಮಾನ್ಯ ಮಂತ್ರಿಗಳವರು ಸೂಚನೆ ಕೊಡಬೇಕೆಂದು ಹೇಳುತ್ತೇನೆ. ೧೦-೧೫ ಲಕ್ಷ ರೂಪಾಯಿ ಖರ್ಚು ತೋರಿಸುತ್ತಿದ್ದಾರೆ. ಇದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಗುಲ್ಬರ್ಗಾದವರು ಏನೂ ಮಾಡಿಲ್ಲ. ಕಲ್ಯಾಣ ಮಂಟಪ ಮಾಡುವ ಸಲುವಾಗಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಹಿಂದಿನಿಂದಲೂ ಹದಿನೆಂಟು ಪರ್ಸೆಂಟ್ ಹಣ ಉಳಿದಿರುವುದು ಒಂದು ಲಕ್ಷ ರೂಪಾಯಿ ಎಂದು ತೋರಿಸಿದ್ದಾರೆ. ಮಾನ್ಯ ಮಂತ್ರಿಯವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಹರಿಜನ ಗಿರಿಜನರಿಗೆ ಮೀಸಲಾಗಿರುವ ಹದಿನೆಂಟು ಪರ್ಸೆಂಟ್ ಹಣವನ್ನು ಸೂಕ್ತ ಕಾರ್ಯಗಳಿಗೆ ಖರ್ಚು ಮಾಡುವಂತೆ ಆದೇಶ ನೀಡಬೇಕೆಂದು ಹೇಳುತ್ತೇನೆ. ಮಂಗಳೂರು ಕಾರ್ಪೊರೇಷನ್ನಿನವರು ಒದಗಿಸಿರುವ ಅಂಕಿಸಂಖ್ಯೆಗಳು ನಿಜವಾಗಿದ್ದರೆ, ಅಭಿನಂದನೆ ಸಲ್ಲಿಸುತ್ತೇನೆ.

ಸಮುದಾಯ ಭವನಗಳಿಗೆ, ೧.೭೫ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಹರಿಜನ ಗಿರಿಜನ ಹೆಣ್ಣುಮಕ್ಕಳ ಹಾಸ್ಟೆಲು ಕಟ್ಟಡಕ್ಕೆ ಹಣ ಖರ್ಚು ಮಾಡಿದ್ದಾರೆ. ಪ್ರೀ ಮೆಟ್ರಿಕ್ ಹಾಸ್ಟೆಲು ಸಲುವಾಗಿ ೩೭ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಪೋಸ್ಟ್ ಮೆಟ್ರಿಕ್ ಹಾಸ್ಟೆಲು ಸಲುವಾಗಿ ಕೂಡ ಹಣ ಖರ್ಚು ಮಾಡಿದ್ದಾರೆ. ಇವರು ಅಭಿನಂದನೆಗೆ ಪಾತ್ರರು. ನಾನು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಇಡೀ ರಾಜ್ಯದಲ್ಲಿ ಎಲ್ಲಾ ನಗರಸಭೆಯವರು ಹಾಗೂ ಮುನಿಸಿಪಾಲಿಟಿಯವರು ಹರಿಜನ ಗಿರಿಜನರಿಗಾಗಿ ಇಟ್ಟಿರುವಂಥ ೧೮ ಪರ್ಸೆಂಟ್ ಹಣವನ್ನು ಪ್ರಾಮಾಣಿಕತನದಿಂದ ಹರಿಜನರನ್ನು ಉದ್ಧಾರ ಮಾಡಬೇಕೆಂಬ ಸದುದ್ದೇಶದಿಂದ ಖರ್ಚು ಮಾಡಿದರೆ ತೀವ್ರಗತಿಯಲ್ಲಿ ಪ್ರಗತಿಯಾಗುತ್ತದೆಂಬ ಭಾವನೆ ನನಗಿದೆ. ಈಗ ಮುನಿಸಿಪಾಲಿಟಿ ಆಕ್ಟ್ ೧೯೭೫ರ ೩ನೇ ಕಾಲಂ ಪ್ರಕಾರ ಕೆಲವೊಂದು ಪಂಚಾಯಿತಿಗಳನ್ನು ಮುನಿಸಿಪಾಲಿಟಿಗಳಾಗಿ ಮಾಡಿದ್ದೀರಿ. ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಿಲ್ಲವೆಂದು ನನ್ನ ಕಲ್ಪನೆ. ನಾನೂ ಕೂಡ ಆ ಕಮಿಟಿಯಲ್ಲಿ ಇದ್ದೆ ವಿರೋಧ ಮಾಡಿದರೂ ಯಾರೂ ಕೇಳಲಿಲ್ಲ. ಹತ್ತು ಸಾವಿರ ಜನಸಂಖ್ಯೆ ಇರತಕ್ಕ ಪಂಚಾಯಿತಿಯನ್ನು ಮುನಿಸಿಪಾಲಿಟಿ ಎಂದು ಮಾಡಬಹುದು ಎಂದು ತೀರ್ಮಾನ ಮಾಡಿದಿರಿ. ಅಲ್ಲಿನ ಉತ್ಪತ್ತಿಯನ್ನು ವಿಚಾರ ಮಾಡಲಿಲ್ಲ. ಊರಿನ ಪರಿಸ್ಥಿತಿ ಬಗ್ಗೆ ವಿಚಾರ ಮಾಡಲಿಲ್ಲ. ಹತ್ತು ಸಾವಿರ ಜನಸಂಖ್ಯೆ ಇದ್ದರೂ ಕೂಡ ಅದನ್ನು ಸಿಟಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಸದಲಗ ಎನ್ನುವುದು ನನ್ನ ಊರು, ಅಲ್ಲಿ ೧೨–೧೩ ಸಾವಿರ ಜನಸಂಖ್ಯೆ ಇದೆ. ಎರಡು ಹ್ಯಾಮ್ಲೆಟ್ಸ್‌ಗಳು ಇವೆ. ಅಲ್ಲಿ ಮಾರ್ಕೆಟ್ ಇಲ್ಲ. ಬರೀ ಒಕ್ಕಲುತನದಿಂದ ಜೀವನ ಮಾಡುವಂಥ ಜನರ ಊರು. ೧೦,೦೦೦ ಜನಸಂಖ್ಯೆಗಿಂತ ಜಾಸ್ತಿ ಇದ್ದಾರೆಂದು ಟೌನ್ ಮುನಿಸಿಪಾಲಿಟಿ ಮಾಡಿದರು. ಇವತ್ತು ಅಲ್ಲಿನ ಪರಿಸ್ಥಿತಿ ಏನಾಗಿದೆ? ಅಲ್ಲಿರುವಂಥ ಜನತೆಗೆ ಯಾವ ಸೌಲಭ್ಯವೂ ಸಿಗುತ್ತಿಲ್ಲ. ಟ್ಯಾಕ್ಸೇಷನ್ ಹೆಚ್ಚು ಮಾಡಿದ್ದಾರೆ ಪಂಚಾಯಿತಿ ಇರತಕ್ಕ ಕಡೆ ಇರುವಂಥ ಸೌಲಭ್ಯಗಳೂ ಅಲ್ಲಿ ಇಲ್ಲ. ಅಲ್ಲಿರತಕ್ಕ ಹರಿಜನರು ಯಾವ ಸಹಾಯ ಸವಲತ್ತುಗಳು ಸಿಗದೇ ತೊಂದರೆ ಪಡುತ್ತಿದ್ದಾರೆ. ಮುನಿಸಿಪಾಲಿಟಿ ಎಂದು ಮಾಡಿರುವುದರಿಂದ ತಾಲ್ಲೂಕು ಬೋರ್ಡಿನಿಂದ ದುಡ್ಡು ಸಿಗುವುದಿಲ್ಲ. ತಾಲ್ಲೂಕು ಬೋರ್ಡಿನವರು ೧೮ ಪರ್ಸೆಂಟ್ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ನಿಮ್ಮದು ಮುನಿಸಿಪಾಲಿಟಿಯಾಗಿದೆಯೆಂದು ಹೇಳುತ್ತಾರೆ. ಇಂಥ ಊರುಗಳು ರಾಜ್ಯದಲ್ಲಿ ಹಲವಾರು ಇರಬಹುದು. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಯವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈಗ ಮಂಡಲಿ ಪಂಚಾಯತ್ ಮಾಡುವ ಉದ್ದೇಶ ಇಟ್ಟುಕೊಂಡಿದ್ದೀರಿ. ಇಂಥ ಟೌನ್ ಮುನಿಸಿಪಾಲಿಟಿಗಳನ್ನು ಮಂಡಲ್ ಪಂಚಾಯತ್ ವ್ಯಾಪ್ತಿಗೆ ಸೇರಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಸದಲಗ ಊರಿನ ಜನರು ಟ್ಯಾಕ್ಸ್ ಹಾಕಿದರೂ ಕೊಡುವುದಕ್ಕೆ ಸಿದ್ಧರಿದ್ದಾರೆ. ಆದರೆ ಅಲ್ಲಿನ ಸದಸ್ಯರು ಮಾತ್ರ ಒಪ್ಪಿಲ್ಲ. ಒಟ್ಟಿನಲ್ಲಿ ಸದಲಗ ಟೌನ್ ಮುನಿಸಿಪಾಲಿಟಿಯನ್ನು ಮಂಡಲ್ ಪಂಚಾಯತ್ ಮಾಡುವುದಕ್ಕೆ ವಿಚಾರ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಬಸವರಾಜ್ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ, ಕಾರ್ಪೊರೇಷನ್ ಹಾಗೂ ಮುನಿಸಿಪಾಲಿಟಿ ಬಗ್ಗೆ ಏನು ಬೇಡಿಕೆಯನ್ನು ಇಟ್ಟಿದ್ದಾರೆ ಆ ಬಗ್ಗೆ ನಾನು ರಾಜ್ಯ ಸರ್ಕಾರಕ್ಕೆ ಹಾಗೂ ಕೇಂದ್ರಕ್ಕೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈಗ ಎಲ್ಲರಿಗೂ ಗೊತ್ತಿರುವ ಹಾಗೆ ೧೯೭೯ರಲ್ಲಿ ಆಕ್ಟ್ರಾಯ್ ರದ್ದಾಗಿ ಅದರ ಬದಲು ಗ್ರಾಂಟ್ ಕೊಡುವುದರ ಮುಖಾಂತರ ಮುನಿಸಿಪಾಲಿಟಿಗಳಿಗೆ ಅನುದಾನ ಕೊಡತಕ್ಕ ಪದ್ಧತಿ ಜಾರಿಗೆ ಬಂದು ಆ ಪ್ರಕಾರ ಕಾಂಪನ್‌ಸೇಷನ್ ಮೂಲಕ ೨೮ ಕೋಟಿ ೯೯ ಲಕ್ಷ ರೂಪಾಯಿ ಹಾಗೂ ಡೆವಲಪ್‌ಮೆಂಟ್ ಗ್ರಾಂಟ್ಸ್ ೨ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ನಮ್ಮ ತಾಲ್ಲೂಕಿನಲ್ಲಿ ಕೆಲಸ ಕಾರ್ಯಗಳು ಆಕ್ಟ್ರಾಯ್ ಇದ್ದಾಗ ಚೆನ್ನಾಗಿ ನಡೆಯುತ್ತಿತ್ತು. ಬರತಕ್ಕ ದುಡ್ಡು ಸಾಕಾಗುತ್ತಿತ್ತು. ಹಿಂದೆ ಒಬ್ಬ ಮುನಿಸಿಪಾಲಿಟಿ ಅಧ್ಯಕ್ಷರು ೧೨ ವರ್ಷ ಪ್ರಭಾವ ರಾಜಕಾರಣಿಯಾಗಿ ಹೆಸರುವಾಸಿಯಾಗಿದ್ದ ದೊಡ್ಡ ವರ್ತಕರಾಗಿದ್ದರು. ಅವರ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಒಂದು ತಪ್ಪು ಲೆಕ್ಕಾಚಾರದಿಂದ ಎಂದರೆ ಏನು ೮–೧೦ ವರ್ಷಗಳ ಇನ್‌ಕಮ್ ಆಧಾರದ ಮೇಲೆ ಗ್ರಾಂಟ್ ಕೊಡುವ ಪದ್ಧತಿ ಮಾಡಿದರು ಅದರ ತಪ್ಪು ಲೆಕ್ಕಾಚಾರದಿಂದಾಗಿ ನಮ್ಮ ಅರಸೀಕೆರೆಗೆ ಹೆಚ್ಚು ಗ್ರಾಂಟ್ ಬರುತ್ತಾ ಇಲ್ಲ. ಉದಾಹರಣೆಗೆ ತಿಪಟೂರು, ಸಕಲೇಶಪುರದ ಪ್ರದೇಶ ನಮಗಿಂತ ಕಡಿಮೆ ಇದ್ದರೂ ಸಹ ಅವರಿಗೆ ನಮಗಿಂತಲೂ ಜಾಸ್ತಿ ಗ್ರಾಂಟ್ ಬರುತ್ತಿದೆ. ಇವತ್ತು ಆಕ್ಟ್ರಾಯ್ ನಿಂತಿರುವುದರಿಂದ ಕೆಲಸಕಾರ್ಯಗಳು ತೊಂದರೆಯಾಗಿದ್ದು ಹಿಂದೆ ಯಾವ ಆಕ್ಟ್ರಾಯ್ ಪದ್ಧತಿ ಇತ್ತು ಅದನ್ನು ಮತ್ತೆ ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಬಹು ಅಂತಸ್ತುಗಳ

ಕಟ್ಟಡಗಳ ಬಗ್ಗೆ ಬಾಂಬೆಯಲ್ಲಿ ಏನು ಬೈಲಾವನ್ನು ಅನುಸರಿಸುತ್ತಾ ಇದ್ದಾರೆ ಅದೇ ರೀತಿ ನಮ್ಮಲ್ಲೂ ಅನುಸರಿಸಿದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಮೂರು ದಿವಸಗಳ ಹಿಂದೆ ಕಪಾಲಿ ಚಿತ್ರಮಂದಿರದ ಪಕ್ಕ ಆದಂತಹ ದುರಂತಗಳು ಹೆಚ್ಚಾದೀತು ಎಂದು ನಾನು ಹೇಳಲು ಬಯಸುತ್ತೇನೆ. ಹಾಗೂ ಬಹು ಅಂತಸ್ತುಗಳನ್ನು ಕಟ್ಟುವ ಬಗ್ಗೆ ಎಸ್ಟಿಮೇಟ್ ಹಾಗೂ ಇನ್ನಿತರ ಕಾರ್ಯಗಳಿಗಾಗಿ ತಿಳಿದು ಬರಲು ನಮ್ಮ ತಂತ್ರಜ್ಞರನ್ನು ಬಾಂಬೆ, ಡೆಲ್ಲಿ ಮುಂತಾದ ಕಡೆ ಹಾಗೂ ಹೊರ ದೇಶಗಳಿಗೂ ಕಳುಹಿಸಿ ತಿಳಿದುಕೊಂಡು ಬರಲು ಅನುವು ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಸುಮಾರು ೧ ಕೋಟಿ ೩೦ ಲಕ್ಷ ಜನ ಪಟ್ಟಣ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ. ಅವರಲ್ಲಿ ಬಹುಪಾಲು ಜನರು ಬಡವರು ಹಾಗೂ ಮಧ್ಯಮ ವರ್ಗದವರಾಗಿದ್ದಾರೆ. ಇವರಲ್ಲಿ ಶ್ರೀಮಂತ ವರ್ಗದವರು ಬಹಳ ಕಡಿಮೆ ಇದ್ದಾರೆ. ಆದ್ದರಿಂದ ಈ ಮಧ್ಯಮ ಹಾಗೂ ಬಡ ವರ್ಗದವರು ಏನು ಇದ್ದಾರೆ ಅವರಿಗೆ ನಾಗರೀಕ ಸೌಲಭ್ಯ ಒದಗಿಸುವ ಒಂದು ಪರಿಪಕ್ವವಾದ ಕಟ್ಟುನಿಟ್ಟಾದ ಕಾನೂನನ್ನು ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇನ್ನು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ವತಿಯಿಂದ ಸಮರ್ಪಕವಾದ ತಾಲ್ಲೂಕುವಾರು, ಜಿಲ್ಲಾವಾರು ಕೆಲಸ ಕಾರ್ಯಗಳು ಆಗುತ್ತಾ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ತಾಲ್ಲೂಕಿನ ಅರಸೀಕೆರೆಯಲ್ಲಿ ಸುಮಾರು ೩ ಪ್ರದೇಶಗಳು ಸ್ಲಮ್ ಎಂದು ಪ್ರೈಮರಿ ನೋಟಿಫಿಕೇಷನ್ ಆಗಿದ್ದು ಇನ್ನೂ ಫೈನಲ್ ನೋಟಿಫಿಕೇಷನ್ ಆಗಿಲ್ಲ. ಆದ್ದರಿಂದ ಏನು ಸ್ಲಮ್‌ಗಳು ಇವೆ ಅವನ್ನು ಡಿಕ್ಲೇರ್ ಮಾಡಿ ಅಲ್ಲಿನ ಜನರಿಗೆ ಏನು ಸೌಕರ್ಯಗಳನ್ನು ಒದಗಿಸಬೇಕು ಆ ಬಗ್ಗೆ ಪರಿಪಕ್ವವಾದ ಕಟ್ಟುನಿಟ್ಟಾದ ಕಾನೂನನ್ನು ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇನ್ನು ನಮ್ಮ ಅರಸಿಕೆರೆಯಲ್ಲಿ ಸುಮಾರು ೩೦ರಿಂದ ೩೫ ಸಾವಿರ ಜನಸಂಖ್ಯೆ ಇದೆ. ಸುಮಾರು ಒಂದೂವರೆ ವರ್ಷಗಳ ಹಿಂದೆ ಜೀವವಿಮೆಯವರಿಂದ ಸಾಲ ಪಡೆದು ಕುಡಿಯುವ ನೀರಿನ, ಒಳಚರಂಡಿ ವ್ಯವಸ್ಥೆಯನ್ನು ಅರಸೀಕೆರೆ ಮುನಿಸಿಪಾಲಿಟಿಯವರು ಸರಿಪಡಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದರೂ ಸಹ ನನ್ನ ಅನುಭವದಲ್ಲಿ ಹೇಳುವುದಾದರೆ, ಅರಸೀಕೆರೆಯಲ್ಲಿ ಕುಡಿಯುವ ನೀರು ಆರೋಗ್ಯ ದೃಷ್ಟಿಯಿಂದ ಒಳ್ಳೆಯ ನೀರು ಆಗಿಲ್ಲ. ಅದು ಉಪ್ಪು ನೀರು ಇದೆ. ಈ ಬಗ್ಗೆ ತಜ್ಞರು ಹೋಗಿ ನೋಡಿ ಬಂದಿದ್ದಾರೆ. ಆದುದರಿಂದ ಈಗ ಹಾಸನ ಜಿಲ್ಲೆಯಲ್ಲಿ ಯಗಚಿ ಹೊಳೆ ಪ್ರಾಜೆಕ್ಟ್ ಏನು ಮಾಡಲು ೩೩ ಕೋಟಿ ರೂಪಾಯಿ ಕೊಟ್ಟಿದ್ದೀರಿ ಆ ಒಂದು ಯೋಜನೆಯು ಪೂರ್ಣಗೊಂಡಾಗ ಅರಸೀಕೆರೆಗೆ ಅದರಿಂದ ಕುಡಿಯುವ ನೀರು ಸಿಗಲು ಅನುಕೂಲವಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಲೋಕೋಪಯೋಗಿ ಮಂತ್ರಿಗಳಿಗೆ ಶಿಫಾರಸ್ಸು ಮಾಡಿ ಆ ಯಗಚಿ ಹೊಳೆ ಪ್ರಾಜೆಕ್ಟ್ ಬೇಗ ಮುಗಿಸುವ ಬಗ್ಗೆ ಮಾಡಬೇಕು. ಇನ್ನು ಅರಸೀಕೆರೆಯಲ್ಲಿ ಇರುವ ಮುನಿಸಿಪಲ್ ಆಸ್ಪತ್ರೆಯ ಖರ್ಚುವೆಚ್ಚಗಳನ್ನು ಮುನಿಸಿಪಾಲಿಟಿಯ ಖರ್ಚಿನಲ್ಲಿ ನೋಡಿಕೊಳ್ಳಬೇಕಾಗಿದೆ. ಇದಕ್ಕೆ ಸರ್ಕಾರದ ಗ್ರಾಂಟ್ ಸಿಗುತ್ತಿಲ್ಲ. ಆದ್ದರಿಂದ ದಯಮಾಡಿ ಈ ಆಸ್ಪತ್ರೆಯನ್ನು ಸರ್ಕಾರವೇ ವಹಿಸಿಕೊಂಡರೆ ಅಲ್ಲಿನ ಪುರೋಭಿವೃದ್ಧಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನು ಬೆಂಗಳೂರು ಬಿ.ಡಿ.ಎ. ಬಗ್ಗೆ ಸಮಗ್ರ ವಿಚಾರ ಮಾಡಿ ಅದರ ಬಗ್ಗೆ ಶ್ವೇತಪತ್ರವನ್ನು ಮಂಡಿಸುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಿಂದಿನ ಅಧಿವೇಶನದಲ್ಲಿ ಹೇಳಿದ್ದು ಅದನ್ನು ಇನ್ನೂ ಮಂಡಿಸಿಲ್ಲವಾದ್ದರಿಂದ ಆದಷ್ಟು ಬೇಗ ಇವನ್ನು ಮಂಡಿಸಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ್).—ಅಧ್ಯಕ್ಷರೇ, ನಾನು ೩೧, ೩೨ ೨೬ ಡಿಮ್ಯಾಂಡ್ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ಈ ಮುನಿಸಿಪಲ್ ಅರ್ಬನ್ ಡೆವಲಪ್‌ಮೆಂಟ್ ಇದರಲ್ಲಿ ೨೪೫ ಸಂಸ್ಥೆಗಳು ಇವೆ. ಸಿಟಿ ಮುನಿಸಿಪಲ್ ಕಾರ್ಪೊರೇಷನ್ ೬. ಮುನಿಸಿಪಲ್ ಕೌನ್ಸಿಲ್ ೧೩, ಟೌನ್ ಮುನಿಸಿಪಲ್ ಕೌನ್ಸಿಲ್ ೨೧೫, ನೋಟಿಫೈಡ್ ಏರಿಯಾ ೧೫ ಹೀಗೆ ಒಟ್ಟು ೨೪೫ ಸಂಸ್ಥೆಗಳು ಇವೆ. ೩೫ ವರ್ಷದಲ್ಲಿ ಏನಾದರೂ ಒಂದು ಹೆಚ್ಚಿನ ಬೆಳವಣಿಗೆ ಆಗಿದ್ದರೆ, ಈ ಅರ್ಬನ್ ಸೆಂಟರ್ಸ್‌ನಲ್ಲಿ ಆಗಿದೆ ಎಂಬುದು ಎಲ್ಲರ ಅನುಭವ. ಆದ್ದರಿಂದ, ಈ ಅರ್ಬನ್ ಕೇಂದ್ರದಲ್ಲಿ, ನಮ್ಮ ದೇಶದ ಬೆಳವಣಿಗೆ, ಅದೆಲ್ಲಾ ಕೇಂದ್ರೀಕರಣವಾಗಿರುವಾಗ ಇವರ ಒಂದು ಪಾಲು ಆಡಳಿತವನ್ನು ನಡೆಸುವಂಥ ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಬರುತ್ತದೆಯೋ ಎಂದು ನೋಡಿದರೆ ಖಂಡಿತ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಾಗಿ ಬರುತ್ತಿಲ್ಲ. ಇನ್ನು ಇದರಲ್ಲಿ ಇನ್‌ಕಮ್ ಹೇಳಿದರು. ಮುನಿಸಿಪಲ್ ಫೈನಾನ್ಸ್ ಎಂದು ಹೇಳುವಾಗ, ಪ್ರಾಪರ್ಟಿ ಟ್ಯಾಕ್ಸ್ ಅಂಡ್ ಡ್ಯೂಟಿ ಆನ್ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟೀಸ್ ಎಂದು ಇದೆ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಪ್ರಾಪರ್ಟಿ ಟ್ಯಾಕ್ಸ್ ಅದಷ್ಟು ಸರಿಯಾಗಿ ವಸೂಲಾಗುತ್ತಿಲ್ಲ. ಯಾರಿಗೆ ನಿಜವಾಗಿ ಡೆವಲಪ್‌ಮೆಂಟ್ ಫಲವಾಗಿ ಪ್ರಾಪರ್ಟಿ ಹೆಚ್ಚಾಗಿದೆಯೋ, ಇನ್‌ಕಮ್ ಹೆಚ್ಚಾಗಿದೆಯೋ, ಅದು ಇನ್ನೂ ಸರಿಯಾಗಿ ಟ್ಯಾಪ್ ಮಾಡಲಿಕ್ಕೆ ಅರ್ಬನ್ ಅಡ್ಮಿನಿಸ್ಟ್ರೇಷನ್‌ಗೆ ಸಾಧ್ಯವಾಗಿಲ್ಲ. ಈ ಇಲಾಖೆಯಲ್ಲಿ ಬಹಳ ಹುಷಾರಾದ ಮಂತ್ರಿಗಳು ಇದ್ದಾರೆ. ಇವರು ತೀವ್ರವಾಗಿ ಆಲೋಚನೆ ಮಾಡಬೇಕು. ಇವೊತ್ತು ಮಂಗಳೂರು ಉತ್ತಮ ಆಡಳಿತ ಮಾಡತಕ್ಕಂಥ ಕಾರ್ಪೊರೇಷನ್ ಆದರೂ ಇಲ್ಲಿ ಪೇಜ್ ನಂ. ೧೧ ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. Income and Expenditure of the Corporation during the year 1982-83 has been Rs. 259-57 lakhs and 235-56 lakhs respectively. Demand was Rs. 121-60 lakhs and the collection was Rs. 29-27 lakhs. The balance being Rs. 91-89 lakhs. ಅಂದರೆ ಅರ್ಥ ಏನು? ೧೨೧.೬ ಡಿಮ್ಯಾಂಡ್ ಇರುವಾಗ, ಕಲೆಕ್ಷನ್ ಬರೀ ೨೯.೨೭ ಅಂದರೆ, ನನ್ನ ಅಭಿಪ್ರಾಯದಲ್ಲಿ ಈ ಡಿಮ್ಯಾಂಡ್ ಕೂಡ ಕಡಿಮೆ. ಎಲ್ಲಿ ಡಿಮ್ಯಾಂಡ್ ಆಗಬೇಕೋ ಅಲ್ಲಿ ಇಲ್ಲ. ಕಲೆಕ್ಷನ್ ೨೯.೨೭ ಅಂದರೆ ಬಹಳ ಕಡಿಮೆ. ಅಡ್ಮಿನಿಸ್ಟ್ರೇಷನ್ ಹಿಡಿತದ ಬಗ್ಗೆ ಹೇಳಬೇಕೆಂದರೆ, ಅಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟಿನವರನ್ನು ಒಬ್ಬ ತಹಶೀಲ್ದಾರ್ ಗ್ರೇಡ್ ಇರುವವರನ್ನು ಹಾಕಿದರೆ ಸಾಲದು. ಅಲ್ಲಿಗೆ ವಿಶೇಷವಾದ ತರಬೇತಿಯುಳ್ಳಂಥ ಅಧಿಕಾರಿಗಳನ್ನು ಈ ಕೇಂದ್ರದಲ್ಲಿ ಹಾಕಬೇಕು. ಕಾರ್ಪೊರೇಷನ್‌ಗೆ ಮುಖ್ಯಸ್ಥ ಆಗುವಾಗ ಅವರಿಗೆ ಹೆಚ್ಚಿನ ತರಬೇತಿ ಅಗತ್ಯವಿದೆ. ಇನ್ನು ಮಂಗಳೂರು ಭಾಷೆಯಲ್ಲಿ ಹೇಳುವುದಾದರೆ ಮುನಿಸಿಪಾಲಿಟಿ ಅಂದರೆ ಎರಡು ಅರ್ಥ ಇದೆ. ಒಂದು ಅಶುದ್ಧವಾಗಿರುವುದು ಅಂದರೆ ಎಲ್ಲಾ ಕಡೆ ಕೊಳಚೆಯಾಗಿರುವುದು. ಇನ್ನೊಂದು ಅರ್ಥ ಕರಪ್ಷನ್. ಯಾವುದೇ ಮುನಿಸಿಪಾಲಿಟಿ ಆಫೀಸಿಗೆ ಹೋಗಿ ನೋಡಿದರೂ ಬೆಳಗಿನ ಸಮಯದಲ್ಲಿ ಅಲ್ಲಿ ಯಾರೂ ಇರುವುದಿಲ್ಲ. ರೂಲ್ ಪ್ರಕಾರ ಫೀಲ್ಡ್‌ನಲ್ಲಿದ್ದಾರೆಂದು ಹೇಳುತ್ತಾರೆ. ನಾನು ಮುನಿಸಿಪಲ್ ಕೌನ್ಸಿಲರ್ ಆಗಿದ್ದಾಗ ಚೆಕ್ ಮಾಡಿ ನೋಡಿದ್ದೇನೆ. ಅಲ್ಲಿ ಇನ್ಸ್‌ಪೆಕ್ಟರ್ ಯಾವ ರೀತಿ ಇರುತ್ತಾರೆ ಅಂದರೆ ಬೆಳಿಗ್ಗೆ ೬-೭ ಗಂಟೆಗೆ ಅಟೆಂಡೆನ್ಸ್ ರೋಲ್ ಕೆಳಗೆ ಸೈನ್ ಮಾಡಿ ಅಟೆಂಡೆನ್ಸ್ ತೆಗೆದುಕೊಂಡು ಬಿಟ್ಟರು ಅಂದರೆ ಅವರು ಮಧ್ಯಾಹ್ನ ೩ ಗಂಟೆಗೆ ಆಫೀಸಿಗೆ ಹೋಗುವುದು. ಕಾರ್ಮಿಕರು ಕೆಲಸ ಮಾಡುತ್ತಾರೆಯೋ, ಇಲ್ಲವೆ, ಇದನ್ನು ನೋಡುವವರು ಯಾರು? ಇವರ ಮೇಲೆ ಯಾವ ಹಿಡಿತವೂ ಇಲ್ಲ. ಆದುದರಿಂದ, ಈ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ಇನ್ನು ಹೆಲ್ತ್ ಆಫೀಸರ್ ಅಂದರೆ ಅವರಿಗೆ ಒಂದು ದೊಡ್ಡ ಗ್ರೇಡ್. ಅವರು ನಿಜವಾಗಿ ಅಡ್ಮಿನಿಸ್ಟ್ರೇಷನ್ ಬಗ್ಗೆ, ಹೆಲ್ತ್ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಾರೆಯೋ ಅಂದರೆ ಇಲ್ಲ. ಸಿಟಿಜನ್ಸ್ ಎಲ್ಲಾ ಪರಿಶ್ರಮ ತೆಗೆದುಕೊಂಡು ಅವರ ಹತ್ತಿರ ಹೋದರೆ ಕೊನೆಗೆ ಒಂದು ನೋಟೀಸ್ ಕೊಡುತ್ತಾರೆ. ಉದಾಹರಣೆಗೆ ಒಂದು ವಿಚಾರ ಹೇಳಬೇಕೆಂದರೆ, ಒಂದೂವರೆ ವರ್ಷದಿಂದ ಮಂಗಳೂರಿನಲ್ಲಿ ಒಂದು ದೊಡ್ಡ ಹೋಟಲ್ ಇದೆ, ಹೆಸರು ವಾಸಿ ಹೋಟಲ್ ಅದರ ಹೆಸರು ಹೇಳುವುದಿಲ್ಲ, ಆ ಹೋಟಲಿನಿಂದ ಹೋದಂಥ ಕಲ್ಮಶ ಬಾವಿ, ಕೆರೆಗೆ ಹೋಗುತ್ತಿತ್ತು. ಅದರ ಬಗ್ಗೆ ಸಿಟಿಜನ್ಸ್ ಪರಿಶೀಲನೆ ಮಾಡಿ, ಹೆಲ್ತ್ ಇನ್ಸ್‌ಪೆಕ್ಟರಿಗೆ ಹೇಳಿದಾಗ, ಊರಿನವರೆಲ್ಲಾ ಕಠಿಣ ಮಾತುಗಳನ್ನು ಹೇಳಿದ ಮೇಲೆ, ಇದರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ನಾವು ಹೋಟಲ್ ಬಂದ್ ಮಾಡಬೇಕಾಗುತ್ತದೆ ಎಂದು ಕಠಿಣವಾಗಿ ಹೇಳಿದಾಗ ಆಗ ಹೋಟಲಿನವರಿಗೆ ಒಂದು ನೋಟೀಸ್ ಕೊಟ್ಟರು ಅಷ್ಟೆ. ಅಂದರೆ ಇಲ್ಲಿ ಇರತಕ್ಕ ಸಿಬ್ಬಂದಿಗಳ ಮೇಲೆ ಅಡ್ಮಿನಿಸ್ಟ್ರೇಟರ್‌ಗೆ ನಿಯಂತ್ರಣ ಇಲ್ಲ. ಇನ್ನು ನಾನು ಎಂ.ಎಲ್.ಎ. ಆಗಿ ಅನುಭವ ಹೇಳಬೇಕೆಂದರೆ ಕಾರ್ಪೊರೇಷನದು ಒಂದು ಭಾಗ ನನ್ನ ಕ್ಷೇತ್ರಕ್ಕೆ ಬರುತ್ತದೆ. ಯಾವುದೇ ಒಂದು ಬೀದಿಯಲ್ಲಿ ಲೈಟು ಇಲ್ಲದಿದ್ದರೂ, ಎಲ್ಲೋ ಡ್ರೈನೇಜ್ ಪೈಪ್‌ನಲ್ಲಿ ಲೀಕ್ ಆಗುತ್ತಿದ್ದರು, ವಾಟರ್ ಪೈಪ್ ಒಡೆದು ಹೋಗಿದ್ದರೂ ಎಂ.ಎಲ್.ಎ ಆದವರು ಹೋಗಿ ಹೇಳಬೇಕಾದ ಪರಿಸ್ಥಿತಿ ಇದೆ. ನೀರು ಇಲ್ಲದೆ ಜನ ಕಷ್ಟಪಡುತ್ತಿದ್ದಾರೆ, ಎಲ್ಲಿ ನಿಜವಾಗಿ ನೀರಿನ ಏರ್ಪಾಡು ಮಾಡಲಿಕ್ಕೆ ಸಾಧ್ಯ ಇದೆ ಅಲ್ಲಿ ಪೈಪ್ ತೆಗೆದುಕೊಡುವಂತಾದ್ದು ಇಲ್ಲ. ಇವೊತ್ತು ಎಂ.ಎಲ್.ಎ. ಕಾರ್ಪೊರೇಟರ್‌ಗಳು ಇಲ್ಲದೆ ಇದ್ದರೆ ಅಡ್ಮಿನಿಸ್ಟ್ರೇಷನ್ ಇಲ್ಲ ಎನ್ನುವ ರೀತಿಯಲ್ಲಿದೆ. ಆ ರೀತಿಯಲ್ಲಿ. ಅಧಿಕಾರಿಗಳು ಇದ್ದಾರೆ. ಈ ರೀತಿ ಆಡಳಿತ ನಡೆಯುತ್ತಿರುವ ಕಡೆ ಮಾನ್ಯ ಮಂತ್ರಿಗಳು ಹೆಚ್ಚು ಗಮನಹರಿಸಬೇಕಾಗಿದೆ. ಇನ್ನು ಮುನಿಸಿಪಲ್ ಲಾರಿಗಳ ಬಗ್ಗೆ ಹೇಳಬೇಕೆಂದರೆ, ಪ್ರತಿ ತಿಂಗಳಿಗೂ ಇಷ್ಟೆಷ್ಟು ಡೀಸಲ್ ಖರ್ಚಾಗುತ್ತದೆಯೋ ವಿನಹ ಅವುಗಳ ಉಪಯೋಗ ಸರಿಯಾಗಿ ಆಗುವುದಿಲ್ಲ. ಆದ್ದರಿಂದ, ಈ ಒಂದು

ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ವಿಶೇಷವಾದ ತರಬೇತಿ ಇರತಕ್ಕವರನ್ನು ಹಾಕಬೇಕು. ಇನ್ನು ಹೌಸಿಂಗ್ ಇದರಲ್ಲಿ ಒಂದು ಒಳ್ಳೆಯ ಸ್ಕೀಮ್ ಉಂಟು. ಅದನ್ನು ಓದುವಾಗ ಬಹಳ ಸಂತೋಷ ವಾಗುತ್ತದೆ. ನನ್ನ ಅಭಿಪ್ರಾಯ ಹೇಳುವುದಾದರೆ ಈ ಸ್ಕೀಮುಗಳೆಲ್ಲಾ ಜನರಿಗೆ ಆಕರ್ಷಣೆ ಮಾಡಲಿಕ್ಕೆ, ಅವರಿಂದ ಓಟು ಪಡೆಯಲಿಕ್ಕೆ ಇದೆ ಎಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಹೌಸಿಂಗ್ ಈ ಡಿಮ್ಯಾಂಡ್‌ನಲ್ಲಿ ಬರುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಹೌಸಿಂಗ್‌ನ ಮುನ್ನಡೆ ಮಾತ್ರ ಅವರಿಗೆ ಬರುತ್ತದೆ.

ಶ್ರೀ ಪಿ. ರಾಮಚಂದ್ರರಾವ್.—ಮುನ್ನಡೆ ಸ್ಕೀಮ್ ಇದೆ, ಇದು ಪುಸ್ತಕದಲ್ಲಿದೆಯೇ ಹೊರತು ಎಲ್ಲಿಯೂ ಜಾರಿಯಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಅರ್ಬನ್ ಏರಿಯಾಸ್‌ನಲ್ಲಿ ವರ್ಕರ್ಸ್ ಇದ್ದಾರೆ. ಫ್ಯಾಕ್ಟರಿಗೆ ಹೋಗತಕ್ಕ ವರ್ಕರ್ಸ್ ಇದ್ದಾರೆ. ಮಂಗಳೂರು ಪೇಟೆಯಲ್ಲಿ ಈ ಸೆಕ್ಷನ್‌ಗೆ ಯಾವುದೇ ತರಹ ಮನೆ ಕಟ್ಟುವಂಥ ವ್ಯವಸ್ಥೆ ರೂಪದಲ್ಲಿ ಇಲ್ಲ. ಪುಸ್ತಕದಲ್ಲಿ ನೋಡಿದರೆ ಈ ಒಂದು ಸ್ಕೀಮ್ ಇರತಕ್ಕದ್ದು ಕಾಣುತ್ತದೆ. ಈ ಅಥಾರಿಟಿಯವರು ಓಟಿಗೋಸ್ಕರ ಹೆಸರು ಇಟ್ಟರೆ ಸಾಲದು. ಈ ಸ್ಕೀಮ್‌ನಿಂದ ಆ ಒಂದು ಸೆಕ್ಷನ್‌ಗೆ ಪ್ರಯೋಜನ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಧಾರವಾಡ ಮುನಿಸಿಪಲ್‌ನಲ್ಲಿ ವೀಕರ್ ಸೆಕ್ಷನ್‌ಗೆ ಕಟ್ಟಿದಂಥ ಮನೆಗಳು ಇವೆ. ಆ ಮನೆಗಳಲ್ಲಿ ವಾಸ್ತವ್ಯ ಆಗಿಲ್ಲ. ಹಣ ಖರ್ಚು ಮಾಡಿ ಕಟ್ಟಿದ ಮನೆಗಳ ವಾಸ್ತವ್ಯ ಆಗಿಲ್ಲ ಅಂದರೆ ಹೇಗೆ ? ಕುಂಭಕೋಣ ನಡೆಯುತ್ತದೆ ಅಂದರೆ, ಸರ್ಕಾರ ಭ್ರಷ್ಟಾಚಾರದ ಬಗ್ಗೆ ಹೋರಾಟ ಮಾಡುತ್ತೇವೆಂದು ಮೇಲಿಂದ ಮೇಲೆ ಹೇಳಿದರೆ ಸಾಲದು, ಆ ಭ್ರಷ್ಟಾಚಾರಕ್ಕೆ ವಿರುದ್ಧವಾಗಿ ನಡೆಯಬೇಕು. ಈ ರಾಜ್ಯದಲ್ಲಿ ಅರ್ಬನ್ ಸೆಂಟರ್‌ನಲ್ಲಿರತಕ್ಕ ಭ್ರಷ್ಟಾಚಾರವನ್ನು ತಗೆಯಲಿಕ್ಕೆ ಈ ಸರ್ಕಾರದ ಮಂತ್ರಿಗಳು, ಆಡಳಿತಗಾರರು, ತಕ್ಕ ಕ್ರಮ ತೆಗೆದುಕೊಳ್ಳಲು ಸ್ಪಷ್ಟವಾದ ನೀತಿ ನಿರೂಪಣೆ ಮಾಡಬೇಕೆಂದು ಹೇಳಿ ನಾನು ಇದಕ್ಕೆ ಬೆಂಬಲ ಕೊಟ್ಟು ಅಧ್ಯಕ್ಷರು ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫–೩೦ ಪಿ.ಎಂ.

† ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಸನ್ಮಾನ್ಯ ಸಭಾಧ್ಯಕ್ಷರೆ, ಇವೊತ್ತಿನ ದಿವಸ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳ ಮೇಲೆ ಮಾತನಾಡುತ್ತಾ ಕೇವಲ ಒಂದೆರಡು ವಿಷಯ ಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂದು ಇಚ್ಛಿಸುತ್ತೇನೆ. ಮಾನ್ಯ ಮಂತ್ರಿಗಳು ಕೇವಲ ೪.೭೦ ಕೋಟಿ ರೂ.ಗಳ ಬೇಡಿಕೆಯನ್ನು ಮಾತ್ರ ಮಂಡಿಸಿದ್ದಾರೆ. ವಾರ್ತಾ ಮತ್ತು ಪ್ರಚಾರ ಇಲಾಖೆಗೆ ೧.೭೦ ಕೋಟಿ ರೂ.ಗಳನ್ನು ಖರ್ಚುಮಾಡಿದರೆ ಇನ್ನು ಕೇವಲ ೩ ಕೋಟಿ ರೂ.ಮಾತ್ರ. ಈ ಪ್ರವಾಸೋದ್ಯಮ ಇಲಾಖೆಗೆ ಉಳಿಯುತ್ತದೆ. ಆದರೆ ಇದರಿಂದ ಯಾವುದೇ ಸಾಧನೆಯನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಒಂದು ಬೇಡಿಕೆಯನ್ನು ಒಪ್ಪುವುದು ಬಹಳ ಕಷ್ಟವಾಗುತ್ತದೆ.

ಮಾನ್ಯ ಅಧ್ಯಕ್ಷರೆ, ತಮಗೇ ಗೊತ್ತಿರುವಂತೆ ಕಳೆದ ೩೦–೪೦ ವರ್ಷಗಳ ಹಿಂದೆ ಬಹಳಷ್ಟು ಜನರು ಹೆಚ್ಚಿನ ಸಂಚಾರವನ್ನೇ ಮಾಡುತ್ತಿರಲಿಲ್ಲ. ನಮ್ಮ ಕಡೆ ಹಬ್ಬ, ಮದುವೆ, ಇಂಥ ಕಾರ್ಯ ಗಳು ನಡೆದಾಗ ಮಾತ್ರ ಆಚೀಚೆ ಹೋಗುತ್ತಿದ್ದರು. ಆದರೆ ಈಗಿನ ಪರಿಸ್ಥಿತಿ ಹಾಗೆ ಇಲ್ಲ. ಇಡೀ ವರ್ಷ ಪ್ರವಾಸ ಮಾಡತಕ್ಕವರ ಸಂಖ್ಯೆ ಹೆಚ್ಚುತ್ತಿದೆ. ಈ ಪ್ರವಾಸೋದ್ಯಮ ಖಾತೆ ಇಡೀ ವಿಶ್ವದಲ್ಲೇ ಎರಡನೇ ಸ್ಥಾನವನ್ನು ಪಡೆದಿದೆ. ಇಂಥ ಪ್ರವಾಸೋದ್ಯಮ ಖಾತೆಗೆ ಕೇವಲ ಅಲ್ಪ ಹಣವನ್ನು ಇಟ್ಟುಕೊಂಡು ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಾದರೆ ಇದರಿಂದ ಏನು ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಹರ್ಮನ್ ಸಾ ಎನ್ನುವ ಒಬ್ಬ ಭವಿಷ್ಯವನ್ನು ಹೇಳುವವರು ಇದ್ದರು. ಅವರು ಕಾಲಜ್ಞಾನವನ್ನು ಹೇಳಿದ್ದಾರೆ. ಸದರನ್ ಸ್ಟೇಟ್ಸ್‌ನಲ್ಲಿ ಈ ಪ್ರವಾಸೋದ್ಯಮವು ವಿಶ್ವದಲ್ಲೇ ಅತಿ ದೊಡ್ಡ ಉದ್ಯಮವಾಗುತ್ತದೆಂದು ಹೇಳಿದ್ದಾರೆ. ಹಾಗಿರುವಾಗ ತಾವು ಇಷ್ಟು ಸಣ್ಣ ಪ್ರಮಾಣದಲ್ಲಿ ಹಣವನ್ನು ಇಟ್ಟುಕೊಂಡು ಯೋಜನೆಗಳನ್ನು ಹಾಕುತ್ತಾ ಹೋದರೆ ಸಾಧ್ಯವಾಗುತ್ತದೆಯೇ ? ಟೂರಿಸಂ ಎಂದರೆ ಆಕಾಶ ಮತ್ತು ಅದರ ಅಂತ್ಯ For Tourism,

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದ ಸೂಚಿಸುತ್ತದೆ.

there is no limit, other than the sky. Sky is the limit for Tourism. ಹೀಗಿರಬೇಕಾದರೆ ಕೇವಲ ಸ್ವಲ್ಪ ಹಣವನ್ನು ಇಟ್ಟುಕೊಂಡು ಏನು ಸಾಧನೆಯನ್ನು ಮಾಡುತ್ತೀರಿ ? ಇದನ್ನು ಇನ್ನೂ ಹೆಚ್ಚು ಮಾಡಬೇಕು. Modern Tourism requires great ability, aptitude, and great vision. ಅದು ಬೇಕಾಗುತ್ತದೆ. ಆಮೇಲೆ ಗ್ರೇಟ್ ವಿಜಿಲ್ ಇರಬೇಕಾಗುತ್ತದೆ. ಅದು ಇದ್ದರೆ ಮಾತ್ರ ಪ್ರವಾಸೋದ್ಯಮ ಸಕ್ಸಸ್‌ಫುಲ್ ಆಗುತ್ತದೆ ಇಲ್ಲದಿದ್ದರೆ ಆಗುವುದಿಲ್ಲ. ಇವತ್ತು ಅನೇಕ ಕಡೆ ಪ್ರವಾಸೋದ್ಯಮ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಆದರೆ ಎಷ್ಟೋ ಕಡೆ ಪ್ರವಾಸಿಗಳು ಹೋಗಿಬರಲು ಸಾಧ್ಯವೇ ಇಲ್ಲದಂಥ ರಸ್ತೆಗಳಿವೆ. ಅಲ್ಲಿಗೆ ಹೋಗುವ ಮನಸ್ಸು ಪ್ರವಾಸಿಗಳಿಗೆ ಇದ್ದರೂ ರಸ್ತೆಗಳು ಚೆನ್ನಾಗಿಲ್ಲದಿರುವುದರಿಂದ ಅವರು ಹೋಗುವುದಿಲ್ಲ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಇಂಥ ರಸ್ತೆಗಳನ್ನು ದುರಸ್ತಿ ಮಾಡುವ ಕಾರ್ಯವನ್ನು ಕೈಗೊಳ್ಳುವುದು ಸೂಕ್ತ. ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ವೆಸ್ಟರ್ನ ಘಾಟ್ ಸ್ಕೀಂನಲ್ಲಿ ೨೨.೩೫ ಲಕ್ಷ ರೂ. ಇಟ್ಟುಕೊಂಡಿದ್ದೀರಿ. ಆದ್ದರಿಂದ ಈ ಕಾರ್ಯಕ್ರಮವನ್ನು ತಾವು ತೀವ್ರಗೊಳಿಸಬೇಕು. ತಾವು ಇಡೀ ಮಲೆನಾಡು ಪ್ರದೇಶವನ್ನೇ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುತ್ತೇವೆಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಇದಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಇದೆ. ನಮ್ಮ ಕೊಡಗು ಜಿಲ್ಲೆ ಅತ್ಯಂತ ಸೂಕ್ತವಾದ ಸ್ಥಳ ಪಂಜೆ ಮಂಗೇಶರಾಯರು ನಮ್ಮ ಕೊಡಗಿನ ಸೌಂದರ್ಯವನ್ನು ವರ್ಣಿಸುವಾಗ ''ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ, ಅಲ್ಲಿ ಆ ಕಡೆ ನೋಡಲಾ, ಅಲ್ಲಿ ಕೊಡಗರ ಬೀಡೆಲಾ'' ಎಂದು ಹಾಡಿದ್ದಾರೆ. ಅಲ್ಲಿ ಅಂಥ ಒಂದು ಪ್ರಕೃತಿ ಸಂಪತ್ತು ಇದೆ. ನಮ್ಮ ಕೊಡಗಿನ ಸೊಬಗನ್ನು ನೋಡಬೇಕಾದರೆ ನಡೆದು ನೋಡಬೇಕೆಂದು ಹೇಳುತ್ತಾರೆ. ತಾವು ಕೊಡಗಿನ ಕಡೆ ಯಾವಾಗಲಾದರೂ ಬಂದರೆ ನೋಡಿ. ಅಲ್ಲಿಗೆ ಅನೇಕ ಪ್ರವಾಸಿಗಳು ಬರುತ್ತಾರೆ. ಅಲ್ಲಿ ಪ್ರವಾಸಿಗಳ ಮಾಹಿತಿ ಕೇಂದ್ರ ಕೂಡ ಇದೆ. ಅಲ್ಲಿ ಹೋಟೆಲ್ ವ್ಯಾಲಿ ಎಂದು ಇದೆ. ಇದನ್ನು ಪ್ರವಾಸಿಗರು ಹುಡುಕಿಕೊಂಡು ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಈಗ ಈ ಪ್ರವಾಸೋದ್ಯಮ ಕೇಂದ್ರವನ್ನು ಊರಿನಲ್ಲಿರತಕ್ಕ ಟಿ.ಬಿ.ಗೆ ವರ್ಗಾಯಿಸಬೇಕಾದರೆ ಕನಿಷ್ಟ ೧೦ ಲಕ್ಷ ರೂ. ಖರ್ಚಾಗುತ್ತದೆ. ವ್ಯಾಲಿ ಹೋಟೆಲ್ ಹಿಂಭಾಗದಲ್ಲಿ ೨ ಬೆಟ್ಟಗಳಿವೆ, ನಡುವೆ ಕಡಿದಾದ ಕಣಿವೆ ಇದೆ. ಆ ಬೆಟ್ಟಕ್ಕೆ ಒಂದು ರೋಪ್‌ವೇ ಮಾಡಿಸಬೇಕು. ಸಿನಿಮಾದಲ್ಲಿ ತೋರಿಸುವಂತೆ ಇದಕ್ಕೂ ಮಾಡಿಸಬೇಕು. ಅಲ್ಲಿ ರೋಪ್‌ವೇ ಹಾಕಿದರೆ ಸತತವಾಗಿ ಪ್ರವಾಸಿಗರು ಬರುತ್ತಾರೆ. ಅದು ಒಳ್ಳೆಯ ಆಕರ್ಷಣೀಯ ಸ್ಥಳವಾಗುತ್ತದೆ, ಬಹಳ ಸುಂದರವಾದ ಸ್ಥಳವಾಗಿದ್ದು ೨ ತಿಂಗಳ ಮಳೆಗಾಲವನ್ನು ಬಿಟ್ಟರೆ ಉಳಿದ ತಿಂಗಳಲ್ಲಿ ಪ್ರವಾಸಿಗರು ಒಂದು ದಿವಸ ಇದ್ದು ಹೋಗಲು ಬಂದವರು ಒಂದು ತಿಂಗಳವರೆಗೂ ಇದ್ದು ಹೋಗುತ್ತಾರೆ. ಅಂತರರಾಷ್ಟ್ರೀಯ ಪ್ರವಾಸಿಗರು ಒಂದು ವಾರ ಕಾಲ ಇದ್ದು ಹೋಗಲು ಬಂದವರು ತಿಂಗಳುಗಟ್ಟಲೆ ಇದ್ದು ಹೋಗಿದ್ದಾರೆ. ಅಂಥ ಒಂದು ಪ್ರಕೃತಿ ಸೌಂದರ್ಯದ ತಾಣ ಇದು. ಇನ್ನು ಮಡಕೇರಿಗೆ ಕೇವಲ ೭ ಕಿ.ಮೀ. ದೂರದಲ್ಲಿ ಅಬ್ಬಿ ಫಾಲ್ಸ್ ಎಂದು ಇದೆ. ಇದೂ ಕೂಡ ಸುಂದರ ತಾಣ. ಸುಮಾರು ೫೦-೬೦ ಅಡಿ ಎತ್ತರದಿಂದ ನೀರು ಬೀಳುತ್ತದೆ. ಸುತ್ತಲೂ ಏಲಕ್ಕಿ ತೋಟ ಇವೆ. ಅರಣ್ಯ ಇದೆ, ಬೆಟ್ಟ ಇದೆ, ಅಲ್ಲಿ ಒಂದು ಸಣ್ಣ ಕುಟೀರವನ್ನು ಕಟ್ಟಿ ಬರತಕ್ಕ ಪ್ರವಾಸಿಗರಿಗೆ ಊಟ ಮತ್ತು ವಸತಿಗೆ ವ್ಯವಸ್ಥೆ ಮಾಡಬೇಕು. ಹಿಂದಿನ ರಾಜ್ಯಪಾಲರಾಗಿದ್ದ ಧರ್ಮವೀರ ಅವರು ಅಲ್ಲಿಗೆ ಬಂದಿದ್ದಾಗ ಸಿಮೆಂಟ್ ಮೆಟ್ಟಲನ್ನು ಕಟ್ಟಿಸಿದರು. ಆದರೆ ಆ ಸ್ಥಳ ಇವತ್ತಿನವರೆಗೂ ಅಭಿವೃದ್ಧಿ ಆಗಿಲ್ಲ. ತಾವು ಇದನ್ನು ಅಭಿವೃದ್ಧಿ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಅದೇರೀತಿ ಭಾಗಮಂಡಲದಲ್ಲಿ ತಲಕಾವೇರಿಯಲ್ಲಿ ಒಂದು ಟಿ.ಬಿ. ಕೂಡ ಇದೆ. ಇದು ಲೋಕೋಪಯೋಗಿ ಇಲಾಖೆಗೆ ಸೇರಿದ್ದು. ಆದರೆ ಇದನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಇದು ಇನ್ನೇನು ಕುಸಿದು ಬೀಳುವ ಪರಿಸ್ಥಿತಿಗೆ ಬಂದಿದೆ. ಇದನ್ನು ಪ್ರವಾಸೋದ್ಯಮ ಇಲಾಖೆಯವರು ತೆಗೆದುಕೊಂಡು ದುರಸ್ತಿ ಮಾಡಿಸಿದರೆ ಇಲ್ಲಿಗೆ ಹೆಚ್ಚಿನ ಪ್ರವಾಸಿಗಳು ಬರುತ್ತಾರೆ. ಇಲ್ಲಿಯೂ ಕೂಡ ಒಂದು ಪ್ರವಾಸೀ ಕೇಂದ್ರವನ್ನು ಮಾಡಿ ಪ್ರವಾಸಿಗರಿಗೆ ಊಟ, ವಸತಿಗೆ ವ್ಯವಸ್ಥೆ ಮಾಡಬೇಕು. ಇದೇರೀತಿ ವಿರಾಜಪೇಟೆಯಲ್ಲಿ ಇರ್ಪು ಎಂದು ಇದೆ. ಅಲ್ಲಿ ೬೦-೭೦ ಅಡಿ ಎತ್ತರದ ಜಲಪಾತ ಒಂದು ಇದೆ. ಅದು ನೋಡಲು ಬಹಳ ರಮಣೀಯವಾಗಿದೆ. ಅದರ ಪಕ್ಕದಲ್ಲೇ ಹನುಮನ ಬೆಟ್ಟ ಎಂದು ಇದೆ. ಇದಕ್ಕೆ ಈ ಹೆಸರು ಬರಬೇಕಾದರೆ ಒಂದು ಹಿನ್ನೆಲೆ ಇದೆ. ಆ ಬೆಟ್ಟದ ಸುತ್ತ ಹನುಮಂತನು ಬಾಲವನ್ನು ಸುತ್ತಿಕೊಂಡಿರುವಂತೆ ಕಾಣುತ್ತದೆ. ಇದನ್ನೂ ಕೂಡ ಒಂದು ಪ್ರವಾಸೀ ಕೇಂದ್ರವನ್ನಾಗಿ ಮಾಡಬೇಕೆಂದು ಹೇಳಬಯಸುತ್ತೇನೆ. ಮಡಕೇರಿ ತಾಲ್ಲೂಕಿನಲ್ಲಿ ಬಾಯಿಚಪ್ಪೆ ಎನ್ನುವ ಒಂದು ಜಾಗ ಇದೆ. ಆ ಜಾಗದಲ್ಲಿ ಕೂಡ ಒಂದು ಪ್ರವಾಸಿ ಕೇಂದ್ರವನ್ನು ತೆರೆಯಬೇಕು. ತಾವು ಎಲ್ಲೆಲ್ಲಿ ಪ್ರವಾಸಿ ಕೇಂದ್ರ

ಗಳನ್ನು ಮಾಡುತ್ತೀರಿ ಅಲ್ಲಿಲ್ಲಾ ಖಾಸಗಿ ವ್ಯಕ್ತಿಗಳಿಗಾಗಲೀ ಅಥವಾ ಸಹಕಾರಿ ಇಲಾಖೆಗೆ ಆಗಲಿ ಅಥವಾ ಬೇರೆಯವರಾಗಲಿ ಹೋಟೆಲ್‌ಗಳನ್ನು ನಡೆಸುವುದಕ್ಕೆ, ವಸತಿ ಗೃಹಗಳನ್ನು ಕಟ್ಟಲಿಕ್ಕೆ ಬಹಳ ಕಡಿಮೆ ಬಡ್ಡಿಯಿಂದ ಅಥವಾ ರಿಯಾಯಿತಿ ಬಡ್ಡಿಯಿಂದ ಸಾಲವನ್ನು ಕೊಟ್ಟರೆ ಖಂಡಿತವಾಗಿಯೂ ಪ್ರವಾಸಿಗರಿಗೆ ಬೇಕಾದಂಥ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ ದೊಡ್ಡ ದೊಡ್ಡ ಸ್ಟಾರ್ ಹೋಟೆಲ್‌ಗಳನ್ನು ಕಟ್ಟುವುದಕ್ಕೆ ಬದಲು ಸಣ್ಣ ಸಣ್ಣ ರೂಮುಗಳನ್ನು ಕಟ್ಟಿ ದಿವಸಕ್ಕೆ ೫–೬ ರೂ. ಬಾಡಿಗೆಗೆ ಸಿಕ್ಕುವಂತೆ ಮಾಡಿದರೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂದು ಹೋಗುವುದಕ್ಕೆ ಇಷ್ಟಪಡುತ್ತಾರೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರವನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲಿ ಖೆಡ್ಡಾ ಆಪರೇಷನ್ ಮಾಡಿದ್ದಾರೆ. ಅಲ್ಲಿ ಸುಮಾರು ೩೬ ಸಾರಿ ಖೆಡ್ಡಾ ಆಪರೇಷನ್ ಮಾಡಿದ್ದಾರೆ. ಇದು ಬಹಳ ದಿವಸಗಳಿಂದಲೂ ನಡೆದುಕೊಂಡು ಬರುತ್ತಿದೆ. ಈ ಸಂದರ್ಭದಲ್ಲಿ ಸತ್ತ ಆನೆಗಳ ಸಂಖ್ಯೆ ಸುಮಾರು ೨೮೬. ಪ್ರವಾಸಿಗರು ಈ ಸ್ಥಳವನ್ನು ನೋಡಲು ಅನುಕೂಲವಾಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಇನ್ನು ಕೆ ಆರ್. ನಗರ ತಾಲ್ಲೂಕಿನಲ್ಲಿ ಚುಂಚನಕಟ್ಟೆ ಎಂದು ಇದೆ. ಅಲ್ಲಿ ಬಹಳ ದೊಡ್ಡ ದನಗಳ ಜಾತ್ರೆ ನಡೆಯುತ್ತದೆ. ಅಲ್ಲಿಗೆ ಸುಮಾರು ೪೦–೫೦ ಸಾವಿರ ದನಗಳ ಬರುತ್ತವೆ. ಜನಗಳೂ ಕೂಡ ಸುಮಾರು ೧ ಲಕ್ಷದಷ್ಟು ಸೇರುತ್ತಾರೆ. ಅಲ್ಲಿ ತಲಕಾವೇರಿ ನದಿ ಬಹಳ ವಿಶಾಲವಾಗಿ ಹರಿಯುತ್ತದೆ. ಈ ಸ್ಥಳವನ್ನೂ ಕೂಡ ಪ್ರವಾಸಿಗರಿಗೋಸ್ಕರ ಅಭಿವೃದ್ಧಿ ಮಾಡಬೇಕು.

ಸ್ವಾಮಿ, ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ಪತ್ರಿಕಾ ವಿಭಾಗವೆಂದು ಒಂದು ವಿಭಾಗವಿರುತ್ತದೆ. ಕಳೆದ ಸಾಲಿನಲ್ಲಿ ನಾವು ೫೭೩೩ ಪತ್ರಿಕಾ ಪ್ರಕಟಣೆ ಅಂದರೆ ಪ್ರೆಸ್ ಕಟಿಂಗ್ಸ್‌ನ್ನು ಎಲ್ಲ ಮಂತ್ರಿಗಳಿಗೂ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೂ ಕಳುಹಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಕಳುಹಿಸಿಕೊಟ್ಟ ಮಾತ್ರಕ್ಕೆ ಏನೂ ಅದರ ಉಪಯೋಗವಾದಂತಾಗುವುದಿಲ್ಲ. ಸರ್ಕಾರದವರು ಏನು ರೆಕಮೆಂಡೇಶನ್ಸ್ ಮಾಡಿದ್ದಾರೆ, ಅದರ ಬಗ್ಗೆ ಪರಿಹಾರ ಏನು ಕೊಟ್ಟಿರುತ್ತಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪ್ರೆಸ್ ಪೀಪಲ್ಸ್‌ನ್ನು ಈ ಇಲಾಖೆಯವರು ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಾರೆ. ಜಿಲ್ಲೆಗಳಲ್ಲಿ ಅಗ್ರಿಕಲ್ಚರ್ ಪ್ರೊಡಕ್ಷನ್ ಬಗ್ಗೆ ವಿಶೇಷ ಮಾಹಿತಿಯನ್ನು ಹೊಂದಲು ಹನ್ನೆರಡು ಬಾರಿ ಪ್ರವಾಸವನ್ನು ಏರ್ಪಾಡು ಮಾಡಿದ್ದೇವೆಂದು ಹೇಳಿರುತ್ತಾರೆ. ಕೊಡಗು ಜಿಲ್ಲೆಗೂ ಪ್ರವಾಸವನ್ನು ಕೈಗೊಂಡಿದ್ದರು ಎಂದೂ ಕೂಡ ಹೇಳಿರುತ್ತಾರೆ. ಕೊಡಗು ಜಿಲ್ಲೆಯಲ್ಲಿ ಏನು ನೋಡುತ್ತಾರೆ? ಅದರ ಬದಲಾಗಿ ಜಿಲ್ಲೆಯ ಹೊರಗೆ, ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಪ್ರವಾಸವನ್ನು ಕೈಗೊಂಡರೆ ಬಹಳ ಒಳ್ಳೆಯದು. ಅದಕ್ಕೆ ಬೇಕಾದ ಹಣವನ್ನು ಒದಗಿಸತಕ್ಕಂಥ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಪ್ರಕಟಣೆಯ ವಿಷಯದಲ್ಲಿ ಹೇಳುವುದಾದರೆ ಸರ್ಕಾರದ ಎಲ್ಲಾ ಪ್ರಕಟಣೆಗಳು ಜನತೆಗೆ ಸಕಾಲದಲ್ಲಿ ಮುಟ್ಟುವಂಥ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರದ ಪ್ರಕಟಣೆಗಳಾದ ಜನಪದ, ಕರ್ನಾಟಕ ವಿಕಾಸ, ಮಾರ್ಚ್ ಆಫ್ ಇಂಡಿಯಾ. ಇದೆಲ್ಲ ಇಲಾಖೆಯ ಪ್ರಕಟಣೆಗಳು ಸಕಾಲದಲ್ಲಿ ಜನತೆಯ ಕೈಸೇರುವಂಥ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಬೇಕಾದಂಥ ಸಹಕಾರ ಯಾರು ಬಹಳಷ್ಟು ನುರಿತ ಪತ್ರಿಕಾ ಕರ್ತರು ಇರುತ್ತಾರೋ ಅಂಥವರಿಂದ ತೆಗೆದುಕೊಂಡರೆ ಇದರಿಂದ ಪ್ರಯೋಜನವಾಗುತ್ತದೆ.

ಇನ್ನು ಕ್ಷೇತ್ರ ಪ್ರಚಾರದ ವಿಷಯವನ್ನು ತೆಗೆದುಕೊಂಡರೆ ಎರಡು ಲಕ್ಷಕ್ಕೂ ಹೆಚ್ಚು ಕ್ಷೇತ್ರ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕೆಂದಿದ್ದು ಇದರಲ್ಲಿ ೫ ಸಾವಿರ ಕ್ಷೇತ್ರ ಪ್ರಚಾರಕಾರ್ಯವನ್ನು ನಡೆಸಿರುತ್ತಾರೆ. ಇದರಿಂದ ಗುರಿಯನ್ನು ಮುಟ್ಟಿದಂತಾಗಲಿಲ್ಲ. ಆದ್ದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕ್ಷೇತ್ರ ಪ್ರಚಾರವನ್ನು ಕೈಗೊಂಡಿದ್ದರೆ ಅದರಿಂದ ಪ್ರಯೋಜನವಾಗುತ್ತಿತ್ತೆಂದು ಹೇಳುತ್ತೇನೆ.

ಮತ್ತೆ ಇಲಾಖೆಯಲ್ಲಿ ಬಹಳವಾಗಿ ಹುದ್ದೆಗಳು ಖಾಲಿ ಇವೆ. ಮುಖ್ಯಾಧಿಕಾರಿಗಳಾಗಿ ಈ ಇಲಾಖೆಯಲ್ಲಿ ಐ. ಪಿ. ಎಸ್. ಆಫೀಸರ್ಸ್‌ನ್ನು ಹಾಕಿರುತ್ತಾರೆ. ಬಹುತೇಕ ಇಲಾಖೆಯಲ್ಲಿಯೇ ನುರಿತಂತಹ ಅಧಿಕಾರಿಗಳನ್ನು, ಅನುಭವ ಇರತಕ್ಕಂಥ ಅಧಿಕಾರಿಗಳನ್ನು ನೇಮಿಸಿದ್ದರೆ ಹೆಚ್ಚಿನ ಕಾರ್ಯವನ್ನು ಮಾಡಲು ಅನುಕೂಲವಾಗುತ್ತಿತ್ತು. ಇಲಾಖೆಯಲ್ಲಿ ಡೆಪ್ಯುಟಿ ಡೈರೆಕ್ಟರ್ ಹುದ್ದೆ ಮತ್ತು ಜಿಲ್ಲಾ ವಾರ್ತಾಧಿಕಾರಿಗಳ ಹುದ್ದೆಗಳು ಬಹಳಷ್ಟು ಖಾಲಿ ಇದೆ. ತಹಸೀಲ್‌ದಾರರುಗಳನ್ನು ಅಸಿಸ್ಟೆಂಟ್ ಪಬ್ಲಿಸಿಟಿ ಆಫೀಸರನ್ನಾಗಿ ನೇಮಕ ಮಾಡಿರುತ್ತೀರಿ. ತಹಸೀಲ್‌ದಾರರಿಗೆ ವಾರ್ತಾ

ಪ್ರಚಾರದ ಅನುಭವ ಇರುವುದಿಲ್ಲ. ಆದ್ದರಿಂದ ಅನುಭವ ಇರತಕ್ಕಂಥ ವಾರ್ತಾಧಿಕಾರಿಗಳನ್ನು ಪ್ರಚಾರಾಧಿಕಾರಿಗಳನ್ನಾಗಿ ನೇಮಿಸಿದರೆ ಅವರು ಉತ್ತಮವಾದ ಕಾರ್ಯವನ್ನು ಮಾಡಲು ಸಾಧ್ಯವಾಗುತ್ತದೆ. ಏತಕ್ಕೆಂದರೆ ಅವರು ಗ್ರಾಮ ಮಟ್ಟಗಳಲ್ಲಿ, ತಾಲ್ಲೂಕು ಮಟ್ಟಗಳಲ್ಲಿ ಸರ್ಕಾರದವರು ಹಾಕಿಕೊಳ್ಳತಕ್ಕಂಥ ಕಾರ್ಯಕ್ರಮಗಳನ್ನು ಜನತೆಗೆ ಮುಟ್ಟಿಸತಕ್ಕಂಥ ಕೆಲಸವನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತಾರೆ. ಅವರಿಗೆ ವಾಹನ ಸೌಕರ್ಯವನ್ನು ಕಲ್ಪಿಸಿಕೊಟ್ಟರೆ ಡಿವಿಜನ್ ಲೆವಲ್‌ನಲ್ಲಿ ವಸ್ತು ಪ್ರದರ್ಶನ ಮಾಡತಕ್ಕಂಥ ಕೆಲಸಕ್ಕೆ ಅನುಕೂಲವಾಗುತ್ತದೆ. ಮತ್ತು ಪ್ರತಿಯೊಂದು ಕಾರ್ಯಕ್ರಮವು ಜನತೆಗೆ ತಲುಪುವಂತೆ ಮಾಡುತ್ತಾರೆ. ಪತ್ರಿಕಾ ವರದಿಯೂ ಕೂಡ ಆಯಾ ಜಿಲ್ಲಾ ಮಟ್ಟದಲ್ಲಿ ಸೀಮಿತವಾಗಿ ಇರುವಂತೆ, ಆಯಾ ಜಿಲ್ಲೆಗೆ ಬೇಕಾದಂಥ ಪತ್ರಿಕಾ ಪ್ರಕಟಣೆಯನ್ನೂ ಕೂಡ ಕೊಡಲು ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಚಲನಚಿತ್ರಕ್ಕೆ ಪ್ರೋತ್ಸಾಹವನ್ನು ಕೊಡುವ ಬಗ್ಗೆ ಈಗಾಗಲೇ ಹೇಳಿದ್ದೇನೆ. ಸುಮಾರು ಇಪ್ಪತ್ತೈದಕ್ಕೂ ಮೇಲ್ಪಟ್ಟು ಫಿಲಮ್ ಪ್ರೊಡ್ಯೂಸರ್ಸ್ ಚಲನ ಚಿತ್ರಗಳನ್ನು ಮುಂದೆ ಬಂದಿರುತ್ತಾರೆ. ಆದರೆ ಅವರು ಹಣವಿಲ್ಲವೆಂದು ಹೇಳುತ್ತಿರುತ್ತಾರೆ. ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣದ ಸಹಾಯಮಾಡಲು ಸರ್ಕಾರದವರು ಮುಂದೆ ಬಂದು ಹೆಚ್ಚಿನ ಪ್ರಮಾಣದಲ್ಲಿ ಚಲನಚಿತ್ರಗಳ ತಯಾರಿಕೆಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನೂ ಹೇಳಲಿಕ್ಕೆ ಬಹಳಷ್ಟು ವಿಚಾರಗಳಿದ್ದರೂ ಸಮಯದ ಅಭಾವದಿಂದ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).—ಸನ್ಮಾನ್ಯ ಅಧ್ಯಕ್ಷರೇ ನಗರ ಅಭಿವೃದ್ಧಿ ಖಾತೆಯ ಬೇಡಿಕೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಶ್ರೀಮಾನ್ ನಗರಾಭಿವೃದ್ಧಿ ಮಂತ್ರಿಗಳು ಬಹಳ ಒಳ್ಳೆಯವರಿರುತ್ತಾರೆ. ಅವರ ಒಳ್ಳೆಯತನವನ್ನು ಕೆಲವು ಅಧಿಕಾರಿಗಳು, ಸೀಮಿತವಾದಂಥ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಆಪಾದನೆಯನ್ನು ಮಾಡುತ್ತೇನೆ. ಕರ್ನಾಟಕ ರಾಜ್ಯ ಅತಿ ಶ್ರೇಷ್ಠವಾದ ರಾಜ್ಯ. ಅದರಲ್ಲೂ ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರ ಬಹಳ ಸುಂದರವಾದ ನಗರವೆಂದು ಮತ್ತು ಒಳ್ಳೆಯ ವಾತಾವರಣವಿರತಕ್ಕಂಥ ಒಂದು ನಗರವೆಂಬ ಪ್ರಸಿದ್ಧಿ ಎಲ್ಲ ಕಡೆಯೂ ಮೂಡಿದೆ. ಇಂಥ ಸುಂದರವಾದ ನಗರದಲ್ಲಿರತಕ್ಕಂಥ ಬೆಂಗಳೂರು ಪ್ರಾಧಿಕಾರ, ನೀರು ಸರಬರಾಜು ಮಂಡಲಿ, ಒಳಚರಂಡಿ ಮಂಡಳಿ, ಇವೆಲ್ಲ ಮಂಡಳಿಗಳನ್ನು ಕೊಳಕು ಮಂಡಳಿಗಳೆಂದು ಹೆಸರನ್ನಿಟ್ಟರೆ ಅದು ತಪ್ಪಾಗಲಾರದೆಂದು ಹೇಳಬಹುದು. ಏತಕ್ಕೆಂದರೆ ನೀರು ಸರಬರಾಜು ಇಲ್ಲವೇ ಇಲ್ಲ. ಒಳಚರಂಡಿ ವ್ಯವಸ್ಥೆ ಅನೇಕ ಕಡೆ ಇಲ್ಲವೇ ಇಲ್ಲ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಗರದಲ್ಲಿಬಿನ್ನಿಪೇಟೆ ಕ್ಷೇತ್ರದಿಂದ ನಾನು ಆಯ್ಕೆಯಾಗಿ ಬಂದಿರುತ್ತೇನೆ. ಈ ಒಂದು ಕ್ಷೇತ್ರಕ್ಕೆ ಹಿಂದಿನ ಸರ್ಕಾರವಾಗಲಿ, ಈಗಿನ ಸರ್ಕಾರವಾಗಲಿ ಯಾವ ಒಂದು ಸೌಕರ್ಯಗಳನ್ನೂ ಒದಗಿಸಿಲ್ಲ. ಈಗಿರತಕ್ಕಂಥ ಸರ್ಕಾರವನ್ನೇ ತೆಗೆದುಕೊಂಡರೆ ಈ ಕ್ಷೇತ್ರದಿಂದ ಸುಮಾರು ೫-೬ ಜನ ಎಂಎಲ್‌ಎಗಳು ಆರಿಸಿಬಂದಿರುತ್ತಾರೆ. ಐದು ಜನ ಎಂ. ಎಲ್. ಎ, ಕ್ಷೇತ್ರವಾದ ಈ ಕ್ಷೇತ್ರದ ಬಿನ್ನಿಮಿಲ್ಲ್ ಊರು ಸಾವಿರಾರು ಜನಸಂಖ್ಯೆ ಇರತಕ್ಕಂಥ ಪ್ರದೇಶ. ಈ ಒಂದು ಊರನ್ನು ಬೆಂಗಳೂರು ನಗರಸಭೆಯವರು ಒಳಕ್ಕೆ ಸೇರಿಸಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ನಗರಸಭೆಯವರಾಗಲಿ, ಸರ್ಕಾರದವರೇ ಆಗಲಿ ಗಮನಕ್ಕೆ ತೆಗೆದುಕೊಂಡು ಮಾಡಿಲ್ಲ. ಅವರು ಮಾಡಿರತಕ್ಕಂಥ ಮಹಾಪಾಪವಾದರೂ ಏನು ಎಂದು ಕೇಳಬೇಕಾಗಿದೆ. ಈ ಕ್ಷೇತ್ರವು ಬಿನ್ನಿಮಿಲ್‌ನ ಆಡಳಿತ ಮಂಡಲಿಗೆ ಒಳಪಟ್ಟು ಗುಲಾಮತನದಲ್ಲಿಯೇ ಮುಂದುವರಿಯುತ್ತಿದೆ. ಬಿನ್ನಿಪೇಟೆ ಕ್ಷೇತ್ರ ಬೆಂಗಳೂರಿನಲ್ಲಿ ರಾಜಾಜಿನಗರವನ್ನು ಬಿಟ್ಟರೆ ಅತ್ಯಂತ ದೊಡ್ಡದಾದ ಕ್ಷೇತ್ರವಾಗಿರುತ್ತದೆ. ಎರಡು ಲಕ್ಷ ಜನಸಂಖ್ಯೆ ಹೊಂದಿದ್ದು ೯ ಡಿವಿಜನ್‌ಗಳನ್ನು ಹೊಂದಿರತಕ್ಕಂಥ ಕ್ಷೇತ್ರ. ಬಿನ್ನಿಪೇಟೆ ಎಂದರೆ ಒಂದು ಸಾವಿರಕ್ಕೂ ಮೇಲ್ಪಟ್ಟು ಮನೆಗಳು ಇರತಕ್ಕಂಥ ಪ್ರದೇಶವನ್ನು ನಮ್ಮ ನಗರಸಭೆಯವರು ವಹಿಸಿಕೊಳ್ಳಲಿಲ್ಲವೆಂದರೆ ಅವರೇನು ಅನಾಗರೀಕರೇ ಎಂದು ಕೇಳಬೇಕಾಗಿದೆ. ಅವರನ್ನು ಅನಾಗರೀಕರೆಂದು ಪರಿಗಣಿಸಿರತಕ್ಕಂಥದ್ದು ಬಹಳ ಆಶ್ಚರ್ಯದ ಸಂಗತಿಯಾಗಿದೆ. ಈವತ್ತು ಒಂದು ಸಾವಿರ ಮನೆಗಳಿಗೆ ನೀರಿನ ಸೌಕರ್ಯವಿಲ್ಲ. ಲೈಟಿಲ್ಲ, ರಸ್ತೆಗಳು ಇಲ್ಲ, ಮಣ್ಣಿನ ರಸ್ತೆಗಳಾಗಿದ್ದು ಒಂದೊಂದು ಮಂಡಿ ಉದ್ದ ಹಳ್ಳಕೊಳ್ಳಗಳಿರತಕ್ಕಂಥ ಪ್ರದೇಶವಾಗಿರುತ್ತದೆ. ಇಷ್ಟಾದರೂ ಸಹ ನಗರಸಭೆಯವರು ಈ ಕ್ಷೇತ್ರವನ್ನು ಗಣನಿಸದೆ ಅವರಿಗೆ ಬೇಕಾದ ನಾಗರೀಕ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲಾ ಎಂದು ಸೂಚಿಸುತ್ತದೆ.

ಸೌಲಭ್ಯಗಳನ್ನು ಕೊಡದೆ ಇರತಕ್ಕಂಥದ್ದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅವರ ಕಣ್ಣು ಇತ್ತ ಬೀಳಲೇ ಇಲ್ಲ. ಈಪತ್ತು ನಾನು ಎಲ್ಲ ಡಿವಿಜನ್‌ಗಳಿಗೂ ಭೇಟಿಕೊಟ್ಟು ಬಂದಿರುತ್ತೇನೆ. ಬಿನ್ನಿ ಮಿಲ್ ಆಡಳಿತ ಮಂಡಳಿಗೆ ಒಳಪಟ್ಟಿರುವ ಬಿನ್ನಿಪೇಟೆಗೆ ಈ ಎಲ್ಲ ಸೌಕರ್ಯಗಳು ಒದಗಿಸಿ ಕೊಟ್ಟಿದ್ದರೂ ಸುತ್ತಮುತ್ತ ಇರುವ ಬಿನ್ನಿಮಿಲ್ ಊರಿಗೆ ನಾಗರೀಕ ಸೌಲಭ್ಯಗಳು ಯಾವುದೂ ದೊರೆತಿಲ್ಲ. ಈ ಕ್ಷೇತ್ರಕ್ಕೆ ನೀರುಸರಬರಾಜು, ಒಳಚರಂಡಿ ವ್ಯವಸ್ಥೆ ರಸ್ತೆಗಳು ಮತ್ತು ಬೀದಿದೀಪಗಳ ವ್ಯವಸ್ಥೆಯನ್ನು ಸಂಬಂಧಪಟ್ಟ ಮಂಡಳಿಗಳು ಮಾಡದಿದ್ದರೆ ನಾವು ಇಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈ ಹಿಂದೆ ಪೌರಾಡಳಿತ ಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ಬಹಳ ದೀರ್ಘವಾಗಿ ಭಾಷಣ ಮಾಡಿದರು. ಅವರಿಗೆ ಈ ಬಿನ್ನಿಪೇಟೆ ಏತಕ್ಕೆ ಕಣ್ಣಿಗೆ ಬೀಳಲಿಲ್ಲವೋ ಗೊತ್ತಿಲ್ಲ. ಅವರು ಆ ಕೆಲಸ ಮಾಡಿದೆ, ಈ ಕೆಲಸ ಮಾಡಿದೆ ಎಂದೆಲ್ಲಾ ಹೇಳಿದರು. ಆದರೆ ಈ ಕಡೆ ಏತಕ್ಕೆ ಗಮನ ಕೊಡಲಿಲ್ಲ ? ಇದಕ್ಕಿಂತ ಹಿಂದೆ ಇದ್ದಂಥ ಮಂತ್ರಿಗಳೂ ಸಹ ಇದರ ಕಡೆ ಗಮನಹರಿಸಲಿಲ್ಲ. ಬಿನ್ನಿಪೇಟೆಗೆ ಸೇರಿದ ಕೆಂಪಾಪುರ, ಹರಿಕಂಟೆ ಹಾಗೂ ಪಾದರಾಯನಪುರ ಇಲ್ಲೆಲ್ಲಾ ರಾತ್ರಿ ಒಂದು ಗಂಟೆಯ ನಂತರ ನೀರು ಬರುತ್ತದೆ.

ಉಪಾಧ್ಯಕ್ಷರು.—ತಾವು ಮುಂದಿನ ವಿಷಯಕ್ಕೆ ಬನ್ನಿ.

ಶ್ರೀ ಜಿ. ನಾರಾಯಣಕುಮಾರ್.—ಈ ಬಿನ್ನಿಪೇಟೆಯನ್ನು ಇಲ್ಲಿಯವರೆಗೆ ನಗರಸಭೆಗೆ ವಹಿಸಿ ಕೊಳ್ಳದಿರಲು ಕಾರಣವೇನು ? ಅಲ್ಲಿ ವಾಸಮಾಡುವವರೂ ಸಹ ನಾಗರೀಕರು ಎಂದು ಏತಕ್ಕೆ ಪರಿಗಣಿಸಿಲ್ಲ ? ಅವರನ್ನು ಈಗಲಾದರೂ ನಗರಸಭೆ ವ್ಯಾಪ್ತಿಗೆ ಸೇರಿಸಿಕೊಳ್ಳದಿದ್ದರೆ ಆ ಜನರು ನೇಣುಹಾಕಿಕೊಳ್ಳುವುದೊಂದೇ ಮಾರ್ಗ ಇನ್ನು ಉಳಿದಿರುವುದು, ಬೆಂಗಳೂರು ಒಂದು ಸುಂದರ ವಾಗಿದೆ. ಇಲ್ಲಿನ ನಾಗರೀಕರಿಗೆ ಸಿಗುತ್ತಿರುವ ಎಲ್ಲ ಸೌಲಭ್ಯಗಳೂ ಸಹ ಬಿನ್ನಿಪೇಟೆಯ ಜನರಿಗೂ ಸಿಗಬೇಕು. ಈ ಬಿನ್ನಿಪೇಟೆ ಎಂಬುದು ಒಬ್ಬರು ಇಂಗ್ಲೀಷ್‌ನವರ ಹೆಸರು. ಇದು ಬಿನ್ನಿ ಮಿಲ್ ಮಾಲೀಕರ ಹೆಸರು. ಆದ್ದರಿಂದ ಈ ಹೆಸರನ್ನು ತೆಗೆದು ಅದಕ್ಕೆ ವಿಜಯನಗರ ಪೇಟೆ ಕ್ಷೇತ್ರ ಎಂದು ಹೆಸರಿಟ್ಟು ಅಲ್ಲಿನ ಜನರೂ ಸಹ ನಾಗರೀಕರಾಗಿ ಬಾಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲಿಯ ವರೆಗೆ ಈ ಕ್ಷೇತ್ರದಲ್ಲಿ ಯಾವ ಒಂದು ಕೆಲಸವೂ ಆಗಿಲ್ಲ, ಈ ಹಿಂದಿನ ಮಂತ್ರಿಗಳ ಮತ್ತು ಅಧ್ಯಕ್ಷರ ಬಗ್ಗೆ ಇಲ್ಲಿ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಅಲ್ಲಿ ನಾಗರೀಕ ಕೆಲಸಗಳಾಗ ಬೇಕೆಂಬುದೇ ನನ್ನ ವಾದ. ಈಗ ಅಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ೧೯೬೨–೬೩ ರಲ್ಲಿ ನಗರಸಭೆಯ ವರು ೩೨ ಹಳ್ಳಿಗಳನ್ನು ಈ ನಗರಸಭೆಗೆ ಸೇರಿಸಿಕೊಂಡರು. ಇದರಲ್ಲಿ ಬಿನ್ನಿಪೇಟೆಗೆ ಸೇರಿದ ೧೨ ಹಳ್ಳಿಗಳು ಸಹ ಸೇರಿವೆ. ದೀಪಾಂಜಲಿ, ಮಾರೇನಹಳ್ಳಿ, ಹತ್ತಿಗುಪ್ಪೆ, ಹೊಸಹಳ್ಳಿ, ತಿಮ್ಮೇನಹಳ್ಳಿ, ಕೆಂಪಾಪುರ, ನಾರಾಯಣಪುರ, ವಾಲ್ಮೀಕಿನಗರ, ಮುಂತಾದ ೧೨ ಹಳ್ಳಿಗಳು ನಗರಸಭೆಗೆ ಸೇರಿವೆ. ಆದರೆ ಇಲ್ಲಿಯವರೆಗೆ ಅಲ್ಲಿರುವಂತಹ ಹಳ್ಳಿಗಳನ್ನು ಮುಚ್ಚಿಸಿ ರಸ್ತೆಗಳನ್ನು ರಿಪೇರಿ ಮಾಡಿಸಿಲ್ಲ. ಸರಿಯಾದ ರಸ್ತೆಗಳಿಲ್ಲ, ದೀಪಗಳಂತೂ ಇಲ್ಲವೇ ಇಲ್ಲ ಅಲ್ಲಿ ವಾಸ ಮಾಡುವ ಹೆಣ್ಣು ಮಕ್ಕಳ ಅನು ಕೂಲಕ್ಕೆ ಕಕ್ಕಸ್‌ಗಳ ವ್ಯವಸ್ಥೆಯೂ ಸಹ ಇಲ್ಲ. ಬಿನ್ನಿಪೇಟೆ ಇಲ್ಲಿಯವರೆಗೆ ಏತಕ್ಕೆ ಇಷ್ಟು ಹಿಂದುಳಿ ದಿದೆಯೋ ಗೊತ್ತಿಲ್ಲ. ಈ ಜಾಗದಲ್ಲಿ ಶ್ರೀಮಂತರು ಹಾಗೂ ಮೇಲ್ಮಟ್ಟದ ಜನರು ಏನಾದರೂ ವಾಸ ವಾಗಿದ್ದರೆ ಈ ಪ್ರದೇಶ ಅಭಿವೃದ್ಧಿಯಾಗುತಿತ್ತು ಎಂದು ಕಾಣುತ್ತದೆ. ಆದರೆ ಇಲ್ಲಿ ಸಾಮಾನ್ಯ ಜನರು. ಬಡವರು ಹಾಗೂ ಕಾರ್ಮಿಕರೇ ವಾಸವಾಗಿರುವುದರಿಂದ ದೂರವಾಣಿ ವ್ಯವಸ್ಥೆಯಾಗಲೀ ಬೇರೆ ಇತರೇ ವ್ಯವಸ್ಥೆಗಳಾಗಲೀ ಇಲ್ಲ. ನಗರಸಭೆಯವರು ಯಾವ ವ್ಯವಸ್ಥೆಯನ್ನೂ ಮಾಡದೆ ಕಡೆಗಣಿಸಿದ್ದಾರೆ. ಈ ಒಳಚರಂಡಿ ಮತ್ತು ನೀರು ಸರಬರಾಜು ಮಂಡಲಿಯನ್ನು ಸಹ ಕಿತ್ತು ಹಾಕುವುದು ಒಳ್ಳೆಯದು. ಏಕೆಂದರೆ, ಇದರಿಂದ ಏನೂ ಪ್ರಯೋಜನವಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಸಹ ಅಲ್ಲಿ ಏನೂ ಕೆಲಸಗಳಾಗುತ್ತಿಲ್ಲ. ಎಲ್ಲ ಅವ್ಯವಸ್ಥೆ ಯಿಂದ ಕೂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಆ ರೀತಿ ಹೇಳಿದರೆ ಮಾನ್ಯ ಬೈರೇಗೌಡರ ಗತಿ ಏನಾಗ ಬೇಕು ?

ಶ್ರೀ ಸಿ. ಬೈರೇಗೌಡ.—ಅವರು ಈಗ ಬೆಂಗಳೂರು ಒಳಚರಂಡಿ ಮತ್ತು ನೀರು ಸರಬರಾಜು ಮಂಡಲಿ ವಿಚಾರ ಹೇಳುತ್ತಿದ್ದಾರೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡಿನ ಬಗ್ಗೆ ಅವರು ಹೇಳುತ್ತಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಈ ಮಂಡಲಿಯಲ್ಲಿ ಸರಿಯಾದಂಥ ಅಧಿಕಾರಿಗಳಿಲ್ಲ, ಇಲ್ಲಿನ ಅಧಿಕಾರಿಗಳು ಮಾರ್ವಾಡಿ ತರಹ ವರ್ತನೆ ಮಾಡುತ್ತಾರೆ. ಹತ್ತುಪೈಸೆ ಬಡ್ಡಿ ಕೊಡದಿದ್ದರೆ ಅಡವಿಟ್ಟ ಬೆಳ್ಳಿಯ ಸಾಮಾನು ಇಲ್ಲವೇ ಷರಟನ್ನು ವಾಪಸ್ ಕೊಡುವುದಿಲ್ಲವೆಂದು ಮಾರ್ವಾಡಿಗಳು ಯಾವರೀತಿ ಹೇಳುತ್ತಾರೋ ಅದೇರೀತಿ ಇಲ್ಲಿನ ಅಧಿಕಾರಿಗಳು ಹೇಳುತ್ತಾರೆ. ನಗರಸಭೆಯವರು ಇವರಿಗೆ ಕೊಡುವಂತಹ ಹಣ ಎಲ್ಲಿ ಹೋಗುತ್ತದೆ, ಯಾರಿಗೆ ಸೇರುತ್ತದೆ ಎಂಬುದಕ್ಕೆ ಲೆಕ್ಕವಿಲ್ಲ, ಪಕ್ಕವಿಲ್ಲ, ಎಲ್ಲವೂ ಅವ್ಯವಸ್ಥೆಯಿಂದ ಕೂಡಿದೆ. ಕಾವೇರಿ ಯೋಜನೆಯ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ಲೂಟಿಯಾಗುತ್ತಿದೆ. ಯಾರೂ ಇದರ ಕಡೆ ಗಮನ ಹರಿಸುತ್ತಿಲ್ಲ. ಕಾವೇರಿ ಎರಡನೇ ಹಂತದ ಕೆಲಸ ೦೭ ಕಿಲೋಮೀಟರ್‌ವರೆಗೆ ಆಗಿದೆ ಎಂದು ಮಾನ್ಯ ಧರ್ಮಸಿಂಗ್ ಅವರು ಹೇಳಿದರು. ಹತ್ತಾರು ವರ್ಷಗಳಿಂದ ಕೈಕೊಂಡ ಈ ಯೋಜನೆಯಿಂದಲೂ ಸಹ ಬೆಂಗಳೂರಿನ ನಾಗರೀಕರಿಗೆ ಬೇಕಾಗುವಷ್ಟು ನೀರು ಸಿಗುತ್ತಿಲ್ಲ. ಈ ಮೊದಲು ಬೆಂಗಳೂರು ನಗರಕ್ಕೆ ಹೆಸರಘಟ್ಟ ಹಾಗೂ ಟಾಣವಾರದಿಂದ ಸಾಕಷ್ಟು ನೀರು ಸರಬರಾಜಾಗುತಿತ್ತು, ಆದರೆ ಕಾವೇರಿ ಯೋಜನೆಯಿಂದ ಬೆಂಗಳೂರು ಜನರಿಗೆ ಸಾಕಷ್ಟು ನೀರು ಸಿಗುತ್ತಿಲ್ಲ. ಇದಕ್ಕೆ ಕೋಟ್ಯಾಂತರ ರೂಪಾಯಿಗಳು ಮಾತ್ರ ಖರ್ಚಾಗುತ್ತಿದೆ ಈ ಯೋಜನೆಯಿಂದ ಶ್ರೀ ಮುಗ್ದಂ ಅವರು ಬೇಕಾದಷ್ಟು ಹಣ ಮಾಡಿಕೊಂಡರು. ಹತ್ತುತಲೆಮಾರಿನವರೆಗೆ ಖರ್ಚು ಮಾಡಿದರೂ ಮುಗಿಯುವುದಿಲ್ಲ, ಅಷ್ಟು ದುಡ್ಡುಮಾಡಿಕೊಂಡಿದ್ದಾರೆ. ಈ ರೀತಿ ಒಂದು ಕಡೆ ಹಣ ದುರುಪಯೋಗವಾಗುತ್ತಿದ್ದರೆ, ಮತ್ತೊಂದು ಕಡೆ ಇದರ ತೆರಿಗೆ ಹೊರೆಯನ್ನು ಬೆಂಗಳೂರು ನಾಗರೀಕರ ಮೇಲೆ ಹೊರಿಸುತ್ತಿದ್ದಾರೆ. ಈ ಮಾತನ್ನು ಬಹಳ ನೋವಿನಿಂದ ಹೇಳಬೇಕಾಗಿದೆ. ಬಿನ್ನಿಪೇಟೆಯ ಜನರು ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆಂದು ನಾನು ಅನೇಕ ಸಲ ಮಾನ್ಯ ಮಂತ್ರಿಗಳ ಹತ್ತಿರ ಅರಿಕೆ ಮಾಡಿಕೊಂಡಾಗ ಮಾನ್ಯ ಮಂತ್ರಿಗಳು ಜಲಮಂಡಲಿ ಅಧಿಕಾರಿಗಳಿಗೆ ಇದನ್ನು ಸರಿಪಡಿಸುವಂತೆ ಹೇಳಿದರು. ಆದರೂ ಸಹ ಅಲ್ಲಿನ ಅಧಿಕಾರಿಗಳು ಅಲ್ಲಿ ಹೋಗಿ ನೋಡಿಲ್ಲ. ನಾವು ಕೇಳಿದಾಗಲೆಲ್ಲಾ ಕಾಗೆಪುರಾಣ ಹೇಳುತ್ತಾರೆ. ಈಗ ಹೋಗುತ್ತೇವೆ, ಬೆಳಿಗ್ಗೆ ಹೋಗುತ್ತೇವೆ, ಆಮೇಲೆ ನೋಡುತ್ತೇವೆಂದು ಹೇಳುತ್ತಾರೆಯೇ ಹೊರತು ಇನ್ನೂ ಅಲ್ಲಿಗೆ ಹೋಗಿ ಸರಿಮಾಡಿಲ್ಲ. ಅಲ್ಲಿ ೨೫ ವರ್ಷಗಳ ಹಿಂದೆ ಹಾಕಿದಂಥ ಪೈಪ್ ಇದೆ. ಅದರಲ್ಲಿ ನೀರು ಸರಿಯಾಗಿ ಬರುವುದಿಲ್ಲ. ಸತ್ತವರ ಬಾಯಿಗೆ ನೀರನ್ನು ಬಿಟ್ಟಂತೆ ಸಣ್ಣದಾಗಿ ಬರುತ್ತದೆ, ಅದೂ ರಾತ್ರಿ ಹೊತ್ತಿನಲ್ಲಿ ಅಲ್ಲಿ ನೀರುಬರುತ್ತದೆ. ಆಗ ನೀರು ಹಿಡಿಯಲು ಹೋಗುವಂತಹ ಹೆಂಗಸರು ಜಗಳವಾಡುವುದೂ ಸಹ ಉಂಟು. ಎಷ್ಟೋ ಸಲ ನೀರಿನ ಜಗಳದಲ್ಲಿ ಕೆಲವರು ಪ್ರಾಣ ಕೂಡಕಳೆದು ಕೊಂಡಿದ್ದಾರೆ.

೬-ಪಿ.ಎಂ.

ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಎಲ್ಲವೂ ಕೂಡ ಸರ್ವನಾಶವಾಗಿದೆ. ಹಿಂದೆ ಮಾಡಿದಂತಹ ಅನ್ಯಾಯವನ್ನು ಜನತಾ ಸರ್ಕಾರ ಮಾಡಬಾರದು, ಹಿಂದಿನ ಸರ್ಕಾರದ ನೀತಿ ಏನಿತ್ತು ಅದನ್ನು ಅನುಸರಿಸಬಾರದು. ಜನತಾ ಸರ್ಕಾರದ ಬಗ್ಗೆ ಜನಗಳಿಗೆ ಅಭಿಮಾನವಿದೆ. ಹಿಂದಿನವರಿಗೆ ಬಂದಂಥ ಕೆಟ್ಟ ಹೆಸರು ನಮಗೂ ಬರುತ್ತದೆಂದು ಈ ಮಾತನ್ನು ಬಹಳ ಕಳಕಳಿಯಿಂದ ಹೇಳುತ್ತೇನೆ. ಬಿನ್ನಿಪೇಟೆ ಕ್ಷೇತ್ರದಲ್ಲಿ ಕುಡಿಯುವ ನೀರು ಸರಬರಾಜು ಇಲ್ಲ, ರಸ್ತೆಗಳು ಇಲ್ಲ. ದೀಪಗಳು ಇಲ್ಲ ಇತರೆ ಸೌಲಭ್ಯಗಳೂ ಇಲ್ಲ ಇವುಗಳನ್ನು ಒದಗಿಸಿ ಕೊಡಬೇಕು. ಬಿನ್ನಿಪೇಟೆ ಎಂಬ ಹೆಸರನ್ನು ಬದಲಾಯಿಸಿ ವಿಜಯನಗರವೆಂದು ಹೆಸರಿಡಬೇಕು. ವಿಜಯನಗರ ಕ್ಷೇತ್ರವೆಂದು ಪರಿಗಣಿಸಿ ಬಿನ್ನಿಪೇಟೆ ಕ್ಷೇತ್ರವನ್ನು ನಗರಾಡಳಿತಕ್ಕೆ ಒಳಪಡಿಸಬೇಕು. ಬಿನ್ನಿಮಿಲ್ಲಿನ ಆಡಳಿತವರ್ಗ ನಡೆಸುತ್ತಿರುವ ದಬ್ಬಾಳಿಕೆಯನ್ನು ನಿಲ್ಲಿಸಿ ಸರ್ಕಾರ ಅಲ್ಲಿನ ಕಾರ್ಮಿಕರಿಗೆ ಸೌಲಭ್ಯ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು.

ಉಪಾಧ್ಯಕ್ಷರು.—ತಾವು ತಮ್ಮ ಭಾಷಣವನ್ನು ಮುಕ್ತಾಯ ಮಾಡದಿದ್ದರೆ ನಾನು ಬೇರೆ ಸದಸ್ಯರನ್ನು ಕರೆಯುತ್ತೇನೆ.

ಶ್ರೀ ಎಚ್. ಗಂಗಾಧರನ್.—ಬಿನ್ನಿಪೇಟೆಯನ್ನು ಕುರಿಪೇಟೆ ಎಂದು ಇಟ್ಟರೆ ಬಹಳ ಅನುಕೂಲ.

ಶ್ರೀ ಜಿ. ನಾರಾಯಣಕುಮಾರ್.—ಇವತ್ತು ಜನಗಳು ಹಿಂದಿನ ಹಾಗೆ ಅಲ್ಲ, ಅವರೇ ಶಾಸಕರನ್ನು ಧೈರ್ಯವಾಗಿ ಕೇಳುತ್ತಾರೆ. ನನ್ನ ಕ್ಷೇತ್ರದ ೭೦೦ ಜನ ೨ ವರ್ಷದಿಂದ ೧೫೫ ದಿವಸಗಳ ದಿನಗೂಲಿಯ ಮೇಲೆ ನಗರಸಭೆಯಲ್ಲಿ ಕೆಲಸ ಮಾಡುತ್ತಿದ್ದಾರೆ

ಉಪಾಧ್ಯಕ್ಷರು.—ಈ ವಿಷಯಗಳನ್ನು ಮಾನ್ಯ ಮಂತ್ರಿಗಳ ಕಛೇರಿಗೆ ಹೋಗಿ ಕೇಳಿ.

ಶ್ರೀ ಜಿ. ನಾರಾಯಣಕುಮಾರ್.—ವಿಷಯ ಹೇಳುತ್ತೇನೆ, ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿಯ ಮೇಲೆ ೨೦೦ ಜನರು ಇದ್ದಾರೆ. ಹಿಂದೆ ಇದ್ದ ಸರ್ಕಾರ ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿ ಕನ್ನಡಿಗರಿಗೆ ಮಾಡಬಾರದ ಅನ್ಯಾಯ ಮಾಡಿದೆ. ಏನೇನು ಮಾಡಿದ್ದಾರೋ ನನಗೆ ಗೊತ್ತಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರಿಗೆ ಗೊತ್ತು. ನಮ್ಮ ಮಾನ್ಯ ಮಂತ್ರಿಗಳಿಗೆ ನಾನು ಈಗಾಗಲೇ ಮನವಿಗಳನ್ನು ಸಲ್ಲಿಸಿದ್ದೇನೆ. ೨೦೦ ಜನರ ಪರಿಸ್ಥಿತಿ ದುಸ್ಥಿತಿಯಾಗಿದೆ. ಅವರುಗಳಿಗೆ ೩೦ ವರ್ಷಗಳಾಗಿವೆ ೧೫ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಬಹಳ ವರ್ಷಗಳಿಂದ ಕೆಲಸ ಮಾಡತಕ್ಕವರನ್ನು ಇವತ್ತಿನವರೆಗೂ ಖಾಯಂ ಮಾಡಿಲ್ಲ. ಇವತ್ತಿನ ಧಾರಣೆಗಳಲ್ಲಿ ದಿನಗೂಲಿ ಮಾಡತಕ್ಕವರು ಜೀವನವನ್ನು ಯಾವ ರೀತಿ ಮಾಡಬೇಕು? ಅವರನ್ನು ಖಾಯಂ ಮಾಡತಕ್ಕ ಒಂದು ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಷ್ಟಪಟ್ಟು ಕೆಲಸ ಮಾಡತಕ್ಕಂತಹ ಕೆಲಸಗಾರರನ್ನು ಖಾಯಂ ಮಾಡದೇ ಇರತಕ್ಕ ಸರ್ಕಾರಗಳು ಇವೆಯೋ ಎಂದು ಈ ಸಂದರ್ಭದಲ್ಲಿ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ದಿನಗೂಲಿಯ ಮೇಲೆ ಕೆಲಸ ಮಾಡತಕ್ಕ ಪೌರ ಕಾರ್ಮಿಕರನ್ನು ಖಾಯಂ ಮಾಡಬೇಕು. ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡತಕ್ಕ ೩೫ ಸಾವಿರ ಜನಗಳಲ್ಲಿ ೧೦ ಸಾವಿರ ಜನಗಳನ್ನು ಖಾಯಂ ಮಾಡಲಾಗುತ್ತದೆಂದು ಪ್ರಕಟಣೆ ಹೊರಡಿಸಿದ್ದಾರೆ, ಅದು ಬಹಳ ಸ್ವಾಗತಾರ್ಹವಾದ ವಿಷಯ. ಇಲ್ಲಿ ಕೇವಲ ೨೦೦ ಜನರನ್ನು ಖಾಯಂ ಮಾಡಿಲ್ಲ. ಇಂತಹ ವಿಷಯಗಳಿಗೆ ಎಡೆಕೊಡಬೇಡಿ, ಅವರನ್ನು ಖಂಡಿತವಾಗಿಯೂ ಖಾಯಂ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ೬೦೦ ಜನ ದಿನಗೂಲಿಯ ಮೇಲೆ ಕೆಲಸ ಮಾಡುವವರು ಇದ್ದಾರೆ. ಅವರ ಸಂಘಕ್ಕೆ ನಾನು ಅಧ್ಯಕ್ಷ ಆದ್ದರಿಂದ ವಿಷಯ ಹೇಳುತ್ತೇನೆ. ವಿಷಯ ಹೇಳದಿದ್ದರೆ ಅವರು ನಮ್ಮನ್ನು ಬೀದಿಯಲ್ಲಿ ಹರಾಜು ಹಾಕುತ್ತಾರೆ.

ಉಪಾಧ್ಯಕ್ಷರು.—ನೀವು ಭಾಷಣ ಮಾಡಿದರೆ ಆಗುವುದಿಲ್ಲ, ಕೆಲಸ ಮಾಡಬೇಕು.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಪುನಃ ಏನಾದರೂ ಚುನಾವಣೆಯಾದರೆ ಮತ್ತೆ ಬಿನ್ನಿಪೇಟೆ ಕ್ಷೇತ್ರವನ್ನು ಭದ್ರಪಡಿಸಿಕೊಳ್ಳುವುದಕೋಸ್ಕರ ಹೇಳುತ್ತಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಚುನಾವಣೆ ವಿಷಯ ಬೇರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕನ್ನಡಿಗರು ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರು, ರಾಜಕೀಯ ಪಿತೂರಿಗಳ ಮಾತಿಗೆ ಕಿವಿಕೊಡದೆ ೬೦೦ ಜನ ಕನ್ನಡದವರು ಏನಿದ್ದಾರೆ ಅವರನ್ನು ಖಾಯಂ ಮಾಡಬೇಕು. ಹತ್ತಾರು ವರ್ಷಗಳಿಂದ ಅಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕವರಿಗೆ ಬೇರೆ ಉದ್ಯೋಗಕ್ಕೆ ಸೇರುವ ವಯಸ್ಸು ಮೀರಿದೆ ಅವರಿಗೆ ಬೇರೆ ಉದ್ಯೋಗ ಸಿಗುವುದಿಲ್ಲ. ಅವರನ್ನು ಖಾಯಂ ಮಾಡಬೇಕೆನ್ನುವ ಮನವಿಯನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸುತ್ತಿದ್ದೇನೆ.

ನೆರೆ ರಾಜ್ಯಗಳಿಂದ ಬೆಂಗಳೂರು ನಗರಕ್ಕೆ ವಲಸೆ ಬರುವುದರಿಂದ ಇವತ್ತು ಬೆಂಗಳೂರು ನಗರ ಜನಸಂಖ್ಯೆ ೩೦ ಲಕ್ಷ ಆಗಿದೆ. ಇಂದು ವಲಸೆ ಬರತಕ್ಕ ಪ್ರವೃತ್ತಿ ಜಾಸ್ತಿಯಾಗಿದೆ. ಸುಂದರವಾದ ನಗರವನ್ನು ಹಾಳು ಮಾಡುತ್ತಿದ್ದಾರೆ, ಪ್ರತಿದಿನ ರೈಲು ಬಸ್ಸುಗಳಲ್ಲಿ ಸಹಸ್ರಾರು ಜನಗಳು ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ಬರುತ್ತಿದ್ದಾರೆ. ಇದನ್ನು ತಡಗಟ್ಟಲಿಕ್ಕೆ ನಮ್ಮ ಸರ್ಕಾರ ಯೋಚನೆ ಮಾಡಬೇಕು. ಹಿಂದಿನ ಸರ್ಕಾರ ತಮ್ಮ ಅಧಿಕಾರ ಗದ್ದುಗೆಯನ್ನು ಮುಗಿಸಿ ಹೊರಡು ಹೋಗಿದ್ದಾರೆ. ಬೆಂಗಳೂರು ನಗರಕ್ಕೆ ನೆರೆ ರಾಜ್ಯಗಳಿಂದ ಬಂದಂತಹ ಜನರು ಇಲ್ಲಿ ಡೇರೆ ಹಾಕಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸುತ್ತಿದ್ದಾರೆ. ಬೆಂಗಳೂರು ನಗರ ಜನಸಂಖ್ಯೆ ೩೦ ಲಕ್ಷದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಅಂತಹ ಒಂದು ಸಂದರ್ಭ ಒದಗುತ್ತಿದೆ. ಇವತ್ತು ಸರ್ಕಾರ ಇದರ ಕಡೆಗೆ ತೀವ್ರ ಗಮನಹರಿಸಬೇಕು. ಬೆಂಗಳೂರು ನಗರ ಕೆಲವು ಸಮಯದ ನಂತರ ಬೇರೆಯವರ ಕೈಗೆ ಹೋಗುತ್ತದೆ ಎನ್ನುವ ಭಯ ತಮ್ಮಲ್ಲಿ ಇರಬೇಕು ಎನ್ನತಕ್ಕ ಮಾತನ್ನು ಕಳಕಳಿಯಿಂದ ಹೇಳುತ್ತಿದ್ದೇನೆ. ಇದನ್ನು ಯಾವ ರೀತಿ ಬಂದೋಬಸ್ತು ಮಾಡಬೇಕು ಎನ್ನುವುದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಪಿ. ರಾಮಚಂದ್ರರಾವ್.—ಬಾಂಬೆಯಲ್ಲೂ ಸಹ ಕನ್ನಡಿಗರು ಇದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಬಾಂಬೆಯಲ್ಲಿ ಕನ್ನಡಿಗರಿಗೆ ಮರಾಠಿಗರು ಎಣ್ಣೆ ಎರಚಿದ್ದಾರೆ. ಗೋವಾದಲ್ಲಿ ಹಿಡಿದುಕೊಂಡು ಹೊಡೆದು ಬೆಂಕಿ ಹಚ್ಚಿದ್ದಾರೆ. ಬಾಂಬೆಯಲ್ಲಿ ಮತ್ತು ಗೋವಾದಲ್ಲಿ ಕನ್ನಡಿಗರಿಗೆ ಮಾಡಬಾರದನ್ನು ಮಾಡಿದ್ದಾರೆ. ಆದರೆ ಬೆಂಗಳೂರು ನಗರಕ್ಕೆ ಬಂದಂಥ ನೆರೆ ರಾಜ್ಯಗಳವರನ್ನು ಕನ್ನಡಿಗರು ಸ್ವಾಗತ ಮಾಡುತ್ತಾರೆ. ಕನ್ನಡಿಗರ ಇತಿಹಾಸ ಬೆ ರೆ ಬೆ ರೆ ರಾಜ್ಯಗಳಿಂದ ಬರುವಷ್ಟು ಜನ ಕನ್ನಡಿಗರು ಬೇರೆ ರಾಜ್ಯಗಳಿಗೆ ಹೋಗುವುದಿಲ್ಲ. ಆದರೆ ಅವರ ಮೇಲೆ ಅಲ್ಲಿ ದೌರ್ಜನ್ಯ ನಡೆಸುತ್ತಾರೆ. ತಮಿಳುನಾಡಿನಿಂದ ದೊಡ್ಡ ರೈಲಿನಲ್ಲಿ ಎಷ್ಟು ಜನ ಬರುತ್ತಾರೆ ನಿಮಗೆ ಗೊತ್ತೆ ? ಆ ರೀತಿ ಬರುವವರಿಗೆ ಎಂ.ಜಿ.ಆರ್. ಅವರು ೨ ಸಾವಿರ ರೂಪಾಯಿ ಕೊಡುತ್ತಾರೆ.

ಶ್ರೀ ಪಿ.ಡಿ. ಗೋವಿಂದರಾಜ್.—ತಾವು ಎಲ್ಲಿಂದ ಬಂದವರು ?

ಶ್ರೀ ಜಿ. ನಾರಾಯಣಕುಮಾರ್.—ನಾನು ಬೆಂಗಳೂರು ನಗರದವನೇ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊದಲು ಆಂಧ್ರದಿಂದ ಬಂದವರನ್ನು ಓಡಿಸಬೇಕು, ಆಮೇಲೆ ಮದ್ರಾಸಿನಿಂದ ಬಂದವರನ್ನು ಓಡಿಸಬೇಕು.

ಶ್ರೀ ಜಿ. ನಾರಾಯಣಕುಮಾರ್.—ಒಂದು ಕಡೆ ಸಣ್ಣ ವರ್ಗ, ಇನ್ನೊಂದು ವರ್ಗ ನಮ್ಮ ರಾಜ್ಯದಲ್ಲಿ ರಾಜಕೀಯ ಪ್ರತಿಷ್ಠೆ ಬೆಳೆಸಿ ತಮ್ಮ ತೀಟೆ ತೀರಿಸಿಕೊಳ್ಳುವಂತಹ ವರ್ಗ. ನಮ್ಮ ದೇಶಕ್ಕೆ ಬಂದಮೇಲೆ ಕನ್ನಡಿಗರ ಜೊತೆ ಸಹಬಾಳ್ವೆಯಿಂದ ಇರಬೇಕಾಗುತ್ತದೆ ಎನ್ನುವ ಮಾತನ್ನು ಹೇಳಬೇಕಾಗಿದೆ.

ಉಪಾಧ್ಯಕ್ಷರು.—ಯಾವುದಕ್ಕೂ ಒಂದು ಸಂಯಮ ಇರುತ್ತದೆ. ನೀವು ಕುಳಿತುಕೊಳ್ಳಿ, ನೀವು ಒಳ್ಳೆಯ ಮಾತಿಗೆ ಬಗ್ಗುವವರು ಅಲ್ಲವೇ ಅಲ್ಲ.

ಶ್ರೀ ಜಿ. ನಾರಾಯಣಕುಮಾರ್.—ನನಗೆ ಇನ್ನೊಂದು ಎರಡು ನಿಮಿಷ ಅವಕಾಶ ಕೊಡಬೇಕು.

ಶ್ರೀ ಬಿ ಎಸ್. ಯಡಿಯೂರಪ್ಪ.—ಸನ್ಮಾನ್ಯ ಉಪಾಧ್ಯಕ್ಷರೇ............

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಉಪಾಧ್ಯಕ್ಷರೆ ನಾನು ಮಾತನಾಡುವುದಿಲ್ಲ, ಮಾನ್ಯ ನಾರಾಯಣ ಕುಮಾರ್‌ರವರನ್ನು ಕೇಳಿಕೊಳ್ಳುತ್ತೇನೆ. ಪಾಕಿಸ್ಥಾನ ಮತ್ತು ಭಾರತ ಕ್ರಿಕೆಟ್ ತಂಡಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಈಗ ಉಪಹಾರ ಇಟ್ಟುಕೊಂಡಿದ್ದಾರೆ. ಆದ್ದರಿಂದ ಬೇಗ ಮುಗಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತು ಕರ್ನಾಟಕ ರಾಜ್ಯದ ಜನಗಳಿಗೆ ಶಾಸಕರ ಬಗ್ಗೆ ಅಗೌರವ ಬರಬಾರದು. ನಾವು ಬೆಳ್ಳಿಗ್ಗೆ ೧೦ ಗಂಟೆಗೆ ಇಲ್ಲಿಗೆ ಬಂದಿದ್ದೇವೆ. ಪತ್ರಿಕೆಗಳಲ್ಲಿ ಇಂತಿಷ್ಟು ಶಾಸಕರು ಇಲ್ಲವೆಂದು ಬರೆದರೆ ನಮಗೆ ಅಗೌರವ ಬರುತ್ತದೆ. ಆದ್ದರಿಂದ ದಯಮಾಡಿ ಸಭೆಯನ್ನು ೬ ಗಂಟೆಗೆ ಮುಗಿಸಬೇಕು. ನಾಳೆ ಬೆಳ್ಳಿಗ್ಗೆ ಚರ್ಚೆ ಮಾಡಿ ಮಂತ್ರಿಗಳು ಉತ್ತರ ಕೊಡಲಿ, ದಯಮಾಡಿ ಈಗ ಸಭೆಯನ್ನು ಮುಂದೂಡಿ. ಈ ರೀತಿ ಮಾಡಿದರೆ ಸದಸ್ಯರಿಗೆ ಒಳ್ಳೆಯ ಹೆಸರು ಬರುವುದಿಲ್ಲ,

ಉಪಾಧ್ಯಕ್ಷರು.—ಮಾನ್ಯ ನಾರಾಯಣಕುಮಾರ್‌ರವರೇ ದಯಮಾಡಿ ತಾವು ಕುಳಿತುಕೊಳ್ಳಿ ನಿಮಗೆ ಪುನಃ ಅವಕಾಶ ಕೊಡುವುದಕ್ಕೆ ಅಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್ (ಬಿನ್ನಿಪೇಟೆ).—ಎರಡು ನಿಮಿಷ ಮಾತನಾಡಬೇಕೆಂದು ತಾವು ಶಾಲೆಯಲ್ಲಿ ಉಪಾಧ್ಯಾಯರು ಮಕ್ಕಳಿಗೆ ಹೇಳಿದ ಹಾಗೆ ಹೇಳಿದರೆ ಹೇಗೆ?

ಉಪಾಧ್ಯಕ್ಷರು.—ನೀವು ಅರ್ಥಮಾಡಿಕೊಂಡು ಮಾತನಾಡಬೇಕು. ಒಂದು ನಿಮಿಷ ಅಂತ ಕೊಟ್ಟರೆ ನೀವು ಎರಡು ನಿಮಿಷ ಮಾತನಾಡುತ್ತೀರಿ. ಬೇಗ ನಿಮ್ಮ ಮಾತನ್ನು ಮುಗಿಸಬೇಕು.

ಶ್ರೀ ಜಿ. ನಾರಾಯಣಕುಮಾರ್.—ತಾವು ನಮ್ಮ ಅಧ್ಯಕ್ಷರು, ತಾವೇ ಹೀಗೆ ಹೇಳಿದರೆ ಹೇಗೆ? ಮಾನ್ಯ ಅಧ್ಯಕ್ಷರೇ, ನಾಲ್ಕು ದಿವಸಗಳ ಹಿಂದೆ ನಡೆದಂತಹ ಒಂದು ದುರಂತದಲ್ಲಿ ನೂರಾರು ಜನರು

ಸಿಕ್ಕಿಹಾಕಿಕೊಂಡು, ಇದುವರೆಗೆ ಹತ್ತಾರು ಜನರು ಸಾವಿಗೀಡಾಗಿದ್ದಾರೆ. ಈ ಮಹಾ ದುರಂತಕ್ಕೆ ನಾನು ಸಂತಾಪ ವ್ಯಕ್ತಪಡಿಸುತ್ತಿದ್ದೇನೆ. ಇದಕ್ಕೆ ಕಾರಣ ಹಿಂದೆ ಇದ್ದಂತಹ ಮಂತ್ರಿಪರ್ಯರು ಅವರು ಮಾಡಿದ ಮಹಾ ಪಾಪದ ಕಾರಣವಾಗಿ ಈ ದುರಂತ ಸಂಭವಿಸಿದೆ. ಬಹುಮಹಡಿ ಕಟ್ಟಡಕ್ಕೆ ಅವಕಾಶ ಕೊಡದೇ ಇದ್ದಿದ್ದರೆ ಈ ದುರಂತ ಇವತ್ತು ಸಂಭವಿಸುತ್ತಿರಲಿಲ್ಲ. ಈ ದುರಂತಕ್ಕೆ ಕಾರಣರು ಶ್ರೀಮಾನ್ ಧರ್ಮಸಿಂಗ್ ಅವರು ಬಹುಮಹಡಿಗಳ ಕಟ್ಟಡಕ್ಕೆ ಪರವಾನಗಿ ಕೊಡುವುದಿಲ್ಲ ವೆಂದು ಮಾಡುವುದಕ್ಕೆ ಅವರಿಗೆ ಆಗಲಿಲ್ಲ. ಅದರಿಂದಾಗಿ ಲಕ್ಷಾಂತರ ರೂಪಾಯಿಗಳ ದುರ್ವ್ಯವಹಾರ ನಡೆದಿದೆ ಹಾಗೆಯೇ ಕಪಾಲಿ ಚಿತ್ರಮಂದಿರದ ಎದುರುಗಡೆ ಒಂದು ದೊಡ್ಡ ಕಟ್ಟಡ ಇದೆ. ಇನ್ನೆರಡು ದಿನಗಳಲ್ಲಿ ಅದು ಬಿದ್ದು ಹೋಗುವ ಸಂದರ್ಭ ಇದೆ. ಗಾಂಧಿನಗರದಲ್ಲಿ ೨೦–೧೫ ಅಡಿ ಜಾಗದಲ್ಲಿ ಆರು ಅಂತಸ್ತಿನ ಮಹಡಿ ಕಟ್ಟಡ ಇದೆ. ಅದು ಇನ್ನು ಮೂರು ದಿನಗಳಲ್ಲಿ ಬಿದ್ದು ಹೋಗುತ್ತದೆ. ಇಂತಹ ಅವ್ಯವಹಾರಗಳಿಂದಾಗಿ ನಗರಸಭೆ ಲೂಟಿಯಾಗಿ ಹೋಯಿತು. ಸತ್ತಂಥವರು ಅವರ ಊರಿನವರೇ. ಗುಲ್ಬರ್ಗಾ ನಗರದಿಂದ ಬಂದವರು ಇವತ್ತು ಸತ್ತು ಸ್ವರ್ಗ ಸೇರಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆ ಕಟ್ಟಡದ ಮಾಲೀಕ ಗಂಗಾರಾಮುನನ್ನು ಅಂದರೆ, ಯಾರು ಈ ದುರಂತಕ್ಕೆ ಕಾರಣರಾಗಿದ್ದಾರೋ ಅವರನ್ನು ಅಂದರೆ*** ಮೈಸೂರು ಬ್ಯಾಂಕ್ ಚೌಕದಲ್ಲಿ ನೇಣುಕಂಬಕ್ಕೆ ಏರಿಸಬೇಕು. ಅವರು ಅಂತಹ ದೇಶದ್ರೋಹ ಕೆಲಸ ಮಾಡಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್.— ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಮಾನ್ಯ ಸದಸ್ಯರು ''ಅಯೋಗ್ಯ'' ಎನ್ನುವ ಪದವನ್ನು ಏನು ಬಳಸಿದ್ದಾರೆ......

ಉಪಾಧ್ಯಕ್ಷರು.— ನಾರಾಯಣಕುಮಾರ್ ತಾವು ಕುಳಿತುಕೊಳ್ಳಿ. ಇವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.— ''ಅಯೋಗ್ಯ'' ಎನ್ನತಕ್ಕಂಥ ಮಾತು ಅಯೋಗ್ಯವಾದುದಲ್ಲ. ಅದು ಕನ್ನಡದ ಶಬ್ದ......

ಉಪಾಧ್ಯಕ್ಷರು.—ನೀವು ಮೊದಲು ಕುಳಿತುಕೊಳ್ಳಿ.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ಸದಸ್ಯರು ಈ 'ಅಯೋಗ್ಯ' ಎನ್ನುವ ಶಬ್ದವನ್ನು ಇಲ್ಲಿ ಪ್ರಯೋಗ ಮಾಡಿದ್ದಾರೆ. ಅವರು ಏನು ಅಯೋಗ್ಯರು ಎಂದು ಅವರಿಗೆ ಗೊತ್ತಿದೆಯೆ? ಈ ಶಬ್ದ ಇಲ್ಲಿ ಕಡತಕ್ಕೆ ಹೋದರೆ ಜನ ಏನಂದಾರು ನಮ್ಮನ್ನು? ಈಗ ತಾವು ಅದನ್ನು ತೆಗೆದುಹಾಕದೇ ಇದ್ದಲ್ಲಿ......

ಶ್ರೀ ಜಿ. ನಾರಾಯಣಕುಮಾರ್.— ''ಅಯೋಗ್ಯ'' ಪದ ಅಸಾಧ್ಯವಾದುದಲ್ಲ. ಅದು ಕ್ರಮಬದ್ಧವಾಗಿಯೇ ಇದೆ.

ಶ್ರೀ ಕೆ.ಎಚ್. ರಂಗನಾಥ್.—ಸ್ವಾಮಿ ಅವರು ಏನು ಅಪರಾಧ ಮಾಡಿದ್ದಾರೆ? ನ್ಯಾಯಾಂಗ ತನಿಖೆಗೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುವಾಗ, ಅವರಿಗೆ ಸಹಕಾರ ಕೊಡತಕ್ಕಂಥ ಇವರಿಗೆ ಮುಖ್ಯಮಂತ್ರಿಯವರ ಬಗ್ಗೆಯೇ ನಂಬಿಕೆ ಇದ್ದ ಹಾಗೆ ಕಾಣುವುದಿಲ್ಲ. ಈ ರೀತಿಯಾಗಿ ಮಾತನಾಡಬಹುದೇ ಹೇಗೆ? ಇದನ್ನು ತಾವು ಕಡತದಿಂದ ತೆಗೆಯಬೇಕು. ಮಾನ್ಯ ಸದಸ್ಯರಿಗೆ ಇಂತಹ ಪದಗಳನ್ನು ಬಳಸಬಾರದು ಎಂದು ತಾವು ಆದೇಶವನ್ನು ಕೊಡಬೇಕು.

ಉಪಾಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ ಇಂತಹ ಪದಗಳನ್ನು ಬಳಸಬಾರದು ಎಂದು.

ಶ್ರೀ ಕೆ.ಎಚ್. ರಂಗನಾಥ್.—ಒಂದು ದಿವಸ ತಾವು ಹೇಳುವುದು, ಇವತ್ತು ಮಾತ್ರ ಯಥಾ ಪ್ರಕಾರ ಮಾತನಾಡುತ್ತಾ ಹೋದರೆ ಏನು ಮಾಡಬೇಕು? I insist for a ruling also.

DEPUTY SPEAKER.—I have alrcdy told him.

SRI K.H. RANGANATH.—We are not here to play to the gallery......

***Expunged as ordered by the chair.

ಶ್ರೀ ಜಿ. ನಾರಾಯಣಕುಮಾರ್.—ಹತ್ತಾರು ಜನ ಕನ್ನಡದ ಜನ ಇವತ್ತು ದಿವಂಗತರಾಗಿದ್ದಾರೆ. ರಾತ್ರಿ ಹಗಲು ಕಷ್ಟಪಟ್ಟು ಕನ್ನಡಿಗರು ಅವರ ಹೆಣಗಳನ್ನು ಎತ್ತಬೇಕಾಗಿದೆ. ಎಷ್ಟು ದುಃಖದಿಂದ ನಾನು ಮಾತನಾಡುತ್ತಿದ್ದೇನೆ. ವಿರೋಧ ಪಕ್ಷದವರಿಗೂ ಕೂಡ ಇದರ ಬಗ್ಗೆ ಅರಿವು ಇರಬೇಕು, ಕಳಕಳಿ ಇರಬೇಕು. ಅಲ್ಲಿ ಕನ್ನಡ ಜನರ ಸ್ಮಶಾನ ಹೋರಾಟ ನಡೆಯುತ್ತಿದೆ ಇವರು ಮಾತ್ರ......

(INTERRUPTIONS)

ಶ್ರೀ ಕೆ.ಎಚ್. ರಂಗನಾಥ್.—ಅವರು ಹೇಳಿದ್ದೆಲ್ಲಾ ನಡವಳಿಕೆಯಲ್ಲಿ ಹೋಗುವುದಾದರೆ......

ಉಪಾಧ್ಯಕ್ಷರು.—ಇದನ್ನೆಲ್ಲಾ ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಉಪಾಧ್ಯಕ್ಷರೇ, ಇನ್ನೂ ನಾಲ್ಕಾರು ಜನ ಮಾತನಾಡುವವರು ಇದ್ದಾರೆ. ಅವರಿಗೆ ಮಾತನಾಡಲಿಕ್ಕೆ ಬೆಳಿಗ್ಗೆ ಅವಕಾಶ ಮಾಡಿಕೊಡಿ. ಸದಸ್ಯರ ಅಭಿಪ್ರಾಯವನ್ನು ತಾವು ಕೇಳಬೇಕು. ಇನ್ನೂ ಹಲವಾರು ಜನ ಮಾತನಾಡುವವರು ಇದ್ದಾರೆ. ನಾಳೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ತಾನೆ?

ಉಪಾಧ್ಯಕ್ಷರು.—ಇನ್ನು ಎರಡು–ಮೂರು ಜನ ಇದ್ದಾರೆ ಅವರಿಗೆ ನಾಳೆ ಅವಕಾಶ ಮಾಡಿಕೊಡುತ್ತೇನೆ. ನಾಗನಗೌಡ ಅವರೇ, ತಾವು ಐದು ನಿಮಿಷಗಳಲ್ಲಿ ನಿಮ್ಮ ಮಾತು ಮುಗಿಸಬೇಕು.

ಶ್ರೀ ಎಚ್. ನಾಗನಗೌಡ (ಕುರುಗೋಡು).—ಅಧ್ಯಕ್ಷರೇ, ಈ ಬೇಡಿಕೆಯನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಜಯನಗರ ಸಾಮ್ರಾಜ್ಯ ಅಳಿದು ಹೋಗಿರತಕ್ಕಂಥ ನಮ್ಮ ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಕೊಟ್ಟಿರತಕ್ಕ ಆದ್ಯತೆಯನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಬ್ರಿಟಿಷ್ ಇತಿಹಾಸಕಾರನೊಬ್ಬ ಹೀಗೆ ಹೇಳಿದ್ದಾನೆ—

"The last great Hindu Empire that flourished in India was Vijayanagar"

ಇಂತಹ ವಿಜಯನಗರ ಸಾಮ್ರಾಜ್ಯ ಇದ್ದ ಇಲ್ಲಿ ಇವತ್ತಿನ ಪರಿಸ್ಥಿತಿ ಹೇಗಿದೆ? ಇಂತಹ ವಿಜಯನಗರ ಯೂರೋಪ್‌ನಲ್ಲಿ ಅಥವಾ ಬೇರೆ ಇನ್ಯಾವ ದೇಶದಲ್ಲೇ ಇದ್ದಿದ್ದರೆ, ಅವರು ಇದರಿಂದಲೇ ಕೋಟಿಗಟ್ಟಲೆ ಫಾರಿನ್ ಎಕ್ಸ್‌ಚೇಂಜ್ ಸಂಪಾದನೆ ಮಾಡಿಕೊಳ್ಳುತ್ತಿದ್ದರು, ಅಂತಹ ಸಂದರ್ಭ ಇತ್ತು. ಆದರೆ ದುರಾದೃಷ್ಟವಶಾತ್, ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಇವತ್ತು ಇದಕ್ಕೆ ಬಹಳ ಕಡಿಮೆ ಆದ್ಯತೆ ಕೊಟ್ಟಿದ್ದಾರೆ. ಆದಕಾರಣ, ನಾನು ಈ ಸಭೆಯ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಎರಡನೆಯದಾಗಿ, ಬಳ್ಳಾರಿಯಲ್ಲಿ ಆಕಾಶವಾಣಿ ಕೇಂದ್ರ ಬರಬೇಕಾಗಿತ್ತು. ಕೇಂದ್ರ ಸರ್ಕಾರವನ್ನು ನಾವು ಕೇಳಿ ಕೊಂಡಾಗ ಹಣವಿಲ್ಲದ ಕಾರಣ ಸದ್ಯಕ್ಕೆ ಆಕಾಶವಾಣಿ ಕೇಂದ್ರ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ನಾಲ್ಕೈದು ತಿಂಗಳ ಹಿಂದೆ ನಾಗರಕೋಯಿಲ್‌ನಲ್ಲಿ ಮತ್ತು ತಿರುಚೆಂಡೂರ್‌ನಲ್ಲಿ ಕೊಟ್ಟಿದ್ದಾರೆ. ಅಲ್ಲಿ ಕೊಟ್ಟಾಗ ಕೇಳಿದ್ದಕ್ಕೆ ಲಿಂಗ್ವಿಸ್ಟಿಕ್ ಮೈನಾರಿಟಿ ಅಲ್ಲಿ ಇರುವುದರಿಂದ ಅಲ್ಲಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಬಳ್ಳಾರಿ ಮೀಡಿಯಂ ವೇವ್ ಸ್ಟೇಷನ್‌ಗೆ ಎರಡು ನೂರು ಕಿಲೋಮೀಟರ್ ದೂರ ಇದೆ. ಭದ್ರಾವತಿ, ಗುಲ್ಬರ್ಗ, ಧಾರವಾಡವಾಗಲೀ, ಎರಡು ನೂರು ಕಿಲೋಮೀಟರ್ ದೂರ ಇದೆ. ಇಲ್ಲಿ ಕೂಡ ಲಿಂಗ್ವಿಸ್ಟಿಕ್ ಮೈನಾರಿಟಿ ಜನ ಬಹಳ ಸಂಖ್ಯೆಯಲ್ಲಿ ಇದ್ದಾರೆ. ತಾವು ದಯಮಾಡಿ ಇಲ್ಲಿ ಆಕಾಶವಾಣಿ ನಿಲಯವನ್ನು ಒದಗಿಸಿಕೊಡುವ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ನಗರಾಭಿವೃದ್ಧಿ ಬಗ್ಗೆ ಎರಡು ಮಾತು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದರ ಬಗ್ಗೆ ಹೇಳುವುದಾದರೆ ತಾನು ಒಂದು ವರ್ಷ ಕಾಲ ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇದು ೧೯೭೭ರಲ್ಲಿ ಅನುಷ್ಠಾನಕ್ಕೆ ಬಂದಿದ್ದರೂ ಕೂಡ, ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಿದ್ದು ೧೯೮೧ನೇ ಇಸವಿ ನವೆಂಬರ್ ೨ನೇ ತಾರೀಖು. ರಾಜಿನಾಮೆ ನೀಡಿದ್ದು ಡಿಸೆಂಬರ್ ೯ನೇ ತಾರೀಖಿಗೆ ಹದಿಮೂರು ತಿಂಗಳ ಅವಧಿಯಲ್ಲಿ ಐದು ಸ್ಕೀಂಗಳನ್ನು ಮಾಡಿದ್ದೆನು. ಚಾರ್ಜ್ ತೆಗೆದುಕೊಂಡಾಗ ನಮ್ಮಲ್ಲಿದ್ದುದು ಒಂದೂವರೆ ಲಕ್ಷ. ಚಾರ್ಜ್ ಹ್ಯಾಂಡ್ ಓವರ್ ಮಾಡಿದಾಗ ಇದ್ದುದು ೧೫ ಲಕ್ಷ. ಐದು ಸ್ಕೀಂಗಳ ಜೊತೆಗೆ ಕೆಲವು ಸಾಮಾಜಿಕ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದೆವು. ಬಳ್ಳಾರಿಯಲ್ಲಿ ಕಟ್ಟಿಗೆ ಅಭಾವ ಇದ್ದ

ಕಾರಣ ಎಲೆಕ್ಟ್ರಿಕ್ ಕ್ರಿಮೇಟೋರಿಯಂ ಮಾಡಬೇಕೆಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸ್ಕೀಮನ್ನು ಮಾಡಿದ್ದೆವು. ಈಗ ತಮ್ಮ ಸರ್ಕಾರ ಬಂದಿದೆ. ಈ ಸ್ಕೀಮನ್ನು ಮುಂದುವರೆಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮದರ್ ತೆರೇಸಾ ಅವರಿಗೆ ಲೆಪ್ರಸಿ ರಿಹೆಬಿಲಿಟೇಷನ್ ಸೆಂಟರ್‌ನ್ನು ದಕ್ಷಿಣ ಭಾರತದಲ್ಲಿ ದೊಡ್ಡದಾಗಿ ಮಾಡಬೇಕೆಂದು ಆಹ್ವಾನ ಬಂದಾಗ ಅವರಿಗೆ ಸಿಐಟಿಬಿ ಪರವಾಗಿ ನಲ್ವತ್ತು ಎಕರೆ ಜಮೀನನ್ನು ದಾನವಾಗಿ ಕೊಡಲು ಯೋಚಿಸಿದ್ದೆವು. ಇದರ ಬಗ್ಗೆ ಒಂದು ನಿರ್ಣಯ ಕೂಡ ಅಂಗೀಕಾರ ಮಾಡಿದ್ದೇವೆ. ಈಗ ತಮ್ಮ ಸರ್ಕಾರ ಬಂದಿದೆ. ಇದನ್ನು ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. ಈ ಇಲಾಖೆಯಲ್ಲಿ ಇರತಕ್ಕಂಥ ಅಕ್ವಿಸಿಶನ್ ಆ್ಯಕ್ಟ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ತಾವು ಸೀಡ್ ಮನಿ ಕೊಡುವುದಿಲ್ಲ, ಸ್ಕೀಮ್ ಮಾಡಬೇಕೆಂದು ಹೇಳುತ್ತೀರಿ. ಸ್ಕೀಮ್ ಮಾಡುವಾಗ ಬೇಕಾಗಿರತಕ್ಕ ಹಣವನ್ನು ಕೊಡಬೇಕು. ಅಸಿಸ್ಟೆಂಟ್ ಕಮಿಶನರ್ ಆಫೀಸ್‌ನಲ್ಲಿ ಅಕ್ವಿಸಿಶನ್ ಆಫೀಸರ್ ಹಣವನ್ನು ಎಲ್ಲಿಂದ ತರುತ್ತಾರೆ ಹೇಳಿ ? ಈ ಅಕ್ವಿಸಿಶನ್‌ನಲ್ಲಿ ೪೪೧–೫೫೧ ಸೆಕ್ಷನ್‌ನಲ್ಲಿ ಹಾಗುವುದರೊಳಗಾಗಿ ಹಣವನ್ನು ಡಿಪಾಸಿಟ್ ಮಾಡಬೇಕು. ಇಲ್ಲದಿದ್ದರೆ ಅಸಿಸ್ಟೆಂಟ್ ಕಮಿಷನರ್ ಹೇಳುತ್ತಾರೆ–ದಾವಣಗೆರೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಆಫೀಸ್‌ನ್ನು ಅಟ್ಯಾಚ್ ಮಾಡಿದ್ದೇವೆ. ಇಲ್ಲಿ ಕೂಡ ಮಾಡತಕ್ಕಂಥ ಸಂದರ್ಭ ಇದೆ. ಹಣ ಕೊಡದಿದ್ದರೆ ಕಷ್ಟವಾಗುವುದು. ತಾವು ಹೇಳುತ್ತೀರಿ 'ಸೀಡ್ ಮನಿ ಕೊಡುವುದಿಲ್ಲ' ಎಂದು. ಲ್ಯಾಂಡ್ ಅಕ್ವಿಸಿಶನ್ ಮಾಡಿದರೆ ಹಣ ಹೊಂದಿಕೆ ಮಾಡುವುದಕ್ಕೆ ಅಪ್ಲಿಕೇಷನ್ ಕಾಲ್‌ಫಾರ್ ಮಾಡಬೇಕಾಗುತ್ತದೆ. ಆಗ ತಾವು ಹೇಳುತ್ತೀರಿ 'ಯೂ ಆರ್ ವಯಲೇಟಿಂಗ್ ದಿ ಆ್ಯಕ್ಟ್' ಎಂದು. ಆ್ಯಕ್ಟನ್ನು ವಯಲೇಟ್ ಮಾಡಿದರೆ ಹಣ ಕೊಡಲಿಕ್ಕೆ ಸಾಧ್ಯವಿಲ್ಲ. ಹಣವನ್ನು ತಾವು ಕೊಡುವುದಿಲ್ಲ. ದಯಮಾಡಿ ಇದನ್ನು ಪರಿಶೀಲನೆ ಮಾಡಿ ಆ್ಯಕ್ಟನ್ನು ಅಮೆಂಡ್ ಮಾಡಿ ಅಥವಾ ಸೀಡ್ ಮನಿಯನ್ನು ಜಾಸ್ತಿ ಮಾಡಿ. ಅದೇ ರೀತಿಯಾಗಿ ಈಗ ಗ್ರಾಮಮಟ್ಟದಲ್ಲಿ ಏನಾದರೂ ಕೆಲಸ ಆಗಬೇಕಾದರೆ ಮುನಿಸಿಪಾಲಿಟಿ, ಟೌನ್ ಪ್ಲಾನಿಂಗ್ ಮತ್ತು ಸಿಐಟಿಬಿ ಹೀಗೆ ಮೂರು ಏಜೆನ್ಸಿಗಳ ಹತ್ತಿರ ಹೋಗಬೇಕಾಗಿದೆ. ಇವತ್ತಿನ ಈ ಪರಿಸ್ಥಿತಿಯಲ್ಲಿ ಟೌನ್ ಪ್ಲಾನಿಂಗ್ ಇರುವುದು ಹೊಸಪೇಟೆಯಲ್ಲಿ. ಈಗ ಸಿಐಟಿಬಿಯ ಕಾರ್ಯಾಚರಣೆ ಸ್ಥಗಿತವಾಗಿದೆ. ಮುನಿಸಿಪಾಲಿಟಿಯನ್ನು ಒಂದು ಸೆಂಟ್ರಲ್ ಏಜೆನ್ಸಿಯಾಗಿ ಮಾಡಿ ಅಥವಾ ಸಿಂಗಲ್ ಏಜೆನ್ಸಿಗೆ ಪವರ್ ಡೆಲಿಗೇಟ್ ಮಾಡಬೇಕು. ಇದರಿಂದ ಮಾತ್ರ ಜನರಿಗೆ ಅನುಕೂಲವಾಗುತ್ತದೆ. ಈಗ ತಾವು ಹೇಳಿದ್ದೀರಿ–'ನೋ ಪ್ರಾಫಿಟ್ ನೋ ಲಾಸ್'ನಲ್ಲಿ ಈ ಸಿಐಟಿಬಿ ಮಾಡಬೇಕೆಂದು. ಇದನ್ನು ನಾನು ವಿರೋಧಿಸುತ್ತೇನೆ. ಇವತ್ತು ಸಿಐಟಿಬಿ ದುಡಿದರೆ ಮಾತ್ರ ಏನಾದರೂ ಕಲ್ಯಾಣ ಕಾರ್ಯ ಮಾಡಲು ಸಾಧ್ಯವಿದೆ. ಇದನ್ನು ನಾನು ಐಸಿಟಿಬಿ ಚೇರ್ಮನ್ ಆಗಿ ಮಾಡಿ ತೋರಿಸಿದ್ದೇನೆ. ಈಗ ಮೂರು ನೂರು ಪ್ಲಾಟ್‌ಗಳನ್ನು ಮಾಡಿ, ರಸ್ತೆ, ನೀರು, ಲೈಟು ಕೊಡಬೇಕೆಂದು ಮಾಡಿದ್ದು ಈವತ್ತು ಡೆಪ್ಯುಟಿ ಕಮಿಷನರ್ ಅವರ ಸ್ವಾಧೀನದಲ್ಲಿದೆ. ಅಲಾಟ್‌ಮೆಂಟ್ ವಿಷಯ ಇನ್ನೂ ಇತ್ಯರ್ಥವಾಗಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ ಸಿಐಟಿಬಿಯವರು ದುಡಿಯಲಿಕ್ಕೆ ಆಸ್ಪದ ಕೊಡಿ. ಅದು ಬಿಟ್ಟು 'ನೋ ಪ್ರಾಫಿಟ್ ನೋ ಲಾಸ್' ಎಂದು ಹೇಳುವುದು ಸರಿಯಲ್ಲ. ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಸಿಐಟಿಬಿಗಳನ್ನು ಅಧ್ಯಯನ ಮಾಡಿ, ಲೋಪದೋಷಗಳು ಏನಿವೆ, ಅವುಗಳನ್ನು ನಿವಾರಿಸಲಿಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕು, ಮತ್ತು ನಾನು ಹೇಳಿದ ವಿಷಯಗಳ ಬಗ್ಗೆ ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಸದನವನ್ನು ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಮುಂದೂಡಲಾಗಿದೆ. ಅನೇಕ ಸದಸ್ಯರು ಮಾತನಾಡಬೇಕಾಗಿದೆ. ಒಂಭತ್ತು ಗಂಟೆಗೆ ಬಂದರೆ ಮಾತ್ರ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲಾಗುವುದು.

(The House adjourned at Twenty-Four minutes past Six of the Clock to meet again at Nine of the Clock on Friday, the 16th September, 1983)